ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ರೂ. 28/-
ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAPU PRAPANCHA

ಸಂಪುಟ-04 • ಸಂಚಿಕೆ-10 • ಮಾರ್ಚ್ 2023





ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

G20 ಭಾರತ 2023 INDIA

ಕರ್ನಾಟಕ ಅರಣ್ಯ ಇಲಾಖೆ

75 ಸ್ವಾತಂತ್ರ್ಯದ ಅಮೃತ ಮಹೋತ್ಸವ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯ ಮಂತ್ರಿಗಳು

ನೀರಿಗಾಗಿ
ನಾಳೆಗಾಗಿ
ನಮ್ಮ ಅಸ್ತಿತ್ವಕ್ಕಾಗಿ

ಅರಣ್ಯ

2022-23ನೇ ಸಾಲಿನ ಸಾಧನೆಗಳು

ಸುಸ್ಥಿರ ಭವಿಷ್ಯಕ್ಕಾಗಿ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ





ನಮ್ಮ ಉತ್ತಮ ಭವಿಷ್ಯಕ್ಕಾಗಿ
ಬಿತ್ತೋತ್ಸವ 2022
5-12 ಜೂನ್

2744
ಕಾರ್ಯಕ್ರಮಗಳು

2.5 ಕೋಟಿ
ಬೀಜ ಬಿತ್ತನೆ

1.5 ಲಕ್ಷ ಸಾರ್ವಜನಿಕರು
ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು



ವನಮಹೋತ್ಸವ 2022

563
ಕಾರ್ಯಕ್ರಮಗಳು

1.8 ಲಕ್ಷ
ಸಸಿ ನೆಡುವಿಕೆ

40000 ಸಾರ್ವಜನಿಕರು
ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು



68ನೇ ವನ್ಯಜೀವಿ ಸಪ್ತಾಹ 2022
2ನೇ ಅಕ್ಟೋಬರ್ - 8ನೇ ಅಕ್ಟೋಬರ್







- ರಾಜ್ಯದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಭಿವೃದ್ಧಿ ಚಟುವಟಿಕೆಗಳಿಂದ ಆಗಿರುವ ಹಾನಿಯನ್ನು ಸರಿದೂಗಿಸಲು ರೂ.100 ಕೋಟಿಗಳ **'ಹಸಿರು ಆಯವ್ಯಯವನ್ನು'** ತಯಾರಿಸಿ, ಇದರಡಿ ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.
- 46,434 ಹೆ. ಬ್ಲಾಕ್ ಮತ್ತು 1032 ಕಿ.ಮೀ. **ರಸ್ತೆಬದಿ ನೆಡುತೋಪುಗಳನ್ನು** 2.85 ಕೋಟಿ ಸಸಿಗಳನ್ನು ನೆಡುವ ಮೂಲಕ ಬೆಳೆಸಲಾಗಿದೆ.
- **ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ** 15,121 ರೈತರಿಗೆ ಕೃಷಿ ಅರಣ್ಯ ಉತ್ತೇಜನಕ್ಕಾಗಿ ರೂ. 10 ಕೋಟಿ ಪ್ರೋತ್ಸಾಹ ಧನ ವಿತರಿಸಲಾಗಿದೆ.
- ಎಸ್.ಸಿ.ಪಿ. ಅಡಿಯಲ್ಲಿ 3339 ಫಲಾನುಭವಿಗಳಿಗೆ ಮತ್ತು ಟಿ.ಎಸ್.ಪಿ ಅಡಿಯಲ್ಲಿ 3139 ಫಲಾನುಭವಿಗಳಿಗೆ **ಸಸಿ, ಬಿದರು ಮತ್ತು LPG ಸಿಲಿಂಡರ್ ರೀಫಿಲ್** ಇತ್ಯಾದಿ ಕಾರ್ಯಕ್ರಮಗಳ ಅನುಗುಣವಾಗಿ ಒದಗಿಸಲಾಗಿದೆ.

- ಮಾನವ - ವನ್ಯಪ್ರಾಣಿಗಳ ಸಂಘರ್ಷ ತಡೆಗಟ್ಟಲು **5 ಆನೆ ಕಾರ್ಯಪಡೆಗಳು** ಮತ್ತು **ಒಂದು ಚಿರತೆ ಕಾರ್ಯಪಡೆಯನ್ನು** ಸ್ಥಾಪಿಸಲಾಗಿದೆ.
- ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಅಂಗವಿಕಲತೆ, ಆಸ್ತಿನಷ್ಟ ಮತ್ತು ಬೆಳೆ ಹಾನಿ ಪ್ರಕರಣಗಳಲ್ಲಿ ಈಗಾಗಲೆ ನೀಡಲಾಗುತ್ತಿದ್ದ ಪರಿಹಾರಧನವನ್ನು ಪರಿಷ್ಕರಿಸಿ **ದ್ವಿಗುಣ ಗೊಳಿಸಲಾಗಿದೆ.**
- ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ **ಬಿತ್ತೋತ್ಸವ, ವನಮಹೋತ್ಸವ, ಚಿಣ್ಣರವನದರ್ಶನ** ಶಿಬಿರಗಳು ಮತ್ತು **ವನ್ಯಜೀವಿ ಸಪ್ತಾಹ** ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.
- **ನರೇಗಾ** ಯೋಜನೆಯಲ್ಲಿ **61,399 ಲಕ್ಷ** ಮಾನವ ದಿನಗಳು ಉತ್ಪಾದಿಸಲಾಗಿದೆ.
- ಶ್ರೀಗಂಧ ಕೃಷಿಯನ್ನು ಪ್ರೇರೇಪಿಸಲು ಹೊಸ **ಶ್ರೀಗಂಧ ನೀತಿ**ಯನ್ನು ತರಲಾಗಿದೆ.
- 9677.47 ಹೆಕ್ಟೇರ್ ಪ್ರದೇಶವನ್ನು **ಮೀಸಲು ಅರಣ್ಯವನ್ನಾಗಿ** ಮತ್ತು 41.62 ಹೆಕ್ಟೇರ್ ಪ್ರದೇಶವನ್ನು **ರಕ್ಷಿತ ಅರಣ್ಯವನ್ನಾಗಿ** ಘೋಷಿಸಿದೆ.
- **3 ವನ್ಯಜೀವಿಧಾಮಗಳು**- ಉತ್ತರೆಗುಡ್ಡ, ಅರಸೀಕೆರೆ ಕರಡಿ ಧಾಮ, ಬಂಕಾಪುರ ತೋಳ ಧಾಮ ಮತ್ತು **3 ಮೀಸಲು ಸಂರಕ್ಷಿತ** ಪ್ರದೇಶ ಬೋನಲ್ ಕೆರೆ ಪಕ್ಷಿ ಧಾಮ, ಚಿಕ್ಕಸಂಗಮ ಪಕ್ಷಿ ಧಾಮ, ಮುಂಡಿಗೆ ಕೆರೆ ಪಕ್ಷಿ ಧಾಮಗಳನ್ನು ಅಧಿಸೂಚಿಸಿದೆ.
- **E**-ಪರಿಹಾರ ಮತ್ತು **E**-ಸಸ್ಯಕ್ಷೇತ್ರ ಗಳಂತಹ ತಂತ್ರಜ್ಞಾನದ ಮತ್ತು ಅಪ್ಲಿಕೇಶನ್‌ಗಳ ಮುಖಾಂತರ ಇಲಾಖೆಯ ಅನೇಕ ಪ್ರಕ್ರಿಯೆಗಳನ್ನು ಸರಳಗೊಳಿಸಿಲಾಗಿದೆ.
- ಮೊದಲ **G20 ಪರಿಸರ ಮತ್ತು ಹವಾಮಾನ ಸುಸ್ಥಿರತೆ ಕಾರ್ಯ ಗುಂಪಿನ (ECWG)** ಸಭೆಯನ್ನು ಬೆಂಗಳೂರಿನಲ್ಲಿ ಫೆಬ್ರವರಿ 9 ರಿಂದ ಫೆಬ್ರವರಿ 11 ರವರೆಗೆ ಯಶಸ್ವಿಯಾಗಿ ನಡೆಸಲಾಗಿದೆ.



ಜಾವೆದ್ ಅಖ್ತರ್, ಭಾ.ಅ.ಸೇ
ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ

ರಾಜ್ ಕಿಶೋರ್ ಸಿಂಗ್, ಭಾ.ಅ.ಸೇ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು)

ಅರಣ್ಯ ಸಹಾಯವಾಣಿ: 1926

/aranya.kfd /aranya.kfd @aranya_kfd aranya_kfd

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ "ಪ್ರಯತ್ನಿಸಿ ಶ್ರಮಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ರೂ. 28/- BAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-04 • ಸಂಚಿಕೆ-10 • ಮಾರ್ಚ್ 2023

ಫೆಬ್ರವರಿ 2023 ರ ಸಂಚಿಕೆಯಲ್ಲಿ form IV Rule 8 ರ ಘೋಷಣಾ ಪತ್ರದಲ್ಲಿ ಪತ್ರಿಕೆಯ ಹೆಸರು ಮುದ್ರಣ ದೋಷದಿಂದ 'ವಾರ್ತಾ ಜನಪದ' ಎಂದು ತಪ್ಪಾಗಿ ಮುದ್ರಿತವಾಗಿದೆ. ಅದನ್ನು 'ಬಾಪು ಪ್ರಪಂಚ' ಎಂದು ತಿದ್ದುಪಡಿ ಮಾಡಲಾಗಿದೆ.

ಮುಖ ರಕ್ಷಾಪುಟ ಚಿತ್ರ : ಎಲ್ ಎನ್ ತಲ್ಲೂರ್ ಅವರ 'ಎರೇಸರ್ ಫ್ರೊ' ಕರಗುತ್ತಿರುವ ಗಾಂಧಿ. ಕಂಚಿನ ಕಲಾಕೃತಿ.
ಹಿಂದಿನ ರಕ್ಷಾಪುಟ : ಎಂ ಎಸ್ ಮೂರ್ತಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ
BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಇಂದಿರಾ ಕೃಷ್ಣಪ್ಪ

Editor :
Indira Krishnappa


ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com


Printed at :
CreativeGeekZ
Yadhava College Road,
Madhavanagara, Bengaluru - 560001
Ph : +91 80 40927049
E-mail : mail@creativegeekz.com

Design : **Ujwal Creations**, Bangalore



ಗಾಂಧೀಜಿ : ಧರ್ಮ ಮತ್ತು ನೈಸರ್ಗಿಕ ತತ್ವಗಳು

– ಅರವಿಂದ ಚೊಕ್ಕಾಡಿ



ಧರ್ಮ ಎನ್ನುವ ಪದಕ್ಕೆ ವ್ಯಾಪಕ ಅರ್ಥವಿದೆ. ಮಿತ್ರ ಧರ್ಮ. ಪುತ್ರ ಧರ್ಮ. ಪತಿ ಧರ್ಮ. ಸತಿ ಧರ್ಮ. ಗುರು ಧರ್ಮ. ಶಿಷ್ಯ ಧರ್ಮ. ಹೀಗೆ ಧರ್ಮ ಎನ್ನುವುದಕ್ಕೆ ಸಂಸ್ಥಾ ರೂಪಿಯಾದ ಅರ್ಥಕ್ಕಿಂತ ಭಿನ್ನವಾದ ವೈಯಕ್ತಿಕ ನೆಲೆಯ ವ್ಯಾಪಕ ಅರ್ಥವಿದೆ. ಜವಾಹರ ಲಾಲ್ ನೆಹರೂ ಅವರು ಡಿಸ್ಕವರಿ ಆಫ್ ಇಂಡಿಯಾದಲ್ಲಿ ಧರ್ಮ ಎನ್ನುವುದು ಕರ್ತವ್ಯ ಬದ್ಧತೆಯನ್ನು ಸೂಚಿಸುತ್ತದೆ ಎನ್ನುತ್ತಾರೆ.

ಮಹಾತ್ಮಾ ಗಾಂಧಿಯವರು ಧರ್ಮವನ್ನು ಸಾಂಸ್ಥಿಕ ನೆಲೆಯಲ್ಲೂ ಗ್ರಹಿಸಿದ್ದಾರೆ. ವೈಯಕ್ತಿಕ ನೆಲೆಯಲ್ಲೂ ಗ್ರಹಿಸಿದ್ದಾರೆ. ತನ್ನನ್ನು ತಾನು ಸನಾತನಿ ಹಿಂದೂ ಎಂದೇ ಕರೆದುಕೊಂಡ ಮಹಾತ್ಮಾ ಗಾಂಧಿ ಕೆಲವು ಸಂದರ್ಭಗಳಲ್ಲಿ ಧರ್ಮದ ಸಾಂಸ್ಥಿಕ ರೂಪಕ್ಕೇ ಕಠೋರವಾದ ನಿಷ್ಠೆಯನ್ನು ಪ್ರದರ್ಶಿಸಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಕಸ್ತೂರ್ಬಾ ಅವರಿಗೆ ತೀವ್ರ ರಕ್ತಸ್ರಾವವಾಗಿ ಬೀಫ್ ಟೀ ಕೊಡದೆ ಬದುಕಲಿಕ್ಕೇ ಸಾಧ್ಯ ಇಲ್ಲ ಎನ್ನುವ ಸ್ಥಿತಿ ಬಂದಿತ್ತು. ಆಗ ಕಸ್ತೂರ್ಬಾ ಅವರು ತಾನು ಸತ್ತರೂ ಸರಿಯೇ ಬೀಫ್ ಟೀ ಕುಡಿಯುವುದಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಗಾಂಧೀಜಿ " ಆಪತ್ಕಾಲದಲ್ಲಿ ದೋಷ ಇಲ್ಲ ಎಂದು ಧರ್ಮಶಾಸ್ತ್ರವೂ ಹೇಳುತ್ತದೆ. ಯೋಚಿಸು" ಎನ್ನುತ್ತಾರೆ ಆಗಲೂ ಕಸ್ತೂರ್ಬಾ ತಾನು ಬೀಫ್ ಟೀ ಕುಡಿಯಲಾರೆ ಎಂಬ ನಿರ್ಧಾರವನ್ನೆ ಪ್ರಕಟಿಸುತ್ತಾರೆ. ಗಾಂಧಿಯೂ ಅದನ್ನು ಒಪ್ಪಿದರು. ಗಾಂಧೀಜಿಯ ಮಗ ಮಣಿಲಾಲ್ ಕೂಡ ಒಪ್ಪಿದರು. ವೈದ್ಯರು ಬೈದರೂ ಲೆಕ್ಕಿಸದೆ ಕಸ್ತೂರ್ಬಾ ಅವರನ್ನು ಎತ್ತಿ ರೈಲ್ವೇ ನಿಲ್ದಾಣದ ವರೆಗೆ ತೆಗೆದುಕೊಂಡು ಬಂದರು. ನಂತರ ನಿಸರ್ಗ ಚಿಕಿತ್ಸೆಯಲ್ಲೆ ಕಸ್ತೂರ್ಬಾ ಗುಣಮುಖರಾದರು.

ಇಲ್ಲಿ ಕಾಣಿಸುವುದು ಇಡೀ ಗಾಂಧಿ ಕುಟುಂಬ ಸಂಸ್ಥಾ ರೂಪಿ ಧರ್ಮಕ್ಕೆ ಹೇಗೆ ಬದ್ಧವಾಗಿತ್ತು ಎನ್ನುವುದೇ ಆಗಿದೆ. ಮನುಷ್ಯ, ಕುದುರೆ ಮತ್ತು ದನವನ್ನು ಕೊಲ್ಲಬಾರದು ಎಂದು ಋಗ್ವೇದ ಹೇಳುತ್ತದೆ. ಗಾಂಧೀಜಿಯೂ ಗೋಹತ್ಯಾ ನಿಷೇಧಕ್ಕೆ ಬದ್ಧರಾಗಿದ್ದರು. " ನಾನೊಬ್ಬ ಗೋಪೂಜಕ ಮತ್ತು ಇಡೀ ವಿಶ್ವದ ಮುಂದೆ ಗೋಪೂಜೆಯನ್ನು ನಾನು ಸಮರ್ಥಿಸಿಕೊಳ್ಳುತ್ತೇನೆ" ಎಂದವರು ಗಾಂಧಿ. ಆದರೆ, ಯಾರಿಗೋ ಅದು ಆಹಾರ ಎಂಬ ವಿಚಾರ ಬಂದಾಗ ಗೋಹತ್ಯಾ ನಿಷೇಧವನ್ನು

ಕಾನೂನಿನ ಮೂಲಕ ಜಾರಿಗೊಳಿಸುವುದನ್ನು ತಾನು ಒಪ್ಪುವುದಿಲ್ಲ ಎನ್ನುತ್ತಾರೆ. ಇದು ಗಾಂಧೀಜಿಯವರು ಸಂಸ್ಥಾರೂಪಿ ಧರ್ಮವನ್ನು ಸ್ವೀಕರಿಸಿದ ಎರಡನೆಯ ನೆಲೆಯಾಗಿದೆ.

ಸನಾತನ ಹಿಂದೂ ಧರ್ಮದಲ್ಲಿ ಮೌಲ್ಯಗಳ ಸಾಪೇಕ್ಷತಾ ತತ್ವಕ್ಕೆ ಬಹಳ ಮಹತ್ವವಿದೆ. ಎರಡು ಮೌಲ್ಯಗಳ ನಡುವೆ ಸಂಘರ್ಷ ಬಂದಾಗ ಉನ್ನತ ಮೌಲ್ಯವನ್ನು ಸ್ವೀಕರಿಸಬೇಕು ಎಂದು ಸಂಸ್ಥಾ ರೂಪಿ ಧರ್ಮವೇ ಹೇಳುತ್ತದೆ. ಅದಕ್ಕೆ ಆಧಾರವಾಗುವ ಕಥನಗಳೂ ಇವೆ. ಉದಾಹರಣೆಗೆ ಯಮಧರ್ಮರಾಜ ಸಾವಿತ್ರಿಗೆ ಸಾವಿರ ಮಕ್ಕಳಾಗಲಿ ಎಂದು ವರ ನೀಡಿದಾಗ ಸಾವಿತ್ರಿ," ಧರ್ಮ ರಾಜನಾದ ನೀನು ಕೊಟ್ಟ ವರ ಧರ್ಮ ಮಾರ್ಗದಲ್ಲೆ ಫಲಿಸಬೇಕಲ್ಲವೆ?" ಎಂದು ಕೇಳುತ್ತಾಳೆ. ಆಗ ಯಮ ಸತ್ಯವಾನನ ಪ್ರಾಣವನ್ನು ಕಳಿಸಿಕೊಡುತ್ತಾನೆ. ಈ ಕಥೆಯು ಮೌಲ್ಯಗಳ ಸಂಘರ್ಷ ಬಂದಾಗ ಉನ್ನತ ಮೌಲ್ಯವನ್ನು ಸ್ವೀಕರಿಸಬೇಕು ಎಂದು ಹೇಳುತ್ತದೆ. ಗೋಹತ್ಯಾ ನಿಷೇಧ ಒಂದು ಮೌಲ್ಯವೇ. ಮನುಷ್ಯನ ಆಹಾರದ ಅವಶ್ಯಕತೆಯ ಪೂರೈಕೆಯೂ ಒಂದು ಮೌಲ್ಯವೇ. ಇವೆರಡರ ನಡುವೆ ಸಂಘರ್ಷ ಬಂದಾಗ ಗಾಂಧೀಜಿ ಉನ್ನತ ಮೌಲ್ಯವಾದ ಮನುಷ್ಯನ ಆಹಾರದ ಅಗತ್ಯವನ್ನು ಪೂರೈಸುವುದರ ಪರವಾಗಿ ನಿಲ್ಲುತ್ತಾರೆ.

ಮೂರನೆಯದು ಧರ್ಮವನ್ನು ವ್ಯಕ್ತಿಯಾಗಿ ಕಂಡುಕೊಳ್ಳುವ ಕ್ರಮ. ಮೂಲತಃ ಈ ಸನಾತನ ಹಿಂದೂ ಧರ್ಮ ಎನ್ನುವುದು ಸಂಘಟನಾ ರೂಪದ ಸಂಸ್ಥೆಯಲ್ಲ. ಸಮುದಾಯಗಳು ಅವವುಗಳದೇ ಆದ ನಿಯಮಗಳ ಅನುಸಾರ ಸಾಮಾಜಿಕ ಅಗತ್ಯಗಳನ್ನು ಈಡೇರಿಸಿಕೊಳ್ಳುತ್ತಿದ್ದವು. ಈಗಲೂ ನಮ್ಮ ಸಮುದಾಯಗಳಲ್ಲಿ ಅವವುಗಳದೇ ನಿಯಮಗಳಿವೆ. ಸನಾತನ ಧರ್ಮ ಸಮುದಾಯದ ನಿಯಮಗಳನ್ನೆ ರೂಪಿಸಲು ಹೆಚ್ಚು ಆಸಕ್ತಿ ವಹಿಸಿದ್ದಲ್ಲ. ವ್ಯಕ್ತಿಯ ಉನ್ನತಿಯ ಕುರಿತಾಗಿಯೇ ಅದರ ಆಸಕ್ತಿ ಜಾಸ್ತಿ. ಭಗವದ್ಗೀತೆಯಲ್ಲೂ," ಜೀವಿಯು ತನ್ನ ಉನ್ನತಿಯ ಸಾಧನೆಯಲ್ಲಿ ಒಂಟಿಯಾಗಿಯೇ ಪಯಣಿಸಬೇಕು" ಎಂದು ಬರುತ್ತದೆ. ಕಾಲಾನುಕ್ರಮದಲ್ಲಿ ಸಮುದಾಯಗಳಿಗೆ ಬಾಹ್ಯ ಕಿರುಕುಳಗಳು ಎದುರಾದಾಗ ಅಂತಹ ಸನ್ನಿವೇಶಗಳನ್ನು ನಿಭಾಯಿಸಲಿಕ್ಕಾಗಿ ಧರ್ಮಕ್ಕೆ ಸಂಘಟನಾತ್ಮಕವಾದ ಸಾಂಸ್ಥಿಕ ರೂಪವನ್ನು ಕೊಡಲಾಯಿತು ಅಷ್ಟೆ. ಇದೊಂದು ವ್ಯಾವಹಾರಿಕ ಅಗತ್ಯವಾಗಿ ಬಂದದ್ದೇ ಹೊರತು ಧರ್ಮದ ಸ್ವರೂಪವೇ ಹಾಗಲ್ಲ. ಇರಲಿ; ಈ ವಿಚಾರ ಇಲ್ಲಿನ ಚರ್ಚೆಗೆ ಸಂಬಂಧಿಸಿಲ್ಲ.

ಗಾಂಧೀಜಿ ಭಗವದ್ಗೀತೆಗೆ ವಿಶಿಷ್ಟವಾದ ವ್ಯಾಖ್ಯಾನವನ್ನು ಕೊಡುತ್ತಾರೆ. ಅದು ಅವರದೇ ವ್ಯಾಖ್ಯಾನ. ವೇದವನ್ನು ಅರ್ಥ ಮಾಡಿಕೊಳ್ಳಲಿಕ್ಕೂ ವೇದಾಂತ ಸೂತ್ರಗಳಿವೆ. ಗಾಂಧೀಜಿ ಈ ರೀತಿಯ ಸಾಂಪ್ರದಾಯಿಕ ಸೂತ್ರವನ್ನೆಲ್ಲ ಮುರಿದು ವೈಯಕ್ತಿಕವಾದ ಸ್ವತಂತ್ರ ವ್ಯಾಖ್ಯಾನವನ್ನು ನೀಡುತ್ತಾರೆ. " ಅಹಿಂಸಾವಾದಿಯಾದ ನೀವು ಹಿಂಸೆಯನ್ನು ಬೋಧಿಸುವ ಭಗವದ್ಗೀತೆಯನ್ನು ಹೇಗೆ ತಾಯಿ ಎಂದು ಒಪ್ಪಿಕೊಳ್ಳುತ್ತೀರಿ?" ಎಂದು ಆಚಾರ್ಯ ರಜನೀಶ್ ಕೇಳಿದರೆ, ಗಾಂಧೀಜಿ," ಭಗವದ್ಗೀತೆಯು ಭೌತಿಕ ಯುದ್ಧಕ್ಕಿಂತ ಮುಖ್ಯವಾಗಿ ಮಾನಸಿಕ ತಾಕಲಾಟವನ್ನು ವಿವರಿಸುತ್ತದೆ. ಅರ್ಜುನ ಅಲ್ಲಿ ಮೋಹ ಪರವಶನಾಗಿದ್ದ. ಭೀಷ್ಮ, ದ್ರೋಣ, ದುರ್ಯೋಧನಾದಿಗಳೆಲ್ಲ ತನ್ನವರು. ಇವರ ಮೇಲೆ ಹೇಗೆ ಯುದ್ಧ ಮಾಡಲಿ ಎಂದು ಅರ್ಜುನನ ಪ್ರಶ್ನೆಯಾಗಿತ್ತು. ಸಾಯಲಿದ್ದ ಲಕ್ಷಾಂತರ ಸೈನಿಕರನ್ನು ಹೇಗೆ ಕೊಲ್ಲಲಿ ಎಂದು ಅವನಿಗನಿಸಲೇ ಇಲ್ಲ. ಅಹಿಂಸಾ ವ್ರತಧಾರಿಗೆ ನನ್ನವರು ನನ್ನವರಲ್ಲದವರು ಎಂಬ ಭೇದ ಇರಕೂಡದು. ಅವನು ನಿರ್ಮೋಹಿಯಾಗಿರಬೇಕು. ಒಂದು ವೇಳೆ

ಅರ್ಜುನ ಮೋಹವನ್ನು ತೊರೆದು ಲಕ್ಷಾಂತರ ಸೈನಿಕರನ್ನು ಹೇಗೆ ಕೊಲ್ಲಲಿ ಎಂದು ಕೇಳಿದ್ದರೆ ಆಗ ಕೃಷ್ಣ ಕೊಡುವ ಉತ್ತರವೂ ಬೇರೆಯಾಗಿರುತ್ತಿತ್ತು" ಎಂದು ಗಾಂಧೀಜಿ ಉತ್ತರಿಸುತ್ತಾರೆ. ಇದು ಗಾಂಧಿಯದ್ದೇ ವ್ಯಾಖ್ಯಾನ. ಬೇರೆಲ್ಲೂ ಈ ವ್ಯಾಖ್ಯಾನವಿಲ್ಲ. ಭಗವದ್ಗೀತೆ ಎಂದರೆ ಶ್ರೀ ಭಗವಾನುವಾಚ ಅಲ್ಲವೆ? ದೇವರೇ ಹೇಳಿದ್ದನ್ನು ಪ್ರಶ್ನಿಸಬಾರದು ಎಂಬ ನಿಯಮವನ್ನು ಲೆಕ್ಕಿಸದೆ ಗಾಂಧಿ ಭಗವದ್ಗೀತೆಯನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ. ಆದರೆ ಗಾಂಧೀಜಿಯ ಈ ವ್ಯಾಖ್ಯಾನವನ್ನು ನಿರಾಕರಿಸಲು ಆಗುವುದಿಲ್ಲ. ಏಕೆಂದರೆ ಮಹಾಭಾರತದಲ್ಲಿ ಅದಕ್ಕೆ ಸಮರ್ಥನೆ ಇದೆ. ಕುರುಕ್ಷೇತ್ರ ಯುದ್ಧಕ್ಕೆ ಮೊದಲು ಉಪಪ್ಲವ್ಯದಲ್ಲಿ



ನಡೆದ ಸಭೆಯಲ್ಲಿ ಎಲ್ಲರೂ ಕೌರವರ ಬಗ್ಗೆ ಮಾತನಾಡಿದರೆ ಕೃಷ್ಣ ಮಾತ್ರ," ಯುದ್ಧ ನಡೆದರೆ ಲಕ್ಷ ಲಕ್ಷ ಸಂಖ್ಯೆಯ ಸಾವು ನಡೆಯುತ್ತದೆ. ಅದರ ಬಗ್ಗೆ ನಾನು ಚಿಂತಿತನಾಗಿದ್ದೇನೆ" ಎನ್ನುತ್ತಾನೆ. ಅಂದರೆ ಕೃಷ್ಣನಿಗೆ ಮಾತ್ರ ಸಾಯಲಿರುವ ಸಾಮಾನ್ಯ ಸೈನಿಕರೂ ಪರಿಗಣನೆಯಲ್ಲಿದ್ದರು. ಈ ಅಂಶವು ಗಾಂಧೀಜಿಯ ವ್ಯಾಖ್ಯಾನಕ್ಕೆ ಪೂರಕವಾಗಿಯೇ ಇದೆ.


ಗಾಂಧೀಜಿಯವರು ಅಸ್ಪೃಶ್ಯತಾ ನಿಷೇಧಕ್ಕೆ ಪೂರಕವಾಗಿ ಧರ್ಮವನ್ನೆ ಆಧರಿಸುತ್ತಾರೆ. ರಾಮಾಯಣದಲ್ಲಿ ರಾಮ ಶೋಷಿತ ಸಮುದಾಯಕ್ಕೆ ಸೇರಿದ ಗುಹನನ್ನು ತನ್ನ ಸಹೋದರನೆಂದು ಅಪ್ಪಿಕೊಳ್ಳುತ್ತಾನೆ. ರಾಮನಿಗೆ ಅಸ್ಪೃಶ್ಯ ಎಂಬ ಸಮಸ್ಯೆ ಇಲ್ಲ. ಹಾಗಿದ್ದ ಮೇಲೆ ನಮಗೆ ಅಸ್ಪೃಶ್ಯತೆ ಯಾಕೆ ಎನ್ನುವುದು ಗಾಂಧೀಜಿಯ ಪ್ರಶ್ನೆ. ಗಾಂಧಿ ಬ್ರಹ್ಮಶ್ರೀ ನಾರಾಯಣ ಗುರುಗಳನ್ನು ಭೇಟಿಯಾದಾಗ," ಅಸ್ಪೃಶ್ಯತೆಗೆ ಧರ್ಮದಲ್ಲಿ ಸಮರ್ಥನೆ ಇದೆಯೆ?" ಎಂದು ಕೇಳುತ್ತಾರೆ. ನಾರಾಯಣ ಗುರುಗಳು ಅಸ್ಪೃಶ್ಯತೆಗೆ ಧರ್ಮದಲ್ಲಿ ಸಮರ್ಥನೆ ಇಲ್ಲ ಎಂದು ಉತ್ತರಿಸುತ್ತಾರೆ.ಮತ್ತು ನಾರಾಯಣ ಗುರುಗಳ ಆಶ್ರಮದಲ್ಲಿ ಅಡುಗೆಯವರು ಅಸ್ಪೃಶ್ಯರು. ಇದನ್ನು ನೋಡಿ ಸಾಬರ್ಮತಿ ಆಶ್ರಮಕ್ಕೆ ಬಂದು ಗಾಂಧೀಜಿಯೂ ಅಸ್ಪೃಶ್ಯರನ್ನೆ ಅಡುಗೆಗೆ ನೇಮಿಸುತ್ತಾರೆ.

ಈಗ ಅತಾರ್ಕಿಕವಾಗಿ ಹಿಂದೂ ಧರ್ಮದ ಉದಾತ್ತತೆಯನ್ನು ಹೇಳುವವರು ಬಳಸುವುದು ಈಶಾವಾಸ್ಯ ಉಪನಿಷತ್ತಿನ," ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿಃ ಸರ್ವಭೂತೇಶು ಚಾತ್ಮಾನಾಂ ತಥೋನ ವಿಜುಗುಪ್ಸತೇ" ಎಂಬ ಮಂತ್ರವನ್ನು. ಅಂದರೆ ಯಾರು ತನ್ನಲ್ಲಿ ಸಕಲ ಜೀವಿಗಳ ಆತ್ಮವನ್ನೂ, ಸಕಲ ಜೀವಿಗಳಲ್ಲಿ ತನ್ನ ಆತ್ಮವನ್ನೂ ಕಾಣಬಲ್ಲನೋ ಅವನಿಗೆ ಜಿಗುಪ್ಸೆ ಇರುವುದಿಲ್ಲ ಎಂದು ಅರ್ಥ. ಈಶಾವಾಸ್ಯ ಉಪನಿಷತ್ತು ಇದನ್ನು ಆಧ್ಯಾತ್ಮಿಕ ಸಾಧಕನಿಗೆ ಹೇಳುವುದು. ಸಕಲ ಚರಾಚರ ವಸ್ತುಗಳೂ ಬ್ರಹ್ಮದ ವಿವಿಧ ಸಗುಣ ರೂಪಗಳೇ ಆಗಿದ್ದು ಅವುಗಳಲ್ಲಿರುವ ಬ್ರಹ್ಮವನ್ನು ಕಾಣುವ ಒಳಗಣ್ಣನ್ನು ತೆರಸುವ ರೂಪದಲ್ಲಿ ಅದಿರುವುದು. ಇದರರ್ಥ ಲೌಕಿಕ ವ್ಯವಹಾರದ ಅರ್ಥದಲ್ಲೆ ಭೇದಗಳನ್ನು ನಿವಾರಿಸಲಾಗಿದೆ ಎಂದಲ್ಲ. ಗಾಂಧೀಜಿಯಂತಹವರು, ರಾಮಕೃಷ್ಣ ಪರಮ ಹಂಸರಂತಹವರು ಇದನ್ನು ಲೌಕಿಕ ಅರ್ಥಕ್ಕೆ ಒಳಪಡಿಸಲು ಪ್ರಯತ್ನಿಸಿದ್ದಾರೆ ನಿಜ. ಅಂದ ಮಾತ್ರಕ್ಕೆ ಹಿಂದೂ ಧರ್ಮದಲ್ಲಿ ಸಾವಿರಾರು ವರ್ಷಗಳಿಂದ ನಡೆದ ತಾರತಮ್ಯ, ಜಾತಿ ಆಧಾರಿತ ದೌರ್ಜನ್ಯಗಳಿಗಾಗಿ ಹಿಂದೂಗಳನ್ನು ಕ್ಷಮಿಸಿಕೊಳ್ಳಲು ಆಗುವುದಿಲ್ಲ. ಹಾಗೆ, ಅಸ್ಪೃಶ್ಯತೆ ಧರ್ಮದ ಭಾಗ ಅಲ್ಲ. ಯುಗಗಳು ನಾಲ್ಕು. ಧರ್ಮ ನಿಲ್ಲುವುದು ನಾಲ್ಕು ಕಾಲಿನಲ್ಲಿ. ಆಶ್ರಮಗಳು ನಾಲ್ಕು. ಆವಾಗ ವರ್ಣಗಳು ಮಾತ್ರ ಐದಾಗುವುದು ಹೇಗೆ? ನಾನು ವರ್ಣಗಳ ಬಗ್ಗೆ ಹೇಳುತ್ತಿದ್ದೇನೆ. ಜಾತಿಗಳ ಬಗ್ಗೆ ಅಲ್ಲ. ಜಾತಿಗಳು ಆರು ಸಾವಿರಕ್ಕಿಂತ ಜಾಸ್ತಿ ಇವೆ. ಅವು ಧರ್ಮದ ಸೃಷ್ಟಿ ಅಲ್ಲ. ಸಾಮಾಜಿಕ ಮತ್ತು ಆರ್ಥಿಕ ಸಂದರ್ಭದ ಸೃಷ್ಟಿಗಳು. ನಿಜವಾಗಿ ವರ್ಣಗಳೂ ನಾಲ್ಕೇ. ಪಂಚಮರು ಎನ್ನುವ ಪಂಗಡವೇ ಕೃತಕ ಸೃಷ್ಟಿ. ಹೇಗೆ ಇದು ಸೃಷ್ಟಿಯಾಯಿತು ಎನ್ನಬೇಕಾದರೆ ನಾನು ಬೇರೆಯೇ ಇತಿಹಾಸವನ್ನು ಹೇಳಬೇಕು. ಅದು ಇಲ್ಲಿಗೆ ಅಪ್ರಸ್ತುತ. ಹಾಗಾದರೆ ಅದರಿಂದ ಆದ ಹಾನಿ? ಆ ಹಾನಿಯ ಹೊಣೆಯನ್ನು ಹಿಂದೂಗಳು ಹೊರಲೇ ಬೇಕಾಗುತ್ತದೆ. ಅದಕ್ಕೇ ಗಾಂಧೀಜಿಯವರು ಅಸ್ಪೃಶ್ಯತೆ ಇರುತ್ತದೆ ಎಂದಾದರೆ ಹಿಂದೂ ಧರ್ಮನಾಶವಾಗುವುದೇ ಸೂಕ್ತ ಎಂದದ್ದು. ಆತ್ಮಸಾಕ್ಷಿ ಇರುವ ಯಾವ ಮನುಷ್ಯನೂ ಅಸ್ಪೃಶ್ಯತೆಯ ಹೊಣೆ ಹಿಂದೂಗಳಿಗೆ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಇದನ್ನು ಮಹಾತ್ಮಾ ಗಾಂಧಿಯವರು ಚೆನ್ನಾಗಿ ಅರಿತಿದ್ದರು. ಅದಕ್ಕೇ ಅಸ್ಪೃಶ್ಯತೆಯ ನಿರ್ಮೂಲನೆಗೆ ಅವರು ವಿಶೇಷವಾದ ಕಾಳಜಿ ವಹಿಸಿದ್ದರು. ಅಸ್ಪೃಶ್ಯ ಸಮುದಾಯದ ಹುಡುಗಿಯನ್ನೆ ತನ್ನ ಮಗಳು ಎಂದು ದತ್ತು ತೆಗೆದುಕೊಂಡಿದ್ದರು. ದೂದಾ ಬಾಯಿ ಪ್ರಕರಣ ಬಹಳ ಪ್ರಸಿದ್ಧವೇ ಆಗಿದ್ದು ಎಲ್ಲರಿಗೂ ಗೊತ್ತಿದೆ. ಅಸ್ಪೃಶ್ಯರಿಗೆ ಪ್ರವೇಶವಿಲ್ಲದ ದೇವಸ್ಥಾನಗಳಿಗೆ ಗಾಂಧೀಜಿಯವರು ಹೋಗುತ್ತಿರಲಿಲ್ಲ. ಒಮ್ಮೆ ಕಸ್ತೂರ್ಬಾ ಮತ್ತು ಮಹಾದೇವ ದೇಸಾಯಿ ಅಸ್ಪೃಶ್ಯರಿಗೆ ಪ್ರವೇಶವಿಲ್ಲದ ದೇವಸ್ಥಾನಕ್ಕೆ ಹೋದದ್ದಕ್ಕಾಗಿ ಸಿಟ್ಟಿಗೆದ್ದು ಕೂಗಾಡಿದ ಗಾಂಧೀಜಿಗೆ ಕೊನೇಗೆ ಮಹಾದೇವ ದೇಸಾಯಿ," ಕೆಟ್ಟವರ ಸಾವಾಸ ಬಲು ಕಷ್ಟ. ಒಳ್ಳೆಯವರ ಸಾವಾಸ ಅದಕ್ಕಿಂತಲೂ ಕಷ್ಟ" ಎಂದಿದ್ದರು. ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಗಾಂಧೀಜಿ ಬಹಳ ಮಂದಿಯನ್ನು ಪ್ರಭಾವಿಸಿದ್ದರು. ಅಸ್ಪೃಶ್ಯತೆಯಾಗಲಿ, ಇತರ ವಿಷಯಗಳೇ ಆಗಲಿ ಅವು ರೂಪುಗೊಂಡು ವ್ಯವಸ್ಥೆಯಾಗಿ ಬೆಳೆದ ನಂತರ ಅವುಗಳನ್ನು ಸಂವೇದನಾಶೀಲ ದೃಷ್ಟಿಯಿಂದ ನೋಡುವ ಕ್ರಮ ಹೊರಟು ಹೋಗುತ್ತದೆ. ಸಮಾಜ ದುರ್ಬಲ ವರ್ಗದ ಬಗ್ಗೆ ಸಾಮಾನ್ಯವಾಗಿ ಸಂವೇದನಾಶೀಲವಾಗಿರುವುದಿಲ್ಲ. ದ್ರೌಪದಿ ವಸ್ತ್ರಾಪಹಾರದ ಬಗ್ಗೆ ಸಮಾಜ ಸಂವೇದನಾಶೀಲವಾಗಿತ್ತು. ಮಹಾಭಾರತವೂ ಬಂತು. ಏಕೆಂದರೆ ದ್ರೌಪದಿ ರಾಣಿ. ರಾಣಿಯ ವಸ್ತ್ರಾಪಹಾರ ನಡೆಯುವ ಸಮಾಜದಲ್ಲಿ ದುರ್ಬಲ ಮಹಿಳೆಯರ ವಸ್ತ್ರಾಪಹಾರ ಇನ್ನೆಷ್ಟಾಗಿರಬಹುದು. ಆದರೆ ಅದೆಲ್ಲ ಸಾಹಿತ್ಯವಾಗಲಿಲ್ಲ. ಏಕೆಂದರೆ ಅವರ ಬಗ್ಗೆ ಸಂವೇದನಾಶೀಲತೆ ಇರಲಿಲ್ಲ. ಇವತ್ತಿಗೂ ವಿಮಾನ ಅಪಘಾತದಲ್ಲಿ ಮಡಿದವರ ಬಗ್ಗೆ ಹೇಳುವಾಗ ಅದರಲ್ಲಿದ್ದ ದೊಡ್ಡ



ಮನುಷ್ಯರ ಬಗ್ಗೆ ಸಂವೇದನಾಶೀಲ ಪ್ರತಿಕ್ರಿಯೆಗಳಿವೆ. ಸಾಮಾನ್ಯ ಪ್ರಯಾಣಿಕರನ್ನು," ಅವರು ಇವರು ಮತ್ತು ಇತರ ಪ್ರಯಾಣಿಕರು" ಎಂದು ಗುರುತಿಸುವುದು." ಇತರ" ಎನ್ನುವುದರ ಬಗ್ಗೆ ಸಂವೇದನಾಶೀಲತೆ ಇಲ್ಲ. ಇದೇ ರೀತಿ ಸಂವಾದನಾಶೀಲ ಸ್ಪಂದನೆಯೇ ಇರದ ಅಸ್ಪೃಶ್ಯರನ್ನು ಸಂವೇದನಾಶೀಲವಾಗಿ ನೋಡುವ ಪರಿಪಾಠವನ್ನು ಗಾಂಧಿ ದೊಡ್ಡ ಪ್ರಮಾಣದಲ್ಲಿ ಹುಟ್ಟು ಹಾಕಿದರು. ಗಾಂಧಿ ಪುತ್ತೂರಿಗೆ ಬಂದಿದ್ದಾಗ ಒಂದು ಘಟನೆ ನಡೆಯುತ್ತದೆ. ಅಸ್ಪೃಶ್ಯ ವರ್ಗದ ಚೀಂಕ್ರ ಮೇರ ಎಂಬವರನ್ನು ಗಾಂಧೀಜಿಗೆ ಹಾರ ಹಾಕಲು ಗೊತ್ತು ಮಾಡಲಾಗುತ್ತದೆ. ಗಾಂಧೀಜಿಯ ಬಳಿಗೆ ಹೋದಾಗ ಚೀಂಕ್ರ ಮೇರರ ಕೈ ನಡುಗಲು ಶುರುವಾಯಿತು. ಆಗ ಗಾಂಧೀಜಿಯೇ ಚೀಂಕ್ರ ಮೇರರ ಕೈಹಿಡಿದು ತನ್ನ ತಲೆಯನ್ನು ಹಾರದೊಳಗೆ ನುಗ್ಗಿಸಿ ಹಾಕಿಸಿಕೊಳ್ಳುತ್ತಾರೆ. ಇದನ್ನೆಲ್ಲ ನೋಡಿದ ಕಾರ್ನಾಡ್ ಸದಾಶಿವ ರಾಯರು," ಇನ್ನು ಮುಂದೆ ಅಸ್ಪೃಶ್ಯರು ನನ್ನ ಮನೆಯ ದೇವರ ಕೋಣೆಗೂ ಪ್ರವೇಶಿಸುವುದನ್ನು ಆ ಶ್ರೀಹರಿಯೂ ತಡೆಯಲಾರ" ಎಂದು ಘೋಷಿಸುತ್ತಾರೆ. ನಂತರ ಕಾರ್ನಾಡ್ ಸದಾಶಿವ ರಾಯರೂ ಇದೇ ಕೆಲಸಕ್ಕೆ ಇಳಿಯುತ್ತಾರೆ. ಅಸ್ಪೃಶ್ಯತೆ ಧರ್ಮ ಬಾಹಿರ, ಅಸ್ಪೃಶ್ಯತೆ ' ಪಾಪ' ಎಂಬ ಪ್ರಜ್ಞೆಯನ್ನು ವ್ಯಾಪಕವಾಗಿ ಹಿಂದೂಗಳಲ್ಲಿ ಹುಟ್ಟು ಹಾಕಿದವರು ಗಾಂಧೀಜಿಯೇ. ಮತ್ತು ಸನಾತನಿ ಹಿಂದೂ ಆಗಿದ್ದೇ ಅವರು ಅದನ್ನು ಮಾಡಿದ್ದಾರೆ ಎನ್ನುವುದು ಮಹತ್ವದ ವಿಷಯ. ಒಂದು ವೇಳೆ ನೆಹರೂ ಅವರ ಶೈಲಿಯಲ್ಲಿ ಸಾಗಿದ್ದರೆ ಇದು ಕಷ್ಟವಿತ್ತು. ನೆಹರೂ ಹಿಂದೂ ಎನ್ನುವುದು ಟೆಕ್ನಿಕಲಿ ಹಿಂದೂ ಎಂದಷ್ಟೆ; ಅವರ ಜೀವನ ವಿಧಾನಗಳಲ್ಲಿ ಧರ್ಮದ ಇರುವಿಕೆ ತೀರಾ ಕಡಿಮೆ. ಕಾನೂನಿನ ಮೂಲಕ ತರುವ ಸುಧಾರಣೆಗಳು ಕಾನೂನಿನ ಭಯ ಇರುವ ವರೆಗೆ ನಡೆಯುತ್ತದೆ. ನಂತರ ಮೊದಲಿನಂತಾಗುತ್ತದೆ. ವ್ಯಕ್ತಿಯ ಚಿಂತನಾ ಕ್ರಮದಲ್ಲೆ ತರುವ ಸುಧಾರಣೆಗಳು ತಲೆಮಾರುಗಳ ನಂತರವೂ ಶಾಶ್ವತವಾಗಿ ಉಳಿಯುತ್ತವೆ. ಈ ನಿಟ್ಟಿನಲ್ಲಿ ಗಾಂಧೀಜಿ ಹಿಂದೂ ಧರ್ಮದ ಬಹಳ ದೊಡ್ಡ ಧಾರ್ಮಿಕ ಸುಧಾರಕರೂ ಹೌದು.

ಧಾರ್ಮಿಕ ವಿಚಾರದಲ್ಲಿ ಗಾಂಧೀಜಿಯನ್ನು ನಾಲ್ಕನೆಯ ನೆಲೆಯಲ್ಲಿಯೂ ಗ್ರಹಿಸಬೇಕು. "ಅನೌ



ಭದ್ರಾ ಕೃತವೋ ಯಂತು ವಿಶ್ವತಃ" ಎನ್ನುವುದು ಋಗ್ವೇದದ ಮಾತು. ಅಂದರೆ ಎಲ್ಲ ಕಡೆಯಿಂದಲೂ ಸ್ವೀಕರಿಸಲು ಯೋಗ್ಯವಾದದ್ದನ್ನು ಸ್ವೀಕರಿಸಬೇಕು ಎಂದು. ಜೀಸಸ್ ಬೆಟ್ಟದ ಉಪದೇಶಗಳ ತತ್ವಗಳನ್ನು ಗಾಂಧೀಜಿ ತಮ್ಮ ವಿಚಾರ ಮತ್ತು ವರ್ತನೆಗೆ ಅಳವಡಿಸಿಕೊಂಡಿದ್ದರು. ಅವರು ಸತ್ಯಾಗ್ರಹದ ಪರಿಕಲ್ಪನೆಯನ್ನು ರೂಪಿಸುವ ಮೊದಲು ಒಬ್ಬರು ಇಮಾಮರೊಂದಿಗೆ ಬಹಳ ದಿನಗಳ ಕಾಲ ಸಂವಾದ ನಡೆಸಿದ್ದರು. ಇವತ್ತು ತೀರಾ ಕೆಟ್ಟ ಅರ್ಥವನ್ನು ಪಡೆದಿರುವ ಜೆಹಾದ್ ಪರಿಕಲ್ಪನೆಯ ಮೂಲ ಅರ್ಥ ಮನುಷ್ಯ ತನ್ನ ಅಂತರಂಗದ ಕೆಡುಕುಗಳ ವಿರುದ್ಧ ಹೋರಾಡಬೇಕು ಎಂದು. ಸತ್ಯಾಗ್ರಹದಲ್ಲಿ ಎದುರಾಳಿಗಿಂತ ಮೊದಲು ತನ್ನ ದೋಷವನ್ನು ತಾನು ಕಳೆದುಕೊಳ್ಳಬೇಕು ಎಂಬ ಪರಿಕಲ್ಪನೆ ಇದೆ. ಇಸ್ಲಾಮಿನಿಂದಲೂ ಗಾಂಧೀಜಿ ಸ್ವೀಕರಿಸಿದರು. ಇನ್ನೊಂದು ಪ್ರಕರಣ ಬರುತ್ತದೆ. ಸಾಬರ್ಮತಿ ಆಶ್ರಮದಲ್ಲಿ ಗಾಂಧಿ ಒಮ್ಮೆ ಕುಡಿಯಲು ನೀರು ಕೇಳಿದಾಗ ಒಬ್ಬ ಹುಡುಗಿ ಬಿಸಿ ನೀರು ತಂದು ಕೊಡುತ್ತಾಳೆ. ಗಾಂಧಿ ಸ್ವಲ್ಪ ನೀರು ಕುಡಿದು ಲೋಟ ಅಲ್ಲೇ ಇಟ್ಟರು. ನೀರಿನ್ನೂ ಇತ್ತು. ಸ್ವಲ್ಪ ತಡೆದು ನೋಡಿದಾಗ ಲೋಟ ಹಾಗೆಯೇ ಇದೆ. ಆಗ ಗಾಂಧೀಜಿ ಹುಡುಗಿಯನ್ನು ಕರೆದು," ಲೋಟಕ್ಕೆ ಮುಚ್ಚಬೇಕು. ಇಲ್ಲದಿದ್ದರೆ ಲೋಟದಿಂದ ಮೇಲೇಳುವ ಹಬೆಯಿಂದ ಪರಿಸರದಲ್ಲಿರುವ ಸೂಕ್ಷ್ಮ ಜೀವಿಗಳು ಸಾಯುತ್ತವೆ. ಅವುಗಳನ್ನು ಕೊಲ್ಲುವ ಹಕ್ಕು ನಮಗಿಲ್ಲ" ಎನ್ನುತ್ತಾರೆ. ಅಹಿಂಸೆಯ ಕುರಿತ ಈ ಕಠೋರ ಬದ್ಧತೆ ಜೈನ ಧರ್ಮದ್ದು. ಹಿಂದೂ ಧರ್ಮದ್ದಲ್ಲ. ಹಿಂದೂ ಧರ್ಮವೂ ಅಹಿಂಸೆಯನ್ನು ಹೇಳುತ್ತದೆ. " ಅಹಿಂಸಾ ಪರಮೋಧರ್ಮಃ" ಹೌದು, ಆದರೆ ಆ ನಂತರ " ಧರ್ಮಹಿಂಸಾ ತತೈವಚಃ" ಎಂದೂ ಇದೆ. ಧರ್ಮದ ಅಗತ್ಯಕ್ಕಾಗಿ ಹಿಂಸೆ ಮಾಡಬಹುದು. ಶ್ರೀಮದ್ಭಾಗವತವು ಪ್ರಭುತ್ವದ ವಿರುದ್ಧ ಪ್ರಜೆ ಹಿಂಸೆಗೆ ಇಳಿಯಬಾರದು ಎನ್ನುತ್ತದೆ. ಅಂದರೆ ಒಟ್ಟಾರೆಯಾಗಿ ಅನಿವಾರ್ಯ ಹಿಂಸೆಯನ್ನು ಹಿಂದೂ ಧರ್ಮ ಒಪ್ಪುತ್ತದೆ. ಅಹಿಂಸೆಯ ವಿಚಾರದಲ್ಲಿ ರಾಜಿಯೇ ಇಲ್ಲದಿರುವುದು ಜೈನ ಧರ್ಮದಲ್ಲಿ. ಗಾಂಧಿಯ ಒಲವು ಈ ವಿಚಾರದಲ್ಲಿ ಹೆಚ್ಚಾಗಿ ಜೈನ ಧರ್ಮದ ಕಡೆಗೆ ಇದೆ.

ಇದು ಇತರ ಧರ್ಮಗಳಿಂದ ಸ್ವೀಕರಿಸಿದ ವಿಷಯವಾಯಿತು. ಗಾಂಧೀಜಿಯ ಬಳಿ ರಾಜಿಯಾಗದ ಧಾರ್ಮಿಕ ನಿಲುವುಗಳೂ ಇದ್ದವು. ಗಾಂಧೀಜಿಯ ಬಗ್ಗೆ ಧಾರ್ಮಿಕ ರಾಜಿ ಮಾಡಿಕೊಂಡ ಆರೋಪವಿದೆ. ವ್ಯಾವಹಾರಿಕವಾಗಿ ಅವರು ಹೊಂದಾಣಿಕೆ ಮಾಡಿಕೊಂಡ ಕೆಲವು ಘಟನೆಗಳು ಇವೆ. ಆದರೆ ಅದು ಧಾರ್ಮಿಕ ರಾಜಿ ಅಲ್ಲ. ಅಲ್ಲಾಹು ಜಗತ್ತಿನ ಒಡೆಯ, ರಾಮ ತುಂಡರಸ; ಆದ್ದರಿಂದ ನೀವು ರಾಮ್ ರಹೀಂ ಎಂದು ಹೇಳಬಾರದು ಎಂದಾಗ, " ಅದಾಗುವುದಿಲ್ಲ. ರಾಮನ ಮೌಲ್ಯಗಳು ಜಾಗತಿಕವಾದವುಗಳು. ನಾನು ರಾಮ್

ರಹೀಂ ಎಂದೇ ಹೇಳುತ್ತೇನೆ" ಎಂದು ಉತ್ತರಿಸಿದ್ದರು. " ಸರಕಾರ ಕೊಡುವ ಭದ್ರತೆಯಲ್ಲಿ ಧರ್ಮ ಪ್ರಚಾರ ಆಗುವ ಪರಿಸ್ಥಿತಿ ಯಾವುದಾದರೂ ಧರ್ಮಕ್ಕೆ ಇದ್ದರೆ ನೀವು ಧರ್ಮ ಪ್ರಚಾರ ಮಾಡಬೇಡಿ" ಎಂದು ಕ್ರೈಸ್ತ ಮಿಷನರಿಗಳಿಗೂ ಹೇಳಿದ್ದರು. " ನಾನೊಬ್ಬ ಸನಾತನಿ ಹಿಂದೂ" ಎನ್ನುವ ಗಾಂಧೀಜಿಯ ಮಾತನ್ನು " ಆದ್ದರಿಂದಲೇ ನಾನು ಮುಸ್ಲಿಂ, ಕ್ರೈಸ್ತ, ಸಿಖ್ಖನೂ ಆಗಬಲ್ಲೆ" ಎಂಬ ಮಾತಿನ ಹಿನ್ನೆಲೆಯಲ್ಲೆ ಅರ್ಥ ಮಾಡಿಕೊಳ್ಳಬೇಕು.

ಗಾಂಧೀಜಿಯವರ ಒಟ್ಟೂ ಚಿಂತನೆಗಳು ಒಂದಕ್ಕೊಂದು ಪೂರಕವಾಗಿ ಚರ್ಮ ಮಾಂಸಗಳು ಹೊಂದಿಕೊಂಡಂತೆ ಇರುವಂತಹವು. ಅವರ ನಿಸರ್ಗ ತತ್ವಗಳನ್ನು ಕೂಡ ಧಾರ್ಮಿಕ ಚಿಂತನೆಗಳೊಂದಿಗೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. "ಸತ್ಯ ಮತ್ತು ಅಹಿಂಸೆ ಈ ಪರ್ವತಗಳಷ್ಟೇ ಪುರಾತನವಾದದ್ದು. ಸತ್ಯ ಮತ್ತು ಅಹಿಂಸೆ ದೇವರ ನಿಯಮ" ಎನ್ನುವ ಮಾತಿನಲ್ಲಿ ನಿಸರ್ಗ ಮತ್ತು ದೇವರ ನಡುವೆ ಸಂಬಂಧವನ್ನು ಗಾಂಧೀಜಿ ಏರ್ಪಡಿಸುತ್ತಾರೆ. ಋಗ್ವೇದದಲ್ಲಿ 'ಋತ' ಎಂಬ ಪರಿಕಲ್ಪನೆ ಬರುತ್ತದೆ. ಸಹಜವಾಗಿರುವುದನ್ನು ಸಹಜವಾಗಿಯೇ ಬಿಡಬೇಕು ಎನ್ನುವುದು ಋತದ ಪರಿಕಲ್ಪನೆಯಾಗಿದೆ. ನದಿ ಹರಿಯುತ್ತದೆ. ಅದರಿಂದ ನೀರನ್ನು ತೆಗೆದುಕೊಳ್ಳಬಹುದು. ಆದರೆ ಅದನ್ನು ಅಡ್ಡ ಹಾಕಿ ಅದರ ದಿಕ್ಕನ್ನು ಬದಲಿಸಲು ಮನುಷ್ಯ ಹೋಗಬಾರದು...ಹೀಗೆ. ಹಿಂದೂ ಧರ್ಮದ ಅನೇಕ ಸಂಗತಿಗಳು ನಿಸರ್ಗ ತತ್ವಗಳಿಂದಲೇ ಬಂದಿದೆ. ಉದಾಹರಣೆಗೆ " ಶತಮಾನಂ ಭವತಿ" ಎಂದು ಆಶೀರ್ವಾದ ಮಾಡುವುದು. ಸಾರ್ವಕಾಲಿಕವಾಗಿ ಬದುಕಿರು ಎಂದಲ್ಲ. ಸಾರ್ವಕಾಲಿಕ ಬದುಕು ನಿಸರ್ಗ ತತ್ವ ಅಲ್ಲ. ಅರಣ್ಯಕಗಳು ಮತ್ತು ಉಪನಿಷತ್ತುಗಳನ್ನು ನೋಡಿದರೆ 'ಸತ್' ಅನ್ನು ಅನೇಕ ರೀತಿಯಲ್ಲಿ ಶೋಧಿಸುವ ಪ್ರಕ್ರಿಯೆಯನ್ನು ಕಾಣಬಹುದು. ಇವುಗಳಲ್ಲಿ ಅರಣ್ಯಕಗಳು ನಿಸರ್ಗ ತತ್ವಗಳನ್ನೆ ಆಧರಿಸಿವೆ. ಗಾಂಧೀಜಿಯೂ ತಮ್ಮ ಆತ್ಮಕಥೆಯನ್ನು ಸತ್ ನ ಶೋಧನೆಯೇ ನನ್ನ ಜೀವನದ ಗುರಿ ಎಂದು ಹೇಳುತ್ತಾರೆ. ಮಹಾಭಾರತದಲ್ಲಿ ವನವಾಸಿಗಳಾದ ಪಾಂಡವರ ಘಟನೆಯೊಂದು ಬರುತ್ತದೆ. ಸಿಟ್ಟಿನಲ್ಲಿದ್ದ ನಕುಲ ಕಟ್ಟಿಗೆಗಳನ್ನು ರಾಶಿ ರಾಶಿಯಾಗಿ ಒಡೆದು ಹಾಕುತ್ತಾನೆ. ಅದನ್ನು ನೋಡಿದ ಯುಧಿಷ್ಠಿರ," ನಮ್ಮಅಗತ್ಯಕ್ಕಿಂತ ಜಾಸ್ತಿ ಒಂದು ಹುಲ್ಲು ಕಡ್ಡಿಯನ್ನು ಬಳಸುವುದೂ ಅಧರ್ಮ" ಎನ್ನುತ್ತಾನೆ. ಗಾಂಧೀಜಿಯೂ ಪ್ರಕೃತಿಯು ಮನುಷ್ಯನ ಎಲ್ಲ ಆಸೆಗಳನ್ನು ಪೂರೈಸಬಲ್ಲುದು; ದುರಾಸೆಗಳನ್ನಲ್ಲ ಎನ್ನುತ್ತಾರೆ.


1947 ರಲ್ಲಿ ಭಾರತದಲ್ಲಿ ಮತೀಯ ಗಲಭೆಗಳು ಆದಾಗ ವಿನ್ಸನ್ ಚರ್ಚಿಲ್," ಭಾರತದಲ್ಲಿ ಇನ್ನು ಸದಾ ಕಾಲ ರಕ್ತಪಾತವೇ ಆಗಲಿದೆ" ಎಂದಿದ್ದರು. ಚರ್ಚಿಲ್ಗೆ ಉತ್ತರಿಸಿದ ಗಾಂಧೀಜಿ," ಭಾರತದಲ್ಲಿ ರಕ್ತಪಾತವೇ ಆದರೆ ಇಂಗ್ಲೆಂಡ್ ಹೇಗೆ ನೆಮ್ಮದಿಯಲ್ಲಿರುತ್ತದೆ?" ಎಂದು ಪ್ರಶ್ನಿಸುತ್ತಾರೆ. ಗಾಂಧಿ ಯಾಕೆ ಹೀಗೆ ಹೇಳುತ್ತಾರೆ ಎಂದು ಥಟ್ಟನೆ ನಮಗೆ ಹೊಳೆಯಲು ಸಾಧ್ಯವಿಲ್ಲ. ಆದರೆ ಕೊರೋನಾ ಬಂದಾಗ ಗಾಂಧಿ ಹೇಳಿದ್ದು ಏನು ಎಂದು ಅರ್ಥವಾಯಿತು. ರಾಷ್ಟ್ರಗಳು ಕೇವಲ ರಾಜಕೀಯ ಗಡಿರೇಖೆಗಳು. ಭೂಗೋಳಕ್ಕೆ ರಾಜಕೀಯ ಗಡಿರೇಖೆಗಳಿಲ್ಲ. ಚೀನಾವನ್ನು ದಾಟಿ ಕೊರೋನಾ ಇಡೀ ಜಗತ್ತಿಗೆ ಹೋಯಿತು. ಜಗತ್ತಿನ ಯಾವ ಮೂಲೆಯಲ್ಲಿ ಏನೇ ಆದರೂ ಅದರ ಪರಿಣಾಮಗಳು ಎಲ್ಲ ಕಡೆಗಳಲ್ಲೂ ಆಗುತ್ತವೆ ಎನ್ನುವುದು ನಿಸರ್ಗ ತತ್ವ. ಈ ನಿಸರ್ಗ ತತ್ವದ ಮೂಲಕ ಗಾಂಧಿ ಜಗತ್ತನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಆದ್ದರಿಂದಲೇ ಅವರಿಗೆ ಬ್ರಿಟಿಷರನ್ನು ಕೂಡ ದ್ವೇಷಿಸದೆ ಬ್ರಿಟಿಷರನ್ನು ವಿರೋಧಿಸಲು ಸಾಧ್ಯವಾಯಿತು.



ಗಾಂಧೀಜಿ ವಕೀಲ ವೃತ್ತಿ ಮತ್ತು ಆಧುನಿಕ ವೈದ್ಯಕೀಯವನ್ನು ವಿರೋಧಿಸಿದ್ದರು. ವಕೀಲರು ಸುಳ್ಳು ಹೇಳುವುದನ್ನು ಕಲಿಸುತ್ತಾರೆ, ವೈದ್ಯರು ನಮ್ಮ ದೇಹದ ಮೇಲೆ ನಾವು ಕಾಳಜಿ ಇಡದಂತೆ ಮಾಡುತ್ತಾರೆ ಎಂದು ಅವರ ವಾದ. ಗಾಂಧೀಜಿಯವರ ಚಿಕಿತ್ಸಾ ಪದ್ಧತಿಗಳು ಮಣ್ಣಿನ ಚಿಕಿತ್ಸೆ ಮತ್ತು ಜಲ ಚಿಕಿತ್ಸೆಗಳೆರಡೇ ಆಗಿದ್ದವು. ಇಲ್ಲಿಯೂ ಅವರು ನಿಸರ್ಗ ತತ್ವವನ್ನೆ ಅಳವಡಿಸಿಕೊಂಡಿದ್ದಾರೆ.

ಗಾಂಧೀಜಿಯವರ ನಿಸರ್ಗ ತತ್ವಗಳ ಬಹುದೊಡ್ಡ ಕಾಣ್ಕೆ ಇರುವುದು ಅವರ ಗ್ರಾಮ ಸ್ವರಾಜ್ಯ ಕಲ್ಪನೆಯಲ್ಲಿ. ಮನುಷ್ಯ ಮೂಲತಃ ಒಳ್ಳೆಯವನು. ಅವನ ಒಳ್ಳೆಯತನವು ಪ್ರಕಟವಾಗುವ ಹಾಗೆ ಮಾಡುವುದು ಶಿಕ್ಷಣದ ಕೆಲಸ ಎನ್ನುವ ಗಾಂಧೀಜಿಯವರ ಚಿಂತನೆಯಲ್ಲಿ ತಾತ್ವಿಕವಾಗಿ ಜಾನ್ ಲಾಕ್ ಅವರ ' ನಿಸರ್ಗ ರಾಜ್ಯ' ದ ಪರಿಕಲ್ಪನೆಯ ಇರುವಿಕೆಯನ್ನು ಕಾಣಬಹುದು.

ಮನುಷ್ಯನ ವಿಚಾರಕ್ಕೆ ಬಂದಾಗ ನಿಸರ್ಗ ತತ್ವಗಳೂ ಅವುಗಳ ಸಹಜತೆಗಿಂತ ಭಿನ್ನವಾದ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಉದಾಹರಣೆಗೆ ಒಂದು ಪ್ರಾಣಿ ಮತ್ತೊಂದು ಪ್ರಾಣಿಯನ್ನು ಹಿಡಿದು ತಿನ್ನುವುದು ನಿಸರ್ಗ ತತ್ವ. ಆದರೆ ಹೊಟ್ಟೆ ತುಂಬಿದ ಹುಲಿ ಪಕ್ಕದಲ್ಲೆ ಜಿಂಕೆ ಇದ್ದರೂ ಅದನ್ನು ಕೊಂದು ಮಾಂಸ ಮಾಡಿ ಡಬ್ಬದಲ್ಲಿ ಹಾಕಿ ಮಾರುಕಟ್ಟೆಯಲ್ಲಿ ಮಾರುವುದಿಲ್ಲ. ಆದ್ದರಿಂದಲೇ ಜಿಂಕೆಯ ಸಂತತಿ ನಾಶವಾಗಲಿಲ್ಲ. ಆದರೆ ಮನುಷ್ಯನಿಗೆ ಬಂದಾಗ ಈ ಸ್ಥಿತಿ ಹೀಗೆಯೇ ಕಚ್ಚಾ ರೂಪದಲ್ಲಿ ಇರುವುದಿಲ್ಲ. ತಿನ್ನಲು ಬಳಸಿದರೆ ಧರ್ಮ. ಮಾರಾಟ ಮಾಡಿ ಹಣದ ದಂಧೆ ಮಾಡಲು ಬಳಸಿದರೆ ಅಧರ್ಮ ಎಂಬ ಅರ್ಥವನ್ನು ಪಡೆಯುತ್ತದೆ. ಇಲ್ಲಿ ಸಂಸ್ಕೃತಿ ಮತ್ತು



ನಾಗರಿಕತೆ ಎಂಬ ಎರಡು ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಋಗ್ವೇದದಲ್ಲಿ ಅಣಿ ಮಾಂಡವ್ಯನ ಕಥೆ ಬರುತ್ತದೆ. " ನಮೋ ಅರ್ಭಕೇಭ್ಯಃ" ಎಂದು ಬರುವುದು ಅಲ್ಲಿಯೇ. ಬಾಲ್ಯದಲ್ಲಿ ಪ್ರಾಣಿ ಹಿಂಸೆ ಮಾಡಿದ್ದಕ್ಕಾಗಿ ಮಾಂಡವ್ಯನಿಗೆ ಯಮ ಶಿಕ್ಷೆ ಕೊಟ್ಟಾಗ," ಆಗ ನಾನು ಬಾಲಕನಾಗಿದ್ದೆ. ನನಗೆ ಸರಿ ತಪ್ಪುಗಳ ಅರಿವಿರಲಿಲ್ಲ" ಎಂದು ಮಾಂಡವ್ಯ ಉತ್ತರಿಸುತ್ತಾನೆ. ಸಂಸ್ಕೃತಿಯು ಬಾಲ್ಯವನ್ನು ವಿಸ್ತರಿಸಲು ಬಯಸುತ್ತದೆ. ನಾಗರಿಕತೆಯು ಬಾಲ್ಯವನ್ನು ಕಡಿಮೆಗೊಳಿಸಿ ಬೌದ್ಧಿಕ ಮಾನವನನ್ನು ವಿಸ್ತರಿಸಲು ಬಯಸುತ್ತದೆ. ಪ್ರಾಮಾಣಿಕ ಮುಗ್ಧತೆಯು ಸಂಸ್ಕೃತಿಯಾಗಿ ನಿಂತರೆ, ಲೆಕ್ಕಚಾರದ ಬುದ್ಧಿವಂತಿಕೆಯು ನಾಗರಿಕತೆಯಾಗಿ ನಿಲ್ಲುತ್ತದೆ. ಸಂಸ್ಕೃತಿಯು ನಿಸರ್ಗದ ಪ್ರತಿನಿಧಿತ್ವವನ್ನು ಹೊಂದಿದೆ.

ಗಾಂಧೀಜಿಯವರ 'ಹಿಂದ ಸ್ವರಾಜ್' ಅನ್ನು ನೋಡಿದರೆ ಅಥವಾ ಅವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಅರ್ಥ ಮಾಡಿಕೊಂಡರೆ ಅವರ ನಿಸರ್ಗ ತತ್ವಗಳೂ ಅರ್ಥವಾಗುತ್ತವೆ. ಇದನ್ನು ಅರ್ಥ ಮಾಡಿಸುವುದು ತುಸು ಕಷ್ಟ; ಗೊತ್ತಾಗದಿದ್ದರೆ ಆಮೇಲೆ ಕೇಳಿ. ನಿಮಗೊಂದು ಉದಾಹರಣೆ ಕೊಡುತ್ತೇನೆ. ಗ್ರೀಕ್ ಸಾಹಿತ್ಯದಲ್ಲಿ ಡಯೋಜನಿಸ್ ಎಂದು ಒಬ್ಬ ಸಂತ ಬರುತ್ತಾನೆ. ಅವನ ಬಳಿ ಯಾವ ಆಸ್ತಿ, ಹಣ ಎಂತದೂ ಇಲ್ಲ. ಸಹಜವಾಗಿ ಬದುಕುವವನು. ನೀರು ಕುಡಿಯಲು ನೀರಿನ ಪಾತ್ರೆಯೊಂದು ಮಾತ್ರ ಅವನ ಬಳಿ ಇತ್ತು.

ಒಂದು ದಿನ ಡಯೋಜನಿಸ್ ನಡೆದು ಹೋಗುವಾಗ ಒಂದು ನಾಯಿ ಕೊಳದಿಂದ ನೀರು ಕುಡಿಯುವುದನ್ನು ನೋಡಿದ. ಅದನ್ನು ನೋಡಿ ಡಯೋಜನಿಸ್," ಈ ನಾಯಿ ಎಂಥ ವಿವೇಕಿ. ನೀರು ಕುಡಿಯಬೇಕಾದರೆ ಪಾತ್ರೆಯ ಅಗತ್ಯ ಇಲ್ಲ ಎಂದು ಅದಕ್ಕೆ ಗೊತ್ತಿದೆ" ಎಂದುಕೊಂಡವನೇ ಅವನ ಬಳಿ ಇದ್ದ ನೀರಿನ ಪಾತ್ರೆಯನ್ನು ಎಸೆದ.

ಈ ಕಥೆಯನ್ನು ಹೇಳಿದ ಉದ್ದೇಶ ಏನೆಂದರೆ ನಾಯಿ, ಬೆಕ್ಕು, ದನ ಅವೆಲ್ಲಕ್ಕೂ ಅವುಗಳದೇ ಆದ ಜೀವನ ಪದ್ಧತಿ ಇದೆ. ಪ್ರಕೃತಿಗೂ ನಿಯಮವಿದೆ. ನೀರು ಕೆಳಕ್ಕೇ ಹರಿಯುತ್ತದೆ. ಬೆಂಕಿಯ ಜ್ವಾಲೆ ಮೇಲಕ್ಕೇ ಹೋಗುತ್ತದೆ. ಆದರೆ ಈ ನಿಯಮಗಳನ್ನು ಪಾಲಿಸಬೇಕು ಎಂದು ನಿರ್ದೇಶಿಸಲು ಅಲ್ಲಿ ಪೊಲೀಸರೊ, ನ್ಯಾಯಾಧೀಶರೋ, ಸರಕಾರದವರೊ ಇದ್ದಾರಾ? ಇಲ್ಲ. ಅಂದರೆ ನಿಸರ್ಗ ಸ್ವಯಂ ಶಿಸ್ತಿನಿಂದ ನಡೆಯುತ್ತಾ ಅದರದೆ ನಿಯಮದಂತೆ ಸಾಗುತ್ತದೆ. ಹಾಗಾದರೆ ಕಳ್ಳತನ ಮಾಡಬೇಡ, ಅತ್ಯಾಚಾರ ಮಾಡಬೇಡ, ಮೋಸ ಮಾಡಬೇಡ ಎಂದು ಹೇಳಲು ಮನುಷ್ಯನಿಗೆ ಮಾತ್ರ ಪೊಲೀಸು, ನ್ಯಾಯಾಂಗ, ಸರಕಾರ ಎಲ್ಲ ಯಾಕೆ; ಇವನಿಗೇ ಗೊತ್ತಿಲ್ವ ಇದನ್ನೆಲ್ಲ ಮಾಡಬಾರದೆಂದು. ಅಂದರೆ ಮನುಷ್ಯರು ಸ್ವಯಂ ಶಿಸ್ತನ್ನು ಹೊಂದಿಲ್ಲ. ಆದ್ದರಿಂದ ಪೊಲೀಸರ ಭಯಕ್ಕಾಗಿ ಮನುಷ್ಯರು ನಿಯಮಗಳನ್ನು ಪಾಲಿಸುತ್ತಾರೆ. ಪ್ರಭುತ್ವದ ಭಯದಿಂದ ನಿಯಮವನ್ನು ಪಾಲಿಸುವಂತಾಗಬಾರದು, ಸ್ವಯಂ ಶಿಸ್ತಿನಿಂದಲೇ ಜನ ನಿಯಮಗಳನ್ನು ಪಾಲಿಸುವಂತಾಗಬೇಕು ಎನ್ನುವುದು ಗಾಂಧೀಜಿಯವರ ತತ್ವ. ಇದು ನಿಸರ್ಗ ತತ್ವವೇ. " ಒಬ್ಬ ಮಹಿಳೆ ನಡು ರಾತ್ರಿಯಲ್ಲಿ ಒಂಟಿಯಾಗಿ ಓಡಾಡಲು ಸಾಧ್ಯವಾಗಬೇಕು" ಎನ್ನುವ ಗಾಂಧೀಜಿಯವರ ಆಶಯ ಈಡೇರುವುದು ಸ್ವಯಂ ಶಿಸ್ತಿನ ಸಮಾಜದಲ್ಲಿ. ಪೊಲೀಸರ ಕಾವಲಿನಲ್ಲಿ ನಡೆಯುವ ಸಮಾಜದಲ್ಲಿ ಇದು ಸಾಧ್ಯವಾಗುವುದಿಲ್ಲ. ಪೊಲೀಸರ ಕಣ್ಣು ತಪ್ಪಿಸಿಯಾದರೂ ಕೆಟ್ಟ ಕೆಲಸಗಳು ನಡೆಯುತ್ತವೆ. ಆದರೆ ಸ್ವಯಂ ಶಿಸ್ತಿಗೆ ಬದ್ಧವಾದ ಸಮಾಜದಲ್ಲಿ ಕೆಟ್ಟದ್ದು ನಡೆಯುವುದಿಲ್ಲ.

ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕೇವಲ ಆರ್ಥಿಕ ಪರಿಕಲ್ಪನೆ ಅಲ್ಲ. ಆಡಳಿತಾಧಿಕಾರವನ್ನು ಗಾಂಧೀಜಿ ಪ್ರಭುತ್ವದ ಕೈಯಿಂದ ಜನರ ಕೈಗೆ ಕೊಡುತ್ತಾರೆ. ಗ್ರಾಮದ ಜನರು ತಮ್ಮನ್ನು ತಾವೇ ಆಳಿಕೊಳ್ಳುವುದೇ ಗ್ರಾಮ ಸ್ವರಾಜ್ಯ. ಪುರಾತನ ಭಾರತದ ಗಣರಾಜ್ಯಗಳ ಹಾಗೆ, ಅಲ್ಲಿ ತಮಗೆ ಬೇಕಾದ ನಿಯಮವನ್ನು ಜನರೇ ಮಾಡಿಕೊಂಡು ಅವರೇ ಪಾಲಿಸುತ್ತಾರೆ. ಗ್ರಾಮ ಸ್ವರಾಜ್ಯ ಕೇವಲ ಆರ್ಥಿಕ ಪರಿಕಲ್ಪನೆಯಲ್ಲ. ಅದಕ್ಕಿಂತ ಹೆಚ್ಚಾಗಿ ಅದು ಸ್ವಯಂ ಶಿಸ್ತಿನ ಪರಿಕಲ್ಪನೆ. ಈ ಸ್ವಯಂ ಶಿಸ್ತು ಎನ್ನುವುದು ನಿಸರ್ಗ ತತ್ವವೇ ಆಗಿದೆ.

ಗಾಂಧೀಜಿಯವರ ಚಿಂತನೆಯಲ್ಲಿ ಸ್ವಯಂ ಶಿಸ್ತು ಉಳಿದೆಲ್ಲ ಕ್ರಿಯೆಗಳ ಆಧಾರ. ಸ್ವಯಂ ಶಿಸ್ತಿನ ಸಾಧನೆಯ ಮಾರ್ಗ ಸ್ವಯಂ ನಿಯಂತ್ರಣ. ಈ ಸ್ವಯಂ ನಿಯಂತ್ರಣದ ಪರಿಕಲ್ಪನೆಯು ಬ್ರಹ್ಮಚರ್ಯಕ್ಕೆ ಮಾತ್ರ ಸೀಮಿತವಾದುದಾಗಿರಲಿಲ್ಲ. ಆದರೆ ಬ್ರಹ್ಮಚರ್ಯವು ಸ್ವಯಂ ನಿಯಂತ್ರಣಕ್ಕೆ ಬಲಿಷ್ಠ ಶಕ್ತಿಯನ್ನು ಒದಗಿಸುತ್ತದೆ.

ಈ ಸ್ವಯಂ ನಿಯಂತ್ರಣದ ಉಪಯೋಗ, ಆಸೆಗಳ ನಿಯಂತ್ರಣವಾಗಿರುತ್ತದೆ. ಆಸೆಗಳ ನಿಯಂತ್ರಣ ಆಗುತ್ತಾ ಹೋದ ಹಾಗೆ ನಿಸರ್ಗದ ಬಳಕೆ ಕಡಿಮೆಯಾಗುತ್ತದೆ. ನಿಸರ್ಗದ ಬಳಕೆ ಕಡಿಮೆಯಾದಾಗ ನಿಸರ್ಗದ ಸಂರಕ್ಷಣೆ ಜಾಸ್ತಿಯಾಗುತ್ತದೆ. ಅಂತಿಮವಾಗಿ ನಿಸರ್ಗದಿಂದ ಮನುಷ್ಯ ಪ್ರತ್ಯೇಕವಾಗದೆ ನಿಸರ್ಗದೊಂದಿಗೆ ಬದುಕಲು ಸಾಧ್ಯವಾಗುತ್ತದೆ.




ಈ ನಿಸರ್ಗ ತತ್ವಕ್ಕೆ ಆಧಾರವಾಗಿ ಧಾರ್ಮಿಕ ತತ್ವಗಳ ಇರುವಿಕೆಯನ್ನು ಗುರುತಿಸಬಹುದು. ಜೈನ ಧರ್ಮದಲ್ಲಿ

' ಸಮವಸರಣ' ಎಂಬ ಪರಿಕಲ್ಪನೆ ಬರುತ್ತದೆ. ಸಮವಸರಣದಲ್ಲಿ ಮನುಷ್ಯನೂ ಸೇರಿದ ಹಾಗೆ ಸೃಷ್ಟಿಯ ಎಲ್ಲ ಜೀವಿಗಳೂ ' ಇಂದ್ರ' ಸಭೆಯಲ್ಲಿ ಸೇರುತ್ತವೆ. ಅಂದರೆ ಈ ತತ್ವದ ಪ್ರಕಾರ ಮನುಷ್ಯನಿಗೆ ಉಳಿದೆಲ್ಲ ಜೀವಿಗಳೊಂದಿಗೆ ಅಸ್ತಿತ್ವ ಇರುವುದೇ ಹೊರತು ಪ್ರತ್ಯೇಕ ಸ್ವತಂತ್ರ ಅಸ್ತಿತ್ವ ಇಲ್ಲ. ಆದರೆ ವಾಸ್ತವದಲ್ಲಿ ಮನುಷ್ಯನಿಗೆ ಎರಡು ರೀತಿಯ ಅಸ್ತಿತ್ವಗಳಿವೆ. ಮಾನವ ಸಮಾಜದಲ್ಲಿ ಸಮಾಜ ಜೀವಿಯಾಗಿ ಒಂದು ಅಸ್ತಿತ್ವ, ನಿಸರ್ಗದ ಒಂದು ಜೀವಿಯಾಗಿ ನಿಸರ್ಗದೊಂದಿಗೆ ಒಂದು ಅಸ್ತಿತ್ವ. ಇದರಲ್ಲಿ ಮಾನವ ಸಮಾಜ ಎಂಬ ರೇಖೆಯನ್ನು ಅಳಿಸಿ ಹಾಕಿದಾಗ ಅಥವಾ ಮಬ್ಬಾಗಿಸಿದಾಗ ಮನುಷ್ಯನಿಗೆ ನೈಸರ್ಗಿಕ ಅಸ್ತಿತ್ವ ಒಂದೇ ಉಳಿಯುತ್ತದೆ. ಈ ನಿಟ್ಟಿನಲ್ಲಿ ಜೈನ ಧರ್ಮ ಬಹಳ ಶೋಧನೆಯನ್ನು ನಡೆಸಿದೆ. ಬೌದ್ಧ ಧರ್ಮದಲ್ಲೂ ಇದೇ ತಾತ್ವಿಕ ನಿಲುವನ್ನು ಕಾಣಬಹುದು. ಸನಾತನ ಧರ್ಮದಲ್ಲೂ ಇದೇ ನಿಲುವು ಇದೆ. ಅದು ' ಏಕ ಅಸ್ತಿತ್ವ' ವನ್ನು ಬಹಳ ದೊಡ್ಡ ಮಟ್ಟಕ್ಕೆ ಒಯ್ಯುತ್ತದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಯಾಜ್ಞವಲ್ಕ್ಯ– ಮೈತ್ರೇಯಿ ಸಂವಾದದಲ್ಲಿ," ನಾನು ನಿನ್ನನ್ನು ಪ್ರೀತಿಸುವುದು ನಿನ್ನ ಮೇಲೆ ನನಗೆ ಪ್ರೀತಿ ಇರುವುದರಿಂದ ಅಲ್ಲ. ಬದಲು ನನಗೆ ನನ್ನ ಮೇಲೆ ಪ್ರೀತಿ ಇರುವುದರಿಂದ ನೀನು ನನಗೆ ಬೇಕಾದವಳಿರುವುದರಿಂದ ನಿನ್ನನ್ನು ನಾನು ಪ್ರೀತಿಸುತ್ತೇನೆ. ಭಕ್ತ ಭಗವಂತನನ್ನು ಪ್ರೀತಿಸುವುದು ಭಗವಂತನ ಮೇಲಿನ ಪ್ರೀತಿಯಿಂದಲ್ಲ. ಭಕ್ತನಿಗೆ ತನ್ನ ಮೇಲೆ ಪ್ರೀತಿ ಇರುವುದರಿಂದ ಭಕ್ತನಿಗೆ ಭಗವಂತನ ಅಗತ್ಯವಿರುವುದರಿಂದ ಭಗವಂತನನ್ನು ಪ್ರೀತಿಸುತ್ತಾನೆ. ಹಾಗೆಯೇ ನಾವು ವಿಶ್ವವನ್ನು ಪ್ರೀತಿಸಬೇಕಾದ್ದು ವಿಶ್ವದ ಮೇರಲಿನ ಪ್ರೀತಿಗಾಗಿ ಅಲ್ಲ. ನಮ್ಮ ಮೇಲೆ ಪ್ರೀತಿ ಇರುವುದರಿಂದ, ವಿಶ್ವದ ಇರುವಿಕೆಯಿಂದಲೇ ನಾವೂ ಇರುವುದರಿಂದ ವಿಶ್ವವನ್ನು ಪ್ರೀತಿಸಬೇಕು" ಎನ್ನುತ್ತಾರೆ. ಅಂದರೆ ಇಡೀ ವಿಶ್ವದ ಒಂದಂಶವಾಗಿ ಮನುಷ್ಯ ತನ್ನನ್ನು ತಾನು ಅರ್ಥ ಮಾಡಿಕೊಳ್ಳಬೇಕು ಎನ್ನುವುದು ಇಲ್ಲಿನ ತತ್ವವಾಗಿದೆ. ಉದಾಹರಣೆಗೆ ಮನುಷ್ಯ ಮತ್ತು ನಿಸರ್ಗವನ್ನು ಪ್ರತ್ಯೇಕವಾಗಿ ಅರ್ಥ ಮಾಡಿಕೊಂಡಾಗ, ಸಸ್ಯಗಳ ಆಹಾರ ತಯಾರಿಕೆಗೆ ಇಂಗಾಲದ ಡೈ ಆಕ್ಸೈಡ್ ಬೇಕು. ಪ್ರಾಣಿಗಳ ಉಸಿರಾಟದ ಉತ್ಪನ್ನವಾಗಿ ಅದು ದೊರೆಯುತ್ತದೆ ಹಾಗೂ ಸಸ್ಯಗಳು ತ್ಯಜಿಸುವ ಆಮ್ಲಜನಕವು ಪ್ರಾಣಿಗಳ ಉಸಿರಾಟಕ್ಕೆ ಬೇಕು, ಆದ್ದರಿಂದ ಸಸ್ಯ ಸಂರಕ್ಷಣೆ ಮಾಡಬೇಕು ಇತ್ಯಾದಿ ಇತ್ಯಾದಿಯಾಗಿ ಅನಿಸುತ್ತದೆ. ಬದಲಿಗೆ ಮನುಷ್ಯನೂ ನಿಸರ್ಗದ ಭಾಗವೇ ಎಂದು ಅರ್ಥ ಮಾಡಿಕೊಂಡಾಗ ಸಸ್ಯಗಳ ಅರ್ಧ ಜೀವ ನಮ್ಮ ಬಳಿ ಇದೆ, ನಮ್ಮ ಅರ್ಧ ಜೀವ ಸಸ್ಯಗಳ ಬಳಿ ಇದೆ ಎಂಬ ಅರಿವು ಹುಟ್ಟುತ್ತದೆ. ಆಗ ಸಸ್ಯಗಳನ್ನು ನಮ್ಮ ಜೀವನದ ಭಾಗವಾಗಿಯೇ ಸ್ವೀಕರಿಸುವ ಮನೋಭಾವ ಬೆಳೆಯುತ್ತದೆ.

ಹೀಗೆ, ಗಾಂಧೀಜಿಯವರ ನಿಸರ್ಗ ತತ್ವಗಳು ಎಲ್ಲವನ್ನೂ ಇಡಿಯಾಗಿಯೆ ಗ್ರಹಿಸುವ ಅವರ ಗ್ರಹಿಕೆಯ ಕ್ರಮದಲ್ಲಿದೆ. ಗಾಂಧೀಜಿ ಯಾವುದನ್ನೂ ಬಿಡಿಬಿಡಿಯಾಗಿ ನೋಡುವುದಿಲ್ಲ. ಸಮಗ್ರವಾಗಿಯೇ ಅರ್ಥ ಮಾಡಿಕೊಳ್ಳುವುದು ಅವರ ಕ್ರಮ. ಆದ್ದರಿಂದ ಗಾಂಧೀಜಿಯವರ ಚಿಂತನೆಗಳು ಎಂದು ಗುರುತಿಸಬಹುದೆ ಹೊರತು ಗಾಂಧೀಜಿಯವರ ಆರ್ಥಿಕ ಚಿಂತನೆಗಳು, ಸಾಮಾಜಿಕ ಚಿಂತನೆಗಳು, ರಾಜಕೀಯ ಚಿಂತನೆಗಳು ಎಂದೆಲ್ಲ ಪ್ರತ್ಯೇಕಿಸಿ ನೋಡಲು ಆಗುವುದಿಲ್ಲ. ಎಲ್ಲವೂ ಪರಸ್ಪರ ಸಂಬಂಧ ಹೊಂದಿದವುಗಳು. ಗಾಂಧೀಜಿಯವರ ಆರ್ಥಿಕತೆ ಸಂಸ್ಕೃತಿಯೊಂದಿಗೆ, ಸಂಸ್ಕೃತಿ ನಿಸರ್ಗದೊಂದಿಗೆ, ನಿಸರ್ಗ ಧರ್ಮದೊಂದಿಗೆ, ಧರ್ಮ ನಿಸರ್ಗದೊಂದಿಗೆ ಹೀಗೆ ಸಂಬಂಧ ಸ್ಥಾಪಿಸಿಕೊಳ್ಳುತ್ತಾ ಹೋಗುತ್ತವೆ. ಅದಕ್ಕೇ ನೋಡಿ ಬ್ರಿಟಿಷರು " ನಾವು ಬರುವ ವರೆಗೆ ಭಾರತದಲ್ಲಿ ರಾಷ್ಟ್ರೀಯ ಏಕತೆಯೇ ಇರಲಿಲ್ಲ" ಎಂದು ಶುದ್ಧ ರಾಜಕೀಯ ಪರಿಭಾಷೆಯಲ್ಲಿ ಹೇಳಿದಾಗ ಗಾಂಧೀಜಿ," ಹಾಗೇನಿಲ್ಲ. ನೀವು ಬರುವ ಸಾವಿರಾರು ವರ್ಷಗಳ ಮೊದಲೇ ದೇಶದ ಎಲ್ಲ ಮೂಲೆಗಳಲ್ಲೂ ಇದ್ದ ಧಾರ್ಮಿಕ ಕೇಂದ್ರಗಳು ನಮ್ಮಲ್ಲಿ ಏಕತೆಯನ್ನು ತಂದಿದ್ದವು" ಎಂದು ಧಾರ್ಮಿಕ ಪರಿಭಾಷೆಯಲ್ಲಿ ಉತ್ತರಿಸುತ್ತಾರೆ. ಗಾಂಧೀಜಿ ಬಹಳ ಸಂಕೀರ್ಣ. ಯಾವ ನೆಲೆಯಲ್ಲಿ ನೋಡಿದರೂ ಅವರು ತನಗೆ ವಿರೋಧಿ ಎಂದು ಅನಿಸಿಬಿಡುತ್ತಾರೆ. ಎಲ್ಲ ನೆಲೆಗಳನ್ನು ಬಿಟ್ಟು ಮುಕ್ತವಾಗಿ ನೋಡಿದಾಗ ಮಾತ್ರ ಗಾಂಧಿ ಅರ್ಥವಾಗಲು ಶುರುವಾಗುವುದು. ಅವರು ಶುದ್ಧ ಸಾಂಸ್ಥಿಕ ಧಾರ್ಮಿಕನಾಗಿ ಕಾಣಿಸುತ್ತಾರೆ. ತನ್ನ ಧರ್ಮವನ್ನು ತಾನೇ ಶೋಧಿಸುವ ಶೋಧಕನಾಗಿ ಕಾಣಿಸುತ್ತಾರೆ. ಇತರ ಧರ್ಮಗಳಿಂದ ಪ್ರೇರಿತರಾಗಿಯೂ ಕಾಣಿಸುತ್ತಾರೆ. ಎಲ್ಲ ಮತಧರ್ಮಗಳನ್ನು ತೊರೆದವರಾಗಿಯೂ ಕಾಣಿಸುತ್ತಾರೆ. ಆದರೆ ನಿಸರ್ಗ ತತ್ವಗಳಲ್ಲಿ ಈ ರೀತಿ ಇಲ್ಲ. ನಿಸರ್ಗದೊಂದಿಗೆ ಒಂದು ಭಾಗವಾಗಿಯೇ ಬಾಳಬೇಕು ಎಂಬ ಅವರ ನಿಲುವಿನಲ್ಲಿ ಭಿನ್ನತೆ ಇಲ್ಲ.

(31– 1– 2023 ರಂದು ಶಿವಮೊಗ್ಗದ ಕಮಲಾ ನೆಹರೂ ಮೆಮೋರಿಯಲ್ ಕಾಲೇಜಿನಲ್ಲಿ ಮಾಡಿದ ಉಪನ್ಯಾಸ)

■



ಭಾಗ – 2

ಗಾಂಧಿ ಈ ಹೊತ್ತಿಗೂ ಯಾಕೆ ಪ್ರಸ್ತುತರು? ಹತ್ತು ಕಾರಣಗಳು....

–ರಾಮಚಂದ್ರ ಗುಹಾ

ನಾಲ್ಕನೆಯ ಕಾರಣ, ಗಾಂಧಿ ಗುಜರಾತಿ ಸಂಸ್ಕೃತಿಯಲ್ಲೇ ಮಿಂದೆದ್ದವರು. ಅವರು ಸಂಕುಚಿತ ಮನೋಭಾವದವರಾಗಿರಲಿಲ್ಲ. ಒಂದು ಪ್ರಾದೇಶಿಕತೆಗೆ ಅಂಟಿಕೊಂಡವರೂ ಆಗಿರಲಿಲ್ಲ. ಅವರು ಹಿಂದು ಆಗಿದ್ದಂತೆಯೇ, 'ಈಶ್ವರ್ ಅಲ್ಲಾ ತೇರೇ ನಾಮ್ ' ಹಾಡಿನಲ್ಲಿರುವಂತೆ ಕ್ರಿಶ್ಚಿಯನ್, ಮುಸ್ಲಿಮ್ ಮತ್ತು ಸಿಕ್ಖರನ್ನೂ ಪ್ರೀತಿಸುತ್ತಿದ್ದರು. ದೇವರು ಬರೀ ಈಶ್ವರ ಮತ್ತು ಅಲ್ಲಾ ಆಗಿರಲಿಲ್ಲ ಅವರಿಗೆ, ಹಿಂದೂ ಆಗಿ ಅವರು ಹಿಂದೂ ಮತ್ತು ಮುಸ್ಲಿಮರ ನಡುವೆ ಸ್ನೇಹದ ಸೇತುವೆ ಇರುವುದನ್ನು ಒಪ್ಪಿಕೊಳ್ಳಲು ಬಯಸಿದ್ದರು. ಅವರು ಹಿಂದುವಾಗಿದ್ದರೂ ಅವರ ಆತ್ಮೀಯ ಸ್ನೇಹಿತ ಆಂಗ್ಲ ಪಾದ್ರಿ ಚಾರ್ಲ್ಸ್ ಪ್ರಿಯರ್ ಆಂಡ್ರ್ಯೂಸ್ ಆಗಿದ್ದರು. ಅವರಲ್ಲಿ ಬೇರೆ ಧರ್ಮದವರಿಗೆ ಜಾಗವಿತ್ತು, ಒಳ್ಳೆಯದು ಎಲ್ಲಿದೆಯೋ ಅದನ್ನು ಮೆಚ್ಚಿಕೊಳ್ಳುವ, ಗುರುತಿಸುವ ಮನಸ್ಸಿತ್ತು. ಅವರು ಗುಜರಾತಿಯಾಗಿದ್ದರೂ ಬೇರೆ ಪ್ರದೇಶದವರ ಬಗ್ಗೆ ತಿಳಿದುಕೊಳ್ಳಲು, ಅರ್ಥ ಮಾಡಿಕೊಳ್ಳಲು ಮತ್ತು ಭಾರತದ ಬೇರೆ ಬೇರೆ ಪ್ರದೇಶಗಳೊಂದಿಗೆ ಸ್ನೇಹ ಸೇತುವೆ ನಿರ್ಮಿಸಲು ಬಯಸುತ್ತಿದ್ದರು. ಗಾಂಧಿ ಗುಜರಾತೀ ಭಾಷೆಯಲ್ಲಿ ಪರಿಸುತ್ತಾರೆ, ಅದು ಅವರ ಜೀವನದ ಒಂದು ಪ್ರೀತಿಯ ಒಂದು ಭಾಗ. ಗುಜರಾತಿಯಲ್ಲಿ ಅವರೊಬ್ಬ ಮಹತ್ವದ ಬರಹಗಾರ. ಅವರು ಗುಜರಾತಿ ಸಂಸ್ಕೃತಿಯನ್ನು ಅರೆದು ಕುಡಿದವರು. 'ವೈಷ್ಣವ ಜನತೋ' ವನ್ನು ಜಯಂತ ಕಾಯ್ಕಿಣಿಯವರ ಅನುವಾದದಲ್ಲಿ ಕನ್ನಡದಲ್ಲೂ ಹಾಡಲಾಗುತ್ತಿದೆ, ಅದನ್ನು ಬರೆದಿರುವುದು ಅವರ ನೆಚ್ಚಿನ, ಗುಜರಾತಿನ ಮಧ್ಯಕಾಲೀನ ಕವಿ ನರಸಿಂಹ ಮೆಹತಾ. ಯಾರೂ ಸಹ ಗಾಂಧಿ ಅವರನ್ನು ಗುಜರಾತಿನಿಂದ ದೂರವಾದವರೆಂದು, ಅವರಿಗೆ ಗುಜರಾತಿ ತಿಳಿಯದು ಎಂದು ದೂಷಿಸಲಾರರು. ಆದರೆ ಅವರ ಸ್ನೇಹವಲಯವನ್ನು ನೋಡಿದರೆ ತಿಳಿಯುತ್ತದೆ, ಅವರು ಹೇಗೆ ಕನ್ನಡಿಗರಿಗೆ, ತಮಿಳರಿಗೆ, ಬೆಂಗಾಳಿಗಳಿಗೆ, ಒರಿಸ್ಸಾದವರಿಗೆ, ಪಂಜಾಬಿಗಳಿಗೆ, ಸಿಂಧಿಗಳಿಗೆ ಹತ್ತಿರವಾಗಿದ್ದರು, ಹೀಗೆ ಭಾರತದ ವರ್ಣಮಯ– ಪ್ರಾದೇಶಿಕ, ಸಾಂಸ್ಕೃತಿಕ, ಧಾರ್ಮಿಕ, ಭಾಷಿಕ ವೈವಿಧ್ಯತೆಯ ಪ್ರತೀಕವಾಗಿದ್ದರು. ದಕ್ಷಿಣಾ ಆಫ್ರಿಕಾದಲ್ಲಿ ಕಳೆದ ದಿನಗಳಿಂದಾಗಿ ಅವರಿಗೆ ಭಾರತದ ವೈವಿಧ್ಯತೆಯು ಮೈಗೂಡಿಬಿಟ್ಟಿತ್ತು. ರಾಜಕೋಟೆ ಮತ್ತು ಬಾಂಬೆ (ಮುಂಬಯಿ)ಯಲ್ಲಿ ವಕೀಲಿ ವೃತ್ತಿಯಲ್ಲಿ ವಿಫಲರಾದ ಕಾರಣ ಅವರು ದಕ್ಷಿಣ ಆಫ್ರಿಕಾಗೆ ಹೋದರು.

ನಾನು ಯಾವಾಗಲೂ ವಿದ್ಯಾರ್ಥಿಗಳಿಗೆ ಒಂದು ಮಾತು ಹೇಳಲು ಇಷ್ಟಪಡುತ್ತೇನೆ, ಅದೇನೆಂದರೆ, ಅವರ ಪಾಲಕರು ವಿದ್ಯಾರ್ಥಿಗಳಿಗೆ ಯಾವಾಗಲೂ ನೀವು ತರಗತಿಯಲ್ಲಿ ಮೊದಲಿಗರಾಗಬೇಕು, ಮೊದಲ ಸ್ಥಾನ ಗಳಿಸಬೇಕು, ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯಲೇಬೇಕೆಂದಿದ್ದರೆ, ಮಧ್ಯರಾತ್ರಿಯೂ ಕೂತು ಓದಬೇಕು ಎಂದು ಹೇಳುತ್ತಾರೆ. ಅವರಿಗೆಲ್ಲಾ ನಾನು ಹೇಳುವುದು ಹೀಗೆ, ಗಾಂಧಿ ಅವರ ಜೀವನಪೂರ್ತಿ ಎರಡನೆಯ ದರ್ಜೆಯ ವಿದ್ಯಾರ್ಥಿಯೇ. ಅವರು ವಕೀಲ ವೃತ್ತಿಯಲ್ಲಿ ವಿಫಲರಾದವರು. ಇಂಗ್ಲೆಂಡಿನಿಂದ ಕಾನೂನು ಪದವಿ ಪಡೆದು ಬಂದವರು, ಆದರೆ ತಮ್ಮ ಸ್ವಂತ ಊರು ರಾಜಕೋಟೆ ಮತ್ತು ಬಾಂಬೆಯಲ್ಲಿ ವಕೀಲಿವೃತ್ತಿಯಲ್ಲಿ ಯಶಸ್ಸು ಕಾಣಲಿಲ್ಲ. ಈ ವೈಫಲ್ಯದಿಂದ ಅವರನ್ನು ಪಾರುಮಾಡಿದ್ದು ಗುಜರಾತಿನ ವ್ಯಾಪಾರಿಯೊಬ್ಬರಿಂದ ಬಂದ ಆಹ್ವಾನ, ಅದೂ ಓರ್ವ ಮುಸ್ಲಿಮನಿಂದ. ದಕ್ಷಿಣ ಆಫ್ರಿಕಾದಲ್ಲಿ ಒಂದು ವಾಣಿಜ್ಯ ವ್ಯವಹಾರದ ಇತ್ಯರ್ಥಕ್ಕಾಗಿ ಆತ ಗಾಂಧಿಯವರ ಸಹಾಯವನ್ನು ಅಪೇಕ್ಷಿಸಿದ್ದರು. ಹಾಗಾಗಿ ಅವರು ದಕ್ಷಿಣ ಆಫ್ರಿಕಾಗೆ ಹೋದರು.

ಈ ಬಗ್ಗೆ ವಾದ ಮಾಡುವುದಾದರೆ ಅವರು ಮುಂಬಯಿಯಲ್ಲಿ ವಕೀಲಿಕೆ ವೃತ್ತಿಯಲ್ಲಿ ಯಶಸ್ಸು ಸಾಧಿಸಿದ್ದರೆ, ವಿಫಲರಾಗಿರದಿದ್ದರೆ ಏನಾಗುತ್ತಿತ್ತು? 1889–1918ರ ಅವಧಿಯಲ್ಲಿ ಶೇಕಡಾ 90 ಅಥವಾ ಬಹುಶಃ 95 ರಷ್ಟು ಅವರ ಕಕ್ಷಿದಾರರು ಗುಜರಾತೀ ಬನಿಯಾಗಳೇ ಆಗಿರುತ್ತಿದ್ದರು, ಅವರಿಗೆ ಗೊತ್ತಿರಬಹುದಾದ ಒಂದೇ ಶಬ್ದ – ಸ್ವತಃ ಅವರೇ ಬನಿಯಾ ಆದ್ದರಿಂದ– 'ಬನಿಯಾ' ಆಗಿರುತ್ತಿತ್ತು. ಗಾಂಧಿ ಮುಂಬಯಿಯಲ್ಲಿ ಯಶಸ್ಸು ಗಳಿಸಿದ್ದರೆ ಡಿ.ಎಸ್. ನಾಗಭೂಷಣ ಅವರು ಈ ಪುಸ್ತಕವನ್ನು ಬರೆಯುತ್ತಿರಲಿಲ್ಲ. ನಾನು ಸಹ ಗಾಂಧಿ ಕುರಿತ ಪುಸ್ತಕಗಳನ್ನು ಬರೆಯುತ್ತಿರಲಿಲ್ಲ. ಅದೃಷ್ಟವಶಾತ್ ಅವರು ವಿಫಲರಾದರು. ಮುಸ್ಲಿಂ ವರ್ತಕರೊಬ್ಬರಿಂದಾಗಿ ಅವರು ಪಾರಾದರು. ತರುಣ ಗಾಂಧಿ 1893ರ ಏಪ್ರಿಲಿನಲ್ಲಿ ಡರ್ಬನ್ ನಲ್ಲಿ ಮೊದಲ ದಿನ ರಾತ್ರಿಯನ್ನು ಮುಸ್ಲಿಮರ ಮನೆಯಲ್ಲಿ ಕಳೆದರು. ರಾಜಕೋಟೆ ಅಥವಾ ಮುಂಬಯಿಯಲ್ಲಿ ಇದನ್ನು ಊಹಿಸಲೂ ಸಾಧ್ಯವಿರಲಿಲ್ಲ. ಮತ್ತು ಅವರ ಅಡುಗೆಮನೆಯಲ್ಲಿ ತಯಾರಿಸಿದ ಆಹಾರವನ್ನು ಸೇವಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಮೊದಲ 'ನೆಟಾಲ್ ಇಂಡಿಯನ್ ಕಾಂಗ್ರೆಸ್' ಸಭೆಯಲ್ಲಿಯೇ ಸತ್ಯಾಗ್ರಹದ ಯೋಜನೆ ಸಿದ್ಧವಾಯಿತು. ಅದೂ ವರ್ಣಭೇದ ನೀತಿಯ ವಿರುದ್ಧ, ಮೊದಲ ಸತ್ಯಾಗ್ರಹದಲ್ಲಿ ಅವರಿಗೆ ಜಯಲಭಿಸಲಿಲ್ಲ. ಒಂದು ಅದ್ಭುತ ಸಂಗತಿಯಿದು. ಒಬ್ಬ ಗುಜರಾತೀ ಮುಸ್ಲಿಂ ಎ.ಎಂ.ಕಛಾಲಿಯಾ ಎಂಬುವವರು ಅದರ ಯೋಜನೆ ರೂಪಿಸಿದರು, ಹೀಗೆ ಗಾಂಧಿಯ ರಾಜಕೀಯ ವೃತ್ತಿಜೀವನ ಓರ್ವ ಮುಸ್ಲಿಂ–ಎ..ಎಂ.ಕಛಾಲಿಯಾ ಇವರಿಂದ ಪ್ರಾರಂಭಗೊಂಡಿತು. ಇದು ಅವರ ಮೊದಲ ಯಶಸ್ಸಿನ ಕಥೆ. ಅದು 1907–08 ರ ಸತ್ಯಾಗ್ರಹ. 1913–14 ರಲ್ಲಿ ನಡೆದ ಎರಡನೆಯ ಸತ್ಯಾಗ್ರಹದಲ್ಲಿ ಭಾಗವಹಿಸಿದವರು ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ನಟಾಲ್ ನ ಗುತ್ತಿಗೆದಾರರು ಮತ್ತು ಕಾರ್ಮಿಕರು. ಹೀಗೆ ಗಾಂಧಿ ಭಾರತದ ಬೇರೆ ಬೇರೆ ಭಾಗಗಳ, ಧರ್ಮಗಳ ಜನರ ಒಡನಾಟದಿಂದಾಗಿ ಭಾರತದ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ಭಾರತ ಒಂದೇ ಧರ್ಮ ಮತ್ತು ಒಂದು ಭಾಷೆ ಮಾತನಾಡುವ ಜನರ ದೇಶವಲ್ಲ ಎಂಬ



ಬಗ್ಗೆ ಗಾಂಧಿ ಪುನರಾಲೋಚನೆ ಮಾಡುವಂತಾಯಿತು. ನಮಗೀಗ ಹೇಳಲಾಗುತ್ತಿದೆಯಲ್ಲಾ, ನಾವೆಲ್ಲಾ ಹಿಂದೂಗಳು, ನಮ್ಮ ಭಾಷೆ ಹಿಂದಿ ಎಂದು. ಗಾಂಧಿಗೆ ಇದೆಲ್ಲವೂ ಅನುಭವಕ್ಕೆ ಬಂದವು. ಅವರು ಭಾರತಕ್ಕೆ ಹಿಂದಿರುಗಿ ಬಂದ ನಂತರ ತಮಿಳು ಭಾಷೆ ಕಲಿಯಬಯಸಿದರು. ಏಕೆಂದರೆ ಅವರು ತಮಿಳು ಕಾರ್ಮಿಕರೊಂದಿಗೆ ಮಾತನಾಡಬೇಕಿತ್ತು. ಆಮೇಲೆ ಅವರ ಬದುಕಿನಲ್ಲಿ ಅವರು ಕನ್ನಡವನ್ನು ಕಲಿಯಲು ಪ್ರಯತ್ನಿಸಿದರು. ಅವರ ಪತ್ರಿಕೆ 'ಇಂಡಿಯನ್ ಒಪೀನಿಯನ್' ಹಿಂದಿ, ಗುಜರಾತಿ, ತಮಿಳು ಮತ್ತು ಇಂಗ್ಲಿಷಿನಲ್ಲಿ ಹೊರಬರುತ್ತಿತ್ತು. ನಾವು ಈಗ ಸಂಕುಚಿತ ಮನೋಭಾವದ ದುರಭಿಮಾನವನ್ನು ಕಾಣುತ್ತಿರುವಾಗ, ಪದೇ ಪದೇ ಧರ್ಮ ಮತ್ತು ಭಾಷೆಯ ಮೂಲಕ ಈ ದುರಭಿಮಾನ ವ್ಯಕ್ತವಾಗುತ್ತಿರುವಾಗ ಗಾಂಧಿ ಯಾಕೆ ಇಂದಿಗೂ ಪ್ರಸ್ತುತರು ಎಂಬುದಕ್ಕೆ ಇದು ಒಂದು ಕಾರಣ, ನಾಲ್ಕನೆಯ ಕಾರಣ.

ಐದನೆಯ ಕಾರಣ ಅವರು ದೇಶಭಕ್ತರು ಮತ್ತು ಸಂವಾದದಲ್ಲಿ ತೊಡಗುವವರು ಸಹ. ಅವರು ಭಾರತದ ನಾಗರಿಕತೆಯ ಶ್ರೀಮಂತಿಕೆ ಮತ್ತು ಆಳವಾದ ಚರಿತ್ರೆಯ ಬಗ್ಗೆ ಅಪಾರ ಮೆಚ್ಚುಗೆ ಹೊಂದಿದ್ದರು. ಅದನ್ನು ಅತಿಯಾಗಿ ತೆಗೆದುಕೊಳ್ಳಬಾರದು ಎಂದು ಅವರೊಮ್ಮೆ ಹೇಳಿದ್ದರು, ದೇಶಪ್ರೇಮದ ಅತಿಯಲ್ಲಿ ಯಾವುದೇ ದೇಶವು ಕೂಪಮಂಡೂಕವಾಗಬಾರದು' ಎಂದು ಹೇಳಿದ್ದರು. ಭಾರತಕ್ಕಿಂತ ಹೆಚ್ಚು ಬೇರೆ ದೇಶಗಳೊಂದಿಗೆ– ಪಶ್ಚಿಮದ ದೇಶಗಳೊಂದಿಗೆ ನಮ್ಮನ್ನು ನಾವು ಕನ್ನಡಿಯಲ್ಲಿ ನೋಡಿಕೊಳ್ಳುವಂತೆ ಹೋಲಿಸಿ ನೋಡಬೇಕಾದ ಅಗತ್ಯವಿದೆ ಎಂದಿದ್ದರು. ಗಾಂಧೀಜಿಯವರ ಜೀವನಚರಿತ್ರೆಯ ನನ್ನ ಪುಸ್ತಕದ ಮೊದಲ ವಾಲ್ಯೂಮಿನಲ್ಲಿ ಯುವಕರಾಗಿದ್ದ ಗಾಂಧಿಯ ಮೇಲೆ ಅವರ 20–40ರ ವಯಸ್ಸಿನಲ್ಲಿ ಪ್ರಭಾವ ಬೀರಿದ ಮೂವರು ವ್ಯಕ್ತಿಗಳ ಬಗ್ಗೆ ನಿರೂಪಿಸಿದ್ದೇನೆ. ಅದು ಬಹಳ ಸ್ವಾರಸ್ಯಕರವಾದುದು ಅವರನ್ನು ಗಾಂಧಿ ಗುರು ಎಂದು ಕರೆಯುತ್ತಾರೆ. ಮೊದಲನೆಯವರು ಗುಜರಾತಿ, ಅವರ ಹೆಸರು ರಾಯ್ ಚಂದ್ ಭಾಯಿ, ಅವರೊಬ್ಬ ದಾರ್ಶನಿಕರಾಗಿದ್ದರು., ಹಿಂದೂ ಅಲ್ಲ, ಜೈನರು. ಅವರ ಕುರಿತು ಎರಡು ಅಂಶಗಳನ್ನು ಉಲ್ಲೇಖಿಸುತ್ತಾರೆ. ಮೊದಲನೆಯದು ಸಂಯಮ, ಎರಡನೆಯದು ಇತರ ಧರ್ಮಗಳನ್ನು ಪ್ರಶಂಸಿಸುವುದು. ಹೀಗೆ ಅವರ ಮೊದಲ ಗುರು ಒಬ್ಬ ಗುಜರಾತಿ, ಜೈನ, ಗುಜರಾತೀ ಬನಿಯಾ ಅಲ್ಲ, ಹಿಂದೂ ಸಹ ಅಲ್ಲ. ಎರಡನೆಯ ಗುರು ಗೋಖಲೆ, ಅವರು ದೇಶದ ಇನ್ನೊಂದು ಭಾಗದವರು. ಅವರು ಹಿಂದೂ–ಮುಸ್ಲಿಂ ಸೌಹಾರ್ದದ ಬಗ್ಗೆ ಮಾತಾಡಿದವರು, ಹಾಗೇ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಲು ಮತ್ತು ಸಾಮಾಜಿಕ ಸೇವೆಯ ಪ್ರಾಮುಖ್ಯತೆ ಕುರಿತು ಮಾತಾಡಿದವರು. ಮೂರನೆಯ ಗುರು ಟಾಲ್ ಸ್ಟಾಯ್. ಅವರು ಭಾರತದವರಲ್ಲ, ಅವರೊಬ್ಬ ಮಹಾನ್ ವ್ಯಕ್ತಿಯಾಗಿದ್ದರು. ಹೀಗೆ ಅವರ ಮೊದಲ ಗುರು ಭಾರತದವರೇ, ಅವರ ನೆರೆಯವರೇ, ಆದರೆ ಬೇರೆಯೇ ಧರ್ಮಕ್ಕೆ ಸೇರಿದವರು. ಎರಡನೆಯವರು ಭಾರತದ ಇನ್ನೊಂದು ಭಾಗದವರು. ಆದರೆ ಮೂರನೆಯವರು ಬೇರೆಯೇ ದೇಶದವರು. ಹೀಗೆ ಅವರ ಮೇಲಿನ ಪ್ರಭಾವ 360 ಡಿಗ್ರಿ ಪೂರ್ಣವಾದುದು. ಟಾಲ್ ಸ್ಟಾಯ್ ಅವರನ್ನು ಗಾಂಧಿ ಭೇಟಿಯಾಗಲೇ ಇಲ್ಲ.

ಅವರ ಪುಸ್ತಕಗಳನ್ನು ಓದಿದ್ದರು. ಅವರೊಂದಿಗೆ ಪತ್ರವ್ಯವಹಾರ ನಡೆಸಿದ್ದರು ರಾಷ್ಟ್ರಪ್ರೇಮದೊಂದಿಗೆ ಅಂತಾರಾಷ್ಟ್ರೀಯತೆಯನ್ನು ಮಿಳಿತಗೊಳಿಸುವ ಈ ಅಸಾಧಾರಣ ಸಾಮರ್ಥ್ಯ ಅವರಿಗೆ ಬೇರೆ ಸಂಸ್ಕೃತಿ–ನಾಗರಿಕತೆಯನ್ನು ಮೆಚ್ಚುವುದರಿಂದ ಬಂದಿದ್ದೇ ಹೊರತು ಅದರ ಕಾರಣಕ್ಕಾಗಿ ಭಾರತವನ್ನು ಕಳೆದುಕೊಳ್ಳುವುದರಿಂದ ಅಲ್ಲ. ಅವರದು ರಾಷ್ಟ್ರೀಯತೆ ಮತ್ತು ಅಂತಾರಾಷ್ಟ್ರೀಯತೆಯನ್ನು ಬೆರೆಸುವಂತಹ ಚಿಂತನೆ, 'ಭಾರತ ಮಹಾನ್ ದೇಶ, ಅದು ಎಲ್ಲವನ್ನೂ ಕಂಡುಹಿಡಿದಿದೆ. ಪ್ರಪಂಚದಿಂದ ಭಾರತ ಕಲಿಯಬೇಕಾದುದು ಏನೂ ಇಲ್ಲ, ಅದು ಗುರು ಮಾತ್ರ' ಎನ್ನುವ ಇಂದಿನ ಸಂಕುಚಿತ ಮನೋಭಾವದವರಿಗಿಂದ ಭಿನ್ನವಾದುದು. ಹೀಗೆ ರಾಷ್ಟ್ರೀಯತೆಯನ್ನು ಅಂತಾರಾಷ್ಟ್ರೀಯತೆಯೊಂದಿಗೆ ಬೆರೆಸುವುದನ್ನು ನೆಹರೂ ಕಮಲಾದೇವಿ ಚಟ್ಟೋಪಾಧ್ಯಾಯ ಬಿ.ಆರ್. ಅಂಬೇಡ್ಕರ್ ಮತ್ತು ಅಂದಿನ ಪೀಳಿಗೆಯವರೆಲ್ಲಾ ರೂಢಿಸಿಕೊಂಡಿದ್ದರು. ಅದನ್ನೇ ನಾವು ಪುನಃ ಗಳಿಸಬೇಕಾದ ಅಗತ್ಯ ಕಂಡುಬಂದಿದೆ.

ನಾನೀಗ ನಿಮಗೆ ಗಾಂಧಿ ಯಾಕೆ ಇಂದಿಗೂ ಪ್ರಸ್ತುತ ಎಂಬುದಕ್ಕೆ ಐದು ಕಾರಣಗಳನ್ನು ಕೊಟ್ಟಿದ್ದೇನೆ. ಈ ಐದು ವಿಚಾರಪರಂಪರೆಗಳ ಹೊರತಾಗಿ ಸ್ವತಂತ್ರ ಪ್ರಜಾಪ್ರಭುತ್ವದ ಭಾರತ ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ನಾನು ನಿಮಗೆ ವಿವರಿಸಿದ್ದೇನೆ. ಹಿಂಸೆಯ ಬದಲಾಗಿ ಅವರು ಸಂವಾದವನ್ನು ಆಯ್ಕೆ ಮಾಡಿಕೊಂಡಿದ್ದರು. ನಾವು ಬಹುಪಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ, ದೇಶದ ಆಡಳಿತವನ್ನು ಏಕೈಕ ಪಕ್ಷ ನಿರ್ವಹಿಸುವಂತಹ ವ್ಯವಸ್ಥೆಯಲ್ಲಿಲ್ಲ. ಏಕೆಂದರೆ ಅಂಬೇಡ್ಕರ್ ಅವರಂತಹವರು ಸಂವಿಧಾನದ ರಚನೆಯ ಸಮಯದಲ್ಲಿ ಜಾತಿ ತಾರತಮ್ಯ, ಅಸ್ಪೃಶ್ಯತೆಯನ್ನು ನಿವಾರಿಸುವುದು ಮತ್ತು ಇತರ ಅಂಶಗಳನ್ನು ಸಂವಿಧಾನದಲ್ಲಿ ಸೇರಿಸಿದ್ದರು. ಅವರು ಧಾರ್ಮಿಕ ಮತ್ತು ಭಾಷಾಬಹುತ್ವಕ್ಕೆ ಒತ್ತುಕೊಟ್ಟರು. ನಾವು ಪಾಕಿಸ್ತಾನ ಮತ್ತು ಶ್ರೀಲಂಕಾದ ದಾರಿಯಲ್ಲಿ ಹೋಗಲಿಲ್ಲ. ಪಾಕಿಸ್ತಾನ ಒಡೆದುಹೋಯಿತು. ಯಾಕೆಂದರೆ ಅದು ಧರ್ಮದ ಆಧಾರದ ಮೇಲೆ ಒಂದು ದೇಶವಾಗಿ ಹುಟ್ಟಿಕೊಂಡಿತ್ತು. ಧರ್ಮ ಮತ್ತು ಭಾಷೆಯ ಆಧಾರದ ಮೇಲೆ ಅದು ಪೂರ್ವ ಪಾಕಿಸ್ತಾನ ತನಗೆ ವಿಧೇಯವಾಗಿರಬೇಕೆಂದು ಬಯಸಿತ್ತು. ಅದು ಇನ್ನೊಂದು ಪೂರ್ವಬಂಗಾಳವಾಯಿತು. ನಾವು ಅವರ ದಾರಿಯಲ್ಲಿ ಹೋಗಲಿಲ್ಲ, ಪಾಕಿಸ್ತಾನ ಮತ್ತು ಶ್ರೀಲಂಕಾದಂತೆ ನಾವು ಭಾಷಿಕ ಮತ್ತು ಧಾರ್ಮಿಕ ನೆಲೆಯಲ್ಲಿ ಒಂದು ದೇಶವಾದವರಲ್ಲ. ಶ್ರೀಲಂಕಾದಲ್ಲಿ ಸಿಂಹಳ ಭಾಷೆಯನ್ನು ತಮಿಳು ಅಲ್ಪಸಂಖ್ಯಾತರ ಮೇಲೆ ಹೇರಿದ್ದರಿಂದ ಮೂರು ದಶಕಗಳ ಕಾಲ ಅಲ್ಲಿ ಹಿಂಸಾಚಾರ ನಡೆಯಿತು. ಗಾಂಧಿ ಒಬ್ಬರೇ ಪ್ರಜಾಪ್ರಭುತ್ವವಾದಿಯಾದ ಸಹಿಷ್ಣುವಾದ ಸ್ವತಂತ್ರ ಭಾರತದ ನಿರ್ಮಾಣಕ್ಕೆ ಕೊಡುಗೆ ನೀಡಿದವರು ಎಂದು ನಾನು ಹೇಳುತ್ತಿಲ್ಲ. ನನ್ನ ಮಾತುಗಳಲ್ಲಿ ನಾನು ಈಗಾಗಲೇ ಟ್ಯಾಗೋರ್, ಅಂಬೇಡ್ಕರ್ ,ಜವಾಹರ್ ಲಾಲ್ ನೆಹರೂ ಕಮಲಾದೇವಿ ಚಟ್ಟೋಪಾಧ್ಯಾಯರ ಬಗ್ಗೆ ಪ್ರಸ್ತಾಪಿಸಿದ್ದೇನೆ. ನನ್ನ ಪುಸ್ತಕ 'Makers of Modern India' ದಲ್ಲಿ 19 ಜನ ವ್ಯಕ್ತಿಗಳ ಬಗ್ಗೆ ಬರೆದಿರುವುದನ್ನು ನೋಡಬಹುದು. ಆದರೆ ಗಾಂಧಿ ಎಲ್ಲಿಯೋ ನಿರ್ಣಾಯಕರಾಗುತ್ತಾರೆ. ಅವರು ಭಾರತವನ್ನು ಒಂದುಗೂಡಿಸುವುದರಲ್ಲಿ ಒಂದು ನೈತಿಕ ಉದ್ದೇಶವನ್ನು ತರುತ್ತಾರೆ. ವಿಶೇಷವಾಗಿ ಅಹಿಂಸೆ ಧಾರ್ಮಿಕ ವೈವಿಧ್ಯತೆ ಮತ್ತು ಸಾಮಾಜಿಕವಾಗಿ ಸಮಾನತೆ ಎಂಬುದಕ್ಕೆ ಗಾಂಧಿ ಪ್ರಾಶಸ್ತ್ಯ ಕೊಟ್ಟಿರುವುದರಿಂದ ಇದೆಲ್ಲಾ ಸಾಧ್ಯವಾಯಿತು.

ಈಗ ನಾವು ಗಾಂಧಿ ಯಾಕೆ ಪ್ರಸ್ತುತರು ಎಂಬುದಕ್ಕೆ ಉಳಿದ ಐದು ಕಾರಣಗಳ ಬಗ್ಗೆ ನೋಡೋಣ. ಈ ಐದು ಅಂಶಗಳನ್ನು ನಾವು ಇದನ್ನು ಭಾರತಕ್ಕೆ ಮಾತ್ರ ಸೀಮಿತಗೊಳಿಸಿ ಹೇಳುತ್ತಿಲ್ಲ. ಈ ಕಾರಣಗಳು ಒಂದು ರೀತಿಯಲ್ಲಿ ಜಾಗತಿಕವಾಗಿ ಅನುಸರಿಸಬೇಕಾದಂಥವು/ ಜಾಗತಿಕ ಪಾಠಗಳು. ಗಾಂಧಿ ಯಾಕೆ ಮುಖ್ಯ ಅನ್ನುವುದಕ್ಕೆ ಆರನೆಯ ಕಾರಣ ಅವರೊಬ್ಬ ತಮ್ಮ ಕಾಲಕ್ಕಿಂತ ಬಹಳ ಮುಂದೆ ಇದ್ದಂತಹ, ಮುನ್ನೋಟವುಳ್ಳ ಪರಿಸರವಾದಿಯಾಗಿದ್ದರು. ನಿಯಂತ್ರಣವಿಲ್ಲದ ಅಭಿವೃದ್ಧಿ ಮತ್ತು ಉಪಭೋಗಸಂಸ್ಕೃತಿ ಇಡೀ ಭೂಗ್ರಹಕ್ಕೆ ಮಾರಕವಾಗಬಲ್ಲದು ಎಂದು ಹೇಳಿದ್ದರು.. ನಾನು ಅವರ ಹೇಳಿಕೆಯನ್ನು ಉದ್ಧರಿಸುತ್ತೇನೆ ಅದನ್ನು ತಮ್ಮ ಭಾಷಣವೊಂದರಲ್ಲಿ ಗಾಂಧಿ 1928ರಲ್ಲೇ ನೀಡಿದ್ದರು; ಹೆಚ್ಚು ಕಡಿಮೆ 100 ವರ್ಷಗಳ ಹಿಂದೆ. 'ಭಾರತವು ಪಶ್ಚಿಮದ ರೀತಿಯಲ್ಲಿ ಕೈಗಾರೀಕರಣಗೊಳ್ಳುವುದನ್ನು ದೇವರು ನಿಷೇಧಿಸಲಿ. ಒಂದು ಪುಟ್ಟ ದ್ವೀಪ ರಾಜಪ್ರಭುತ್ವದ(ಇಂಗ್ಲೆಂಡ್) ಆರ್ಥಿಕ ಸಾಮ್ರಾಜ್ಯಶಾಹಿ ಆಡಳಿತ ಇಡೀ ಜಗತ್ತನ್ನೇ ತನ್ನ ಸಂಕೋಲೆಗಳಿಂದ ಬಂಧಿಸಿದೆ. 330 ಮಿಲಿಯ ಜನಸಂಖ್ಯೆಯ ದೇಶವೊಂದು ಇಂತಹ ಆರ್ಥಿಕ ಶೋಷಣೆಗೆ ಮುಂದಾದರೆ ಅದು ಜಗತ್ತನ್ನು ಮಿಡತೆಗಳಂತೆ ಬರಿದುಮಾಡಬಲ್ಲದು.' (God forbid that India should ever take to industrialisation after the manner of the west. The economy imperialism of a single tiny island kingdom(England) is today keeping the world in chains. If an entire nation of 300 millions took to similar economic exploitation it would strip the world bare like locusts) ಗಾಂಧಿ ಇದನ್ನು ಹೇಳಿರುವುದು 90 ವರ್ಷಗಳ ಹಿಂದೆ. ಜಾಗತಿಕ ತಾಪಮಾನವನ್ನು ನಿಯಂತ್ರಣಕ್ಕೆ ತರದೇ ಇರುವುದರ ಬಗ್ಗೆ ಯುವಜನರು ತಮ್ಮ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ಪ್ರಜ್ಞಾವಂತ ಭಾರತೀಯರು ಯಾರೂ ದೇಶದಲ್ಲಿ ಹವಾಮಾನ ಬದಲಾವಣೆ ಆಗಿಲ್ಲ ಎಂದರೆ ಅದನ್ನು ಒಪ್ಪಲಾರರು. ಭಾರತವು ಪರಿಸರನಾಶದ ಅವಸಾನದ ಹಂತಕ್ಕೆ ತಲುಪುತ್ತಿದೆ. ಜಗತ್ತಿನ 20 ಕಲುಷಿತ ನಗರಗಳಲ್ಲಿ 14 ನಗರಗಳು ಭಾರತದಲ್ಲೆ ಇವೆ. ಭಾರತದ ನದಿಗಳು ಸತ್ತುಹೋಗಿವೆ. ದೆಹಲಿಯಲ್ಲಿ ಯಮುನಾ, ಹೂಗ್ಲಿ ಕಲ್ಕತ್ತಾದಲ್ಲಿ ಆಮೇಲೆ ಪಾಟ್ನಾ ಹೀಗೆ. ಅಂತರ್ಜಲ ಕುಸಿಯುತ್ತಿದೆ. ಜಲಚರಗಳು ನಾಶವಾಗುತ್ತಿವೆ. ರಾಸಾಯನಿಕಗಳಿಂದ ಕಲುಷಿತವಾಗುತ್ತಿರುವುದು ನಮ್ಮ ಮುಂದೆ ಪ್ರಶ್ನೆಗಳನ್ನೆ ಇಡುತ್ತಿವೆ. ಇದು ನಮ್ಮ ಕೃಷಿಗೆ ಮಾರಕವಾಗಿ ಪರಿಣಮಿಸುತ್ತಿವೆ. ಗಾಂಧಿ ಇದನ್ನು 1928ರಲ್ಲೇ ಮುಂಗಂಡಿದ್ದರು. ಗಾಂಧಿ ಹೇಗೆ ತಮ್ಮ ಕಾಲಕ್ಕಿಂತ ಮೊದಲೇ ಪರಿಸರವಾದಿಯಾಗಿದ್ದರು ಎಂಬುದು ಆರನೆಯ ಕಾರಣ.

ಗಾಂಧಿ ನೈತಿಕವಾಗಿ ಹಂತ ಹಂತವಾಗಿ ಮುನ್ನಡೆಯುತ್ತಿದ್ದರು ಎಂಬುದನ್ನು

ನೋಡಿ. ಜಾತಿಪದ್ಧತಿಗೆ ಸಂಬಂಧಪಟ್ಟಂತೆ ಅಂಬೇಡ್ಕರ್ ಅವರೊಂದಿಗೆ ಮುಖಾಮುಖಿಯಾದಾಗ ಅವರು ಸಂಪ್ರದಾಯವಾದಿಯಾಗಿದ್ದರು. ಗಾಂಧಿ ಅಸ್ಪೃಶ್ಯತೆಯನ್ನು ವಿರೋಧಿಸಿದರೂ, ಆದರೆ ವರ್ಣಾಶ್ರಮ ಧರ್ಮವನ್ನು ಸಮರ್ಥಿಸಿಕೊಂಡರು– ಆದರೆ ಅದು 1920 ರಲ್ಲಿ. 1940ರ ಹೊತ್ತಿಗೆ ಜಾತಿವ್ಯವಸ್ಥೆ ಹೋಗಬೇಕೆಂದರೆ ಅಂತರ್ಜಾತೀಯ ಮದುವೆ ಒಂದೇ ದಾರಿ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಜನಾಂಗೀಯತೆಗೆ ಸಂಬಂಧಿಸಿದಂತೆ ಅವರ ದೃಷ್ಟಿಕೋನವನ್ನು ನೋಡಿದರೆ ಯುವ ಗಾಂಧಿ ನಾಸ್ತಿಕರಾಗಿದ್ದರು. ಆದರೆ ಅವರಿಗೆ ಮನಸ್ಸನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯವಿತ್ತು. ತಮ್ಮ ವೈಫಲ್ಯವನ್ನು ಒಪ್ಪಿಕೊಳ್ಳಲು, ಸರಿ ಎಂಬುದನ್ನು ರೂಢಿಸಿಕೊಳ್ಳಲು ಮತ್ತು ಹೊಸ ಪುರಾವೆ ಒದಗಿದಾಗ, ಹೊಸ ಅನುಭವಗಳಾದಾಗ ತಮ್ಮ ಹಳೆಯ ತಪ್ಪುಗ್ರಹಿಕೆಗಳನ್ನು ಒಪ್ಪಿಕೊಂಡು ಬದಲಾಯಿಸಿಕೊಳ್ಳುವ ಸಾಮರ್ಥ್ಯವಿತ್ತು. ಇದು ಏಳನೆಯ ಕಾರಣ.

ಎಂಟನೆಯ ಕಾರಣ: ಅವರೊಬ್ಬ ತಂಡವನ್ನು ರಚಿಸುವ ಸಾಮರ್ಥ್ಯವುಳ್ಳವರು. ಪ್ರತಿಭೆಯನ್ನು ಗುರುತಿಸುವುದು ಆ ವ್ಯಕ್ತಿ ಗಂಡಸಾಗಿರಲೀ, ಹೆಂಗಸಾಗಿರಲೀ ಅವರನ್ನು ಬೆಳೆಸುವಂತಹ ಅಸಾಧಾರಣ ಜಾಣ್ಮೆ ಅವರಿಗಿತ್ತು. ಕೆಲವು ವ್ಯಕ್ತಿಗಳಿಗೆ ನೀಡಿದ, ಕಾರ್ಯಗಳನ್ನು ಅವರೇ ನಿರ್ವಹಿಸಬಹುದಾಗಿತ್ತು. ಅವರ ಹೆಚ್ಚಿನ ಶಿಷ್ಯರು ಬಹು ಪ್ರಮುಖ ವ್ಯಕ್ತಿಗಳಾಗಿ ಹೊರಹೊಮ್ಮಿದರು ಮತ್ತು ತಮ್ಮದೇ ಆದ ರೀತಿಯಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ತಮ್ಮ ಕೊಡುಗೆ ನೀಡಿದರು. ನೆಹರೂ, ಪಟೇಲ್, ಕಮಲಾದೇವಿ ಚಟ್ಟೋಪಾಧ್ಯಾಯ, ರಾಜಾಜಿ, ಕೃಪಲಾನಿ, ಜೆ.ಪಿ, ಲೋಹಿಯಾ , ಜೆ.ಸಿ.ಕುಮಾರಪ್ಪ, ಜಾಕಿರ್ ಹುಸೇನ್ , ಮೌಲಾನಾ ಆಜಾದ್ ಮತ್ತು ಬಹಳಷ್ಟು ಜನರು. ಅವರು ಮೊದಲು ಗಾಂಧಿಯ ಅನುಯಾಯಿಗಳಾಗಿದ್ದರು, ಆಮೇಲೆ ಅವರೇ ನಾಯಕರಾದರು. ಸಂಸ್ಥೆಗಳನ್ನು ಕಟ್ಟಿದರು, ಸಾಮಾಜಿಕ ಚಳುವಳಿಗಳನ್ನು ಪ್ರಾರಂಭಿಸಿದರು, ಗೃಹ ಸಚಿವರಾದರು, ಮುಖ್ಯಮಂತ್ರಿಗಳಾದರು ಇತ್ಯಾದಿ, ಇತ್ಯಾದಿ, ಇದು ನಿಜವಾಗಿಯೂ ಕೆಲವೇ ಜನರು ಹೊಂದಿರಬಹುದಾದ ಮಹಾನ್ ಪ್ರತಿಭೆಯೇ ಸರಿ. ಓರ್ವ ಮಹಾನ್ ನಾಯಕ ಮುಂದಿನ ಪೀಳಿಗೆಯ ನೇತಾರರನ್ನು ಸ್ವತಃ ಬೆಳೆಸುತ್ತಾರೆ. ಎಷ್ಟು ಮಂದಿ ನಾಯಕರು ಹೀಗೆ ಮಾಡಬಲ್ಲರು? ಗಾಂಧಿ ಸಾಧಿಸಿರುವುದನ್ನು ಹೋಲಿಸಿ ನೋಡಿ, ಸ್ವತಂತ್ರ ಭಾರತದ ಮೂವರು ಪ್ರಭಾವೀ ಪ್ರಧಾನ ಮಂತ್ರಿಗಳು ಏನು ಮಾಡಿದರೆಂಬುದನ್ನು ನೋಡಿದಾಗ ಅವರು ಈ ವಿಷಯದಲ್ಲಿ ಗಾಂಧಿಯ ಸಾಧಿನೆಯನ್ನುಸರಿಗಟ್ಟಲಾಗಲಿಲ್ಲ. ಆ ಮೂವರು ಜವಾಹರ್ ಲಾಲ್ ನೆಹರೂ ಓರ್ವ ಮಹಾನ್ ರಾಜಕೀಯ ಚಿಂತಕರು, ಇಂದಿರಾಗಾಂಧಿ ಮತ್ತು ನರೇಂದ್ರಮೋದಿ, ಅವರು ಅಧಿಕಾರವನ್ನು ತಮ್ಮಲ್ಲಿಯೇ ಕೇಂದ್ರೀಕರಿಸಿಕೊಂಡವರು. ಅವರಿಗೆ ಉತ್ತರಾಧಿಕಾರಿಗಳನ್ನು ಬೆಳೆಸಲಾಗಲಿಲ್ಲ. ಜವಾಹರ್ ಲಾಲ್ ನೆಹರೂ ಇಂದಿರಾಗಾಂಧಿಗಿಂತ ಹೆಚ್ಚು ಪ್ರಜಾಪ್ರಭುತ್ವವಾದಿಯಾಗಿದ್ದರು. ಇಂದಿರಾಗಾಂಧಿ ಮೋದಿಗಿಂತ ಕಡಿಮೆ ಕೋಮುವಾದಿ, ಅವರಲ್ಲಿ ಕಂಡು ಬರುವ ಬೇರೆ ಸಮಾನ ಸಂಗತಿಗಳ ಬಗ್ಗೆ ನೋಡಿದರೆ, ನೆಹರೂ 1958ರಲ್ಲಿಯೇ ನಿವೃತ್ತರಾಗಬಹುದಿತ್ತು. ಅವರು ಮುಂದಿನವರಿಗೆ ಅಧಿಕಾರ ಹಸ್ತಾಂತರ ಮಾಡಬಹುದಿತ್ತು. ಇಂದಿರಾ ಗಾಂಧಿ ತಮ್ಮ ಮಗನ ಕಡೆ ಮಾತ್ರ ನೋಡಬಲ್ಲವರಾಗಿದ್ದರು. ನರೇಂದ್ರಮೋದಿ ತಮ್ಮ ಬಗ್ಗೆ ಮಾತ್ರ ಯೋಚಿಸಬಲ್ಲರು. ಇದು ರಾಜಕೀಯ ನಾಯಕರ ವಿಷಯದಲ್ಲಿ ಮಾತ್ರ ನಿಜವಲ್ಲ.ಕಂಪೆನಿಯೊಂದರ ಬಲಾಢ್ಯ ಸಿ. ಇ. ಓ. ಸಹ ಹೀಗಿದ್ದಾರೆ. ಜನ ಸರ್ಕಾರೇತರ ಸಂಸ್ಥೆಗಳನ್ನು ಸ್ಥಾಪಿಸುತ್ತಾರೆ. ಬಹಳ ಹಳೆಯ ಸರ್ಕಾರೇತರ ಸಂಸ್ಥೆಯೊಂದಿದೆ. ಅದರ ಸ್ಥಾಪಕರು ಅವಳು ಅಥವಾ ಅವನೇ ಆ ಸಂಸ್ಥೆಯ ಸರ್ವಸ್ವ ಅಂದುಕೊಳ್ಳುತ್ತಾರೆ. ತಮ್ಮನ್ನು ಹೊರತಾಗಿ ಅವರು ಯೋಚಿಸಲಾರರು. ತಮಗೆ ಸಾವು ಬರುತ್ತದೆ ಎಂಬುದನ್ನೂ ಯೋಚಿಸಲಾರರು. ಆದರೆ ಇದೇ ತಮ್ಮ ಅನುಯಾಯಿಗಳನ್ನು ನೇತಾರರನ್ನಾಗಿ ಪರಿವರ್ತಿಸುವ ಗಾಂಧಿಗೆ ಇದ್ದ ಜಾಣ್ಮೆ. ಬೋಸ್ ಸಹ ಗಾಂಧಿಯ ಅನುಯಾಯಿಯಾಗಿದ್ದವರು. ಬೋಸ್ ಅವರೇ ಗಾಂಧಿಯವರನ್ನು 'ರಾಷ್ಟ್ರಪಿತ' ಎಂದು ಮೊದಲು ಕರೆದಿರುವುದು. ಅವರು ಬೆಳೆಸಿದ ವ್ಯಕ್ತಿಗಳನ್ನು ನೋಡಿ, ನೆಹರೂ, ಪಟೇಲ್, ಬೋಸ್, ಜೆ.ಪಿ. ಕಮಲಾದೇವಿ,, ಲೋಹಿಯಾ, ಮೌಲಾನಾ ಆಜಾದ್,ಕೃಪಲಾನಿ, ಜಾಕಿರ್ ಹುಸೇನ್, ಜೆ.ಸಿ.ಕುಮಾರಪ್ಪ, ಇದು ತುಂಬಾ ಅಸಾಧಾರಣವಾದುದು ಅವರೊಬ್ಬ ಮಹಾನ್ ಪ್ರತಿಭಾನ್ವೇಷಕ. ಸ್ಫೂರ್ತಿ ನೀಡುವವರು, ಬೆಳೆಸುವವರು ಮತ್ತು ತಂಡವನ್ನು ಕಟ್ಟಬಲ್ಲವರು.

ಗಾಂಧಿ ಪ್ರಸ್ತುತರು ಎಂಬುದಕ್ಕೆ ಒಂಬತ್ತನೇ ಕಾರಣವೇನೆಂದರೆ ತಮ್ಮ ವಿರೋಧಿಗಳ ಅಭಿಪ್ರಾಯ ಏನು ಎಂಬುದನ್ನು ಕೇಳಿಸಿಕೊಳ್ಳುವುದರಲ್ಲಿ ಅವರಲ್ಲಿ ನಂಬಿಕೆ ಇತ್ತು. ತಮ್ಮ ಅಭಿಪ್ರಾಯವೇ ಸರಿ ಎಂಬ ಭಾವನೆಯಿಂದ ಎಂದೂ ಮಾತು ಶುರು ಮಾಡುತ್ತಿರಲಿಲ್ಲ. ಯಾರಾದರೊಬ್ಬರು ಬೇರೆಯೇ ಪರಿಕಲ್ಪನೆಗಳನ್ನಿಟ್ಟುಕೊಂಡು ಬಂದಾಗ ಅವರು ಮಧ್ಯದ ಮಾರ್ಗವನ್ನು ಹುಡುಕುತ್ತಿದ್ದರು, ಯಾವಾಗಲೂ ಆಲಿಸುತ್ತಿದ್ದರು, ಸಂವಾದಿಸುತ್ತಿದ್ದರು. ಸಂಧಾನ–ರಾಜಿ ಮಾಡಿಕೊಳ್ಳುವುದರಲ್ಲಿ ಸೊಗಸಿದೆ ಎಂದು ತಿಳಿದಿದ್ದರು. ಜಿನ್ನಾರೊಂದಿಗೆ 25 ವರ್ಷ ಒಡನಾಡಿದರೂ ಅವರ ವಿಷಯದಲ್ಲಿ ಅವರಿಗೆ ಯಶ ಸಿಗಲಿಲ್ಲ. ಆದರೆ ಅಂಬೇಡ್ಕರ್ ಅವರೊಂದಿಗೆ ಗಾಂಧಿ ಇದನ್ನು ಸಾಧಿಸಿದರು. ಗಾಂಧಿ ರಾಜಕೀಯ ವ್ಯಕ್ತಿಗಳೊಂದಿಗೆ ಎಷ್ಟೇ ತಾತ್ವಿಕ ಭಿನ್ನಾಭಿಪ್ರಾಯಗಳಿರಲಿ ವ್ಯಕ್ತಿಗತವಾಗಿ ಅವರಿಗೆ ಯಾವುದೇ ದ್ವೇಷವಿರಲಿಲ್ಲ. ಅವರ ಮಾತುಗಳು, ಭಾಷೆ ನಿರ್ಮಲ ಭಾವನೆಗಳಿಂದಲೇ ಕೂಡಿರುತ್ತಿತ್ತು. ಜಿನ್ನಾರೊಂದಿಗೂ ಅವರಿಗೆ ವೈಯಕ್ತಿಕವಾಗಿ ಭಿನ್ನಾಭಿಪ್ರಾಯಗಳಿರಲಿಲ್ಲ. ಬೌದ್ಧಿಕ, ರಾಜಕೀಯ, ನೈತಿಕ ಭಿನ್ನಾಭಿಪ್ರಾಯಗಳಿದ್ದವು. ಅವರು ಯಾವಾಗಲೂ ಒಂದು ತೀರ್ಮಾನಕ್ಕೆ ಬರಲು ಮತ್ತು ರಾಜಿ ಮಾಡಿಕೊಳ್ಳಲು ಸಿದ್ಧರಿರುತ್ತಿದ್ದರು. ಅಹಿಂಸೆ ಮತ್ತು ಹಿಂದೂ ಮುಸ್ಲಿಂ ಸೌಹಾರ್ದದ ಕುರಿತು ಅವರು ಯಾವುದೇ ರಾಜಿಗೆ ಸಿದ್ಧರಿರಲಿಲ್ಲ.

ಅವರು ತಂತ್ರಜ್ಞಾನವನ್ನು ವಿರೋಧಿಸುತ್ತಿದ್ದರು ಎಂದು ಕೆಲವೊಮ್ಮೆ ಹೇಳಲಾಗುತ್ತಿತ್ತು. ಆದರೆ ಇದು ನಿಜವಲ್ಲ. ಹಿಂದ್ ಸ್ವರಾಜ್ ಕಾಲಕ್ಕೆ ಅವರು ತಂತ್ರಜ್ಞಾನವನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಕಾಲ ಮುಂದೆ ಹೋದಂತೆ ಸಿಂಗರ್ ಹೊಲಿಗೆ ಮೆಶೀನ್ ನಂತಹ ಆಧುನಿಕ ತಂತ್ರಜ್ಞಾನದ ಬಗ್ಗೆ ಅವರಿಗೆ ಒಲವು ತೋರಿದರು. ಅದು ಮಹಿಳೆಯರ ವಿಮೋಚನೆಗೆ ದಾರಿ ಎಂದು ಅವರು ಭಾವಿಸಿದ್ದರು. ಅವರು ಯಾವಾಗಲೂ ಕಲಿಯುತ್ತಿದ್ದರು,

ಅರ್ಥಮಾಡಿಕೊಳ್ಳುತ್ತಿದ್ದರು ಮತ್ತು ತಮ್ಮೊಂದಿಗೆ ಭಿನ್ನಾಭಿಪ್ರಾಯ ಇದ್ದವರೊಂದಿಗೆ ನಿರಂತರ ಸಂವಾದ ಮಾಡುತ್ತಿದ್ದರು. ಇದು ಅಸಾಧಾರಣ ವ್ಯಕ್ತಿತ್ವ , ಎಲ್ಲಾ ದೃಷ್ಟಿಯಿಂದಲೂ ದೃಢವಾದ ಪ್ರಬಲ ಜನರಲ್ಲಿ ಇರುವಂತಹದು.

ಈಗಿನ ಪ್ರಧಾನಮಂತ್ರಿಗಳು ಒಂದೇ ಒಂದು ಪತ್ರಿಕಾಗೋಷ್ಠಿಯನ್ನು ಮಾಡಲೂ ನಿರಾಕರಿಸುತ್ತಾರೆ– 'ಮುಜ್ಕೋ ಸಬ್ ಪತಾ ಹೈ, ನಾನು ಕಲಿಯುವುದೇನೂ ಇಲ್ಲ.!' ಆದರೆ ಗಾಂಧಿ ಪರಸ್ಪರ ಸಂವಾದ ಮಾಡುತ್ತಿದ್ದರು, ಮಾತುಕತೆ ನಡೆಸುತ್ತಿದ್ದರು ತಮ್ಮ ರಾಜಕೀಯ ವಿರೋಧಿಗಳಿಂದಲೂ ಕಲಿತುಕೊಳ್ಳುತ್ತಿದ್ದರು, ಸಾಮಾನ್ಯ ಜನರಿಂದಲೂ ಕಲಿಯುತ್ತಿದ್ದರು. ಗಾಂಧಿ ಬೆಳಿಗ್ಗೆ ವಾಯುವಿಹಾರ ಮಾಡುತ್ತಿದ್ದರು. ಅವರೊಂದಿಗೆ ಯಾರಾದರೂ ಸೇರಿಕೊಳ್ಳಬಹುದಿತ್ತು. ಅವರಿಗೆ ಏನು ಪ್ರಶ್ನೆಗಳನ್ನು ಬೇಕಿದ್ದರೂ ಕೇಳಬಹುದಿತ್ತು. ಭಾರತದ ಬೇರೆ ಬೇರೆ ಭಾಗಗಳಿಂದ ಜನ ಬರುತ್ತಿದ್ದರು. ಅವರು ಗಾಂಧಿಯ ಬಳಿ 'ನೀವು ರಾಸಾಯನಿಕ ಕೃಷಿಯನ್ನು ಯಾಕೆ ವಿರೋಧಿಸುತ್ತೀರಿ ಎಂದೋ, ಯಾಕೆ ಪ್ರತಿಯೊಬ್ಬ ಭಾರತೀಯನೂ ಮಾತಾಡಬೇಕು .. ' ಎಂದೋ ಪ್ರಶ್ನೆಗಳನ್ನು ಕೇಳುತ್ತಿದ್ದರು, ಈ ಸಂಭಾಷಣೆ ಮುಂದುವರಿಯುತ್ತಿತ್ತು. ಪ್ರತಿಯೊಬ್ಬರೂ ಗಾಂಧಿಗೆ ಪ್ರಶ್ನೆ ಕೇಳಬಹುದಾಗಿತ್ತು. ಆದರೆ ಅವರೊಬ್ಬರೇ ಏಕಸ್ವಾಮ್ಯ ಮಾಡಿಕೊಳ್ಳುವಂತಿರಲಿಲ್ಲ. ಯಾರಾದರೂ ಅತಿಯಾಗಿ ಮಾತನಾಡುತ್ತಿದ್ದರೆ, ಯಾರಾದರೂ ಗಾಂಧಿವಾದಿ ಹಿಂಬದಿಯಿಂದ ಬಂದು ಯಾರೋ ಕಾಯ್ತಾ ಇದಾರೆ ಸೌಮ್ಯವಾಗಿ ಹೇಳುತ್ತಿದ್ದರು.

ಅವರ ಮ್ಯಾಗಜೈನ್ 'ಹರಿಜನ'ವನ್ನು ನೋಡಿದರೆ ತಿಳಿಯುತ್ತದೆ; ಹೇಗೆ ವಾಗ್ವಾದಗಳಿಗೆ, ಭಿನ್ನವಾದ ವಿರುದ್ಧವಾದ ಅಭಿಪ್ರಾಯಗಳಿಗೆ ಮುಕ್ತವಾಗಿ ತೆರೆದುಕೊಳ್ಳುವವರಾಗಿದ್ದರು ಎಂದು. ನಾವು ಎಷ್ಟು ಅಪರಿಪೂರ್ಣರು, ನೀವಿನ್ನೂ ಕಲಿಯುತ್ತಿರುವಿರಿ, ನಿಮ್ಮ ಅನುಭವ ಎಷ್ಟೇ ಇರಬಹುದು ಎಂಬುದನ್ನು ತಿಳಿಯುವ ಸಾಮರ್ಥ್ಯ, ನಿಮ್ಮ ನೈತಿಕ ಬಲ ಎಷ್ಟೇ ಇರಬಹುದು, ನೀವು ಎಷ್ಟೇ ದೊಡ್ಡ ರಾಜಕೀಯ ಪಕ್ಷದ ಅಧಿಕಾರ ಹೊಂದಿರಬಹುದು, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧಿಕಾರ ಹೊಂದಿರಬಹುದು, ಆದರೆ ಅರ್ಥ ನಿಮಗೆ ಎಲ್ಲವೂ ತಿಳಿದಿದೆ ಎಂದಲ್ಲ. ಇದಕ್ಕಾಗಿ ಗಾಂಧಿ ಮುಖ್ಯ ಆಗ್ತಾರೆ.

ಕಡೆಯದಾಗಿ ಹತ್ತನೆಯ ಕಾರಣ: ಗಾಂಧಿಯ ವ್ಯಕ್ತಿತ್ವದ ಪಾರದರ್ಶಕತೆ ಕೊನೆಯಿಲ್ಲದ ಸತ್ಯದ ಅರಸುವಿಕೆಯಲ್ಲಿತ್ತು. ಈ ಪ್ರಕ್ರಿಯೆ ಇತರರ ಎದುರಿಗೆ ಜಗತ್ತಿಗೆ ಕಾಣುವಂತೆಯೇ ನಡೆಯುತ್ತಿತ್ತು. ಅವರ ಆಶ್ರಮಕ್ಕೆ ಯಾರು ಬೇಕಾದರೂ ಹೋಗಬಹುದಿತ್ತು ಅವರೊಂದಿಗೆ ಚರ್ಚೆ ಮಾಡಬಹುದಿತ್ತು, ಅವರ ಕಡೆಗೇ ಹೋಗಬಹುದಿತ್ತು ಅವರನ್ನು ಕೊಲೆ ಮಾಡಬಹುದಿತ್ತು, ಹಾಗೆಯೇ ಆಯಿತು ಕೂಡ. ಇದಕ್ಕೆ ವ್ಯತಿರಿಕ್ತವಾಗಿ ಈಗೇನಾಗುತ್ತಿದೆ ಎಂಬುದನ್ನು ನೋಡಿ. ರಾಜಕೀಯ ವ್ಯಕ್ತಿಗಳ ಭದ್ರತೆಗಾಗಿ ಎಷ್ಟೊಂದು ವ್ಯವಸ್ಥೆಯಿದೆ? ಹೀಗೆ ನಾನು ಗಾಂಧಿ ಯಾಕೆ ಇಂದಿಗೂ ಪ್ರಸ್ತುತ ಎಂಬ ಬಗ್ಗೆ ಹತ್ತು ಕಾರಣಗಳನ್ನು ನಿರೂಪಿಸಿದ್ದೇನೆ.

ನಾವು ಯೋಚಿಸಬೇಕು. ನಮ್ಮ ವೈಯಕ್ತಿಕ ಜೀವನವನ್ನು ನಾವು ಹೇಗೆ ನಿರ್ವಹಿಸುತ್ತಿದ್ದೇವೆ? ನಾವು ಬೇರೆಯವರೊಂದಿಗೆ ಹೇಗೆ ಸಂವಾದದಲ್ಲಿ ತೊಡಗಿಕೊಳ್ಳುತ್ತೇವೆ? ನಾವು ಅಧಿಕಾರದ ಸ್ಥಾನದಲ್ಲಿ ಇತರರೊಂದಿಗೆ ಹೇಗೆ ವರ್ತಿಸುತ್ತೇವೆ? ನಾವು ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸುತ್ತೇವೆಯೇ, ತಂಡವನ್ನು ಕಟ್ಟುತ್ತೇವೆಯೇ ಇತ್ಯಾದಿ. ನಮ್ಮ ನೆರೆಯವರೊಂದಿಗೆ, ನಮ್ಮ ಭಾಷೆ, ಪ್ರದೇಶ, ಸಂಸ್ಕೃತಿ ಮತ್ತು ಜಗತ್ತಿನೊಂದಿಗೆ ಮತ್ತು ಗಾಂಧಿ ನಮ್ಮ ಪರಿಸರವನ್ನು ಅರ್ಥಮಾಡಿಕೊಂಡ ರೀತಿಯಲ್ಲಿ ಇನ್ನೂ ಹುಟ್ಟದೇ ಇರುವ ಮುಂದಿನ ಪೀಳಿಗೆಯವರ ಬಗ್ಗೆ ನಮ್ಮ ಪಾತ್ರವೇನು ಎಂಬುದನ್ನು ಯೋಚಿಸಬೇಕು.

ನಾನು ಈ ಮೊದಲು ನಿರೂಪಿಸಿದ ಕೆಲವು ಸಂಗತಿಗಳ ಬಗ್ಗೆ ಮತ್ತೊಮ್ಮೆ ಪ್ರಸ್ತಾಪಿಸಿ ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ. ನಾವು ಗಾಂಧಿಯನ್ನು ಯಾರಿಗೆ ಹೋಲಿಸಬಹುದು? ಕಳೆದ ಎರಡು ಶತಮಾನಗಳಲ್ಲಿ ನಮ್ಮ ನಾಡು ಕಂಡಂತಹ ಮಹಾನ್ ಭಾರತೀಯ ನಾಯಕ. ನಮ್ಮ ರಾಜ್ಯದಲ್ಲಿ ನೋಡಿದರೆ ಮಧ್ಯಯುಗದ ನೈತಿಕ ತತ್ವಜ್ಞಾನಿ ಬಸವ, ಉತ್ತರಭಾಗದಲ್ಲಿ ಅವರ ಸಮಕಾಲೀನರಾದ ಕಬೀರರಿಂದ ಮೊದಲ್ಗೊಂಡು ಸ್ವಾತಂತ್ರ್ಯ ಹೋರಾಟಗಾರರು, ಉದ್ಯಮಿಗಳು, ವಿಜ್ಞಾನಿಗಳು, ಬರಹಗಾರರು ಇವರಲ್ಲಿ ಕೆಲವರ ಬಗ್ಗೆ ನಾನು ವೈಯಕ್ತಿಕವಾಗಿ ತಿಳಿದು ಅವರನ್ನು ಮೆಚ್ಚಿಕೊಂಡಿದ್ದೇನೆ, ಆದರೆ ಅವರೆಲ್ಲಾ ಈಗ ನಮ್ಮೊಂದಿಗಿಲ್ಲ. ಗಾಂಧಿ ವಿವಿಧ ಕೋನಗಳಿಂದ ನೋಡಿದರೂ ಅವರು ಸಂಪೂರ್ಣವಾಗಿ ಭಾರತೀಯರು, ಅವರ ನೈತಿಕ ದೃಷ್ಟಿ ಮತ್ತು ತಾತ್ವಿಕತೆ ಮತ್ತು ಅವರ ಜೀವನ ಜಾಗತಿಕವಾಗಿ ಪ್ರಾಮುಖ್ಯತೆ ಪ್ರಸ್ತುತತೆ ಇರುವಂತಹದು. ಇತರ ಮಹಾನ್ ಸುಧಾರಕರು ಜಾತಿ, ಲಿಂಗ ತಾರತಮ್ಯ ,ಧಾರ್ಮಿಕ ಶ್ರೇಣೀಕರಣ, ಭಾಷೆಯ ಸಮಸ್ಯೆ ಇರಲಿ, ಅವರು ಭಾರತಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾತ್ರ ಮಾತಾಡಿದವರು. ಆದರೆ ಗಾಂಧಿ ಓರ್ವ ಜಾಗತಿಕ ವ್ಯಕ್ತಿತ್ವದವರು ಮತ್ತು ಬುದ್ಧನಂತೆ, ಗಾಂಧಿ ಭಾರತದಲ್ಲಿ ಜನಿಸಿದರು, ಆದರೆ ಭಾರತೀಯರಿಂದ ಅವರು ತಿರಸ್ಕೃತಗೊಂಡರು. ನಾವು ಯೋಚಿಸಬೇಕಾದ ವಿಚಾರ: ಬುದ್ಧ ಬಹಳವಾಗಿ ತೊಂದರೆ ಅನುಭವಿಸಿದನು. ಬುದ್ಧ ನೇಪಾಳದಲ್ಲಿ ಹುಟ್ಟಿರಬಹುದು. ಆದರೆ ಭಾರತದಲ್ಲಿ ಪೋಷಿಸಲ್ಪಟ್ಟವನು. ನಮ್ಮ ಉತ್ತರಪ್ರದೇಶ, ಬಿಹಾರದಲ್ಲಿ ಅವರು ನಡೆಸಿದ ಸಂವಾದ, ಸಂಭಾಷಣೆ, ಆತನಿಗಾದ ಜ್ಞಾನೋದಯ ಅವನನ್ನು ಬುದ್ಧನನ್ನಾಗಿ ಮಾಡಿತು. ಅವನು ಇಂಡಿಯಾದಲ್ಲಿ ರೂಪುಗೊಂಡವನು. ಅವನ ಮರಣಾನಂತರ ಪ್ರತಿಕ್ರಾಂತಿಯಾಯಿತು. ಅವನ ವಿಚಾರಗಳ ಯಾವ ಕುರುಹೂ ಇಲ್ಲದಂತೆ ಅವನ ಪ್ರಭಾವದ ಎಲ್ಲಾ ಕುರುಹುಗಳನ್ನು ನಾಶಮಾಡಲಾಯಿತು. ಆದರೂ ದಕ್ಷಿಣ–ಪೂರ್ವ ಏಷ್ಯಾ ದೇಶಗಳು,ಮಧ್ಯ ಏಷ್ಯಾ ಯೂರೋಪಿಯನ್ ಮತ್ತು ಅಮೇರಿಕಾದಲ್ಲಿ ಅವುಗಳನ್ನು ಪುನರನ್ವೇಷಿಸಲಾಯಿತು.. ಇದೇ ಪರಿಸ್ಥಿತಿ ಗಾಂಧಿಯವರ ವಿಷಯದಲ್ಲೂ ಆಗಬಹುದು, ನಾವು ಅವರನ್ನು ಹೊರದೂಡಬಹುದು.ಆದರೆ ಅವರನ್ನು ಅಳಿಸಿಹಾಕಲಾರೆವು, ಮುರುಹುಟ್ಟುಪಡೆಯುವರು. ■


(21 ಡಿಸೆಂಬರ್ 2022 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಖ್ಯಾತ ಇತಿಹಾಸತಜ್ಞ ಶ್ರೀ ರಾಮಚಂದ್ರ ಗುಹಾ ಅವರು ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಪುಸ್ತಕದ 25 ನೇ ಮುದ್ರಣ ಲೋಕಾರ್ಪಣೆ ಮಾಡುವ ಸಂದರ್ಭದಲ್ಲಿ ಆಡಿದ ಮಾತುಗಳ ಕನ್ನಡ ಅವತರಣಿಕೆ) (ಇಂಗ್ಲಿಷ್‌ನಿಂದ ಕನ್ನಡಕ್ಕೆ ತಂದವರು ಶಿವಮೊಗ್ಗದ ಕೆ. ಪದ್ಮಾಕ್ಷಿ.)


ನೆನಪಿನ ನೋಟ

ಮೈಸೂರು ಸಂಸ್ಥಾನದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಚೆಂಗಲರಾಯ ರೆಡ್ಡಿ (ಕೆ.ಸಿ ರೆಡ್ಡಿ) ಅವರ ನೇತೃತ್ವದಲ್ಲಿ ದಿನಾಂಕ 12 .02 .1948 ರ ಗುರುವಾರ. ಬೆಳಿಗ್ಗೆ 7 ಘಂಟೆ 30 ನಿಮಿಷದ ಸಮಯದಲ್ಲಿ ಕಾವೇರಿ ನದಿಯ ಪಶ್ಚಿಮ ವಾಹಿನಿ ಪವಿತ್ರ ತೀರ್ಥದ ಈ ಸ್ಥಳದಲ್ಲಿ ರಾಷ್ಟಪಿತ ಪೂಜ್ಯ ಮಹಾತ್ಮ ಗಾಂಧೀಜಿ ಅವರ ಚಿತಾ ಭಸ್ಮವನ್ನು ವಿಸರ್ಜಿಸಲಾಯಿತು.












(ಫೋಟೋ ಕೃಪೆ : ಡಾ. ಸುಜಯ್ ಕುಮಾರ್ ಮತ್ತು ಗಣಂಗೂರು ನಂಜೇಗೌಡ, ಶ್ರೀರಂಗಪಟ್ಟಣ)











ಸಂಗ್ರಹ ಚಿತ್ರಗಳು

ಶ್ರೀರಂಗಪಟ್ಟಣದಲ್ಲಿ ಸರ್ವೋದಯ ಮೇಳ

ಮಹಾತ್ಮ ಗಾಂಧೀಜಿಯವರು ನಮ್ಮನ್ನು ಅಗಲಿ ಇಲ್ಲಿಗೆ ಎಪ್ಪತ್ತೈದು ವರ್ಷಗಳಾದವು. ಅವರು ತಮ್ಮ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯ ಬದುಕಿನ ಜೊತೆಗೆ ಇಡೀ ಜಗತ್ತಿಗೆ ಅಹಿಂಸೆ ಎಂಬ ಪರಿಕಲ್ಪನೆಯನ್ನು ನೀಡುವುದರ ಮೂಲಕ ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಜಗತ್ತನ್ನು ಪ್ರಭಾವಿಸಿದ ಪರಿ ಇಂದಿಗೂ ವಿಸ್ಮಯದ ಸಂಗತಿಯಾಗಿದೆ. ಆದ್ದರಿಂದ ಈ ಪುಣ್ಯ ಪುರುಷನ ಚಿಂತನೆಗಳು ಇಂದಿಗೂ ಕೂಡಾ ಜಗತ್ತಿನಾದ್ಯಂತ ಹಲವು ರೂಪಗಳಲ್ಲಿ ಹಾಗೂ ಹಲವು ಆಯಾಮಗಳಲ್ಲಿ ಜೀವಂತವಾಗಿವೆ.

1948 ರ ಜನವರಿ 30 ರಂದು ದೆಹಲಿಯ ಬಿರ್ಲಾ ಭವನದಲ್ಲಿ ಓರ್ವ ಹಿಂದೂ ಮತಾಂದವಾದಿ ಹಾಗೂ ನರಹಂತಕನ ಗುಂಡಿಗೆ ಬಲಿಯಾದ ಮಹಾತ್ಮನ ಅಂತ್ಯ ಸಂಸ್ಕಾರವು ಅದೇ ದೆಹಲಿಯ ರಾಜ್ ಘಾಟ್ ನಲ್ಲಿ ನೆರವೇರಿತು. ನಂತರ ಅವರ ಚಿತಾಭಸ್ಮವನ್ನು ಈ ದೇಶದ ಎಲ್ಲಾ ಪುಣ್ಯ ನದಿಗಳಲ್ಲಿ ವಿಸರ್ಜಿಸಲಾಯಿತು. ಜೊತೆಗೆ ದೇಶದ ಅನೇಕ ನಗರಗಳಲ್ಲಿ ಬಾಪು ಸ್ಮರಣೆಯ ನೆನಪಿಗಾಗಿ ಅವರ ಚಿತಾ ಭಸ್ಮವನ್ನು ಸಂರಕ್ಷಿಸಿ ಇಡಲಾಗಿದೆ. ಗಾಂಧೀಜಿಯವರಿಗೆ ಕರ್ನಾಟಕದೊಂದಿಗೆ ಅನನ್ಯವಾದ ಸಂಬಂಧವಿದ್ದು ಅವರು ತಮ್ಮ ಜೀವಿತಾವಧಿಯಲ್ಲಿ ಸುಮಾರು ಹದಿನೇಳು ಬಾರಿ ಕರ್ನಾಟಕಕ್ಕೆ ಭೇಟಿ ನೀಡಿದ್ದಾರೆ. ಹಾಗಾಗಿ ಅವರ ಸ್ಮರಣೆಯ ನೆನಪಿನಲ್ಲಿ ಧಾರವಾಡ ಬಳಿಯ ಹುಬ್ಬಳ್ಳಿಯಲ್ಲಿ ಸರ್ದಾರ್ ವೀರನಗೌಡ ಪಾಟೀಲರು ಚಿತಾ ಭಸ್ಮವನ್ನು ರಕ್ಷಿಸಿ ಗಾಂಧಿ ಭವನ ನಿರ್ಮಿಸಿದ್ದಾರೆ. ಅದೇ ರೀತಿ ಬಳ್ಳಾರಿ ಜಿಲ್ಲೆಯ ಕೂಡ್ಲಗಿಯಲ್ಲಿ, ಮಡಿಕೇರಿಯಲ್ಲಿ, ಗದಗ ಬಳಿಯ ಬೆಟಗೇರಿಯಲ್ಲಿ ಹೀಗೆ ಹಲವು ಸ್ಥಳಗಳಲ್ಲಿ ಗಾಂಧೀಜಿಯವರ ಚಿತಾಭಸ್ಮವನ್ನು ರಕ್ಷಿಸಿ ಇಡಲಾಗಿದೆ.

ಇವೆಲ್ಲವುಗಳಿಂದ ಭಿನ್ನವಾಗಿ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ದೆಹಲಿಯ ರಾಜಘಾಟ್ ಮಾದರಿಯಲ್ಲಿ ಗಾಂಧೀಜಿಯವರ ಚಿತಾಭಸ್ಮಕ್ಕೆ ಅರಸಿಕೆರೆಯಲ್ಲಿ ಸಮಾಧಿ ನಿರ್ಮಿಸಿರುವುದು ವಿಶೇಷವಾಗಿದೆ. ಹಾಗಾಗಿ ಅರಸಿಕೆರೆ ಬಳಿ ಇರುವ ಕಸ್ತೂರ ಬಾ ಕೇಂದ್ರದಲ್ಲಿರುವ ಗಾಂಧೀಜಿಯವರ ಸಮಾಧಿಯನ್ನು ದಕ್ಷಿಣ ಭಾರತದ ರಾಜಘಾಟ್ ಎಂದು ಕರೆಯಲಾಗುತ್ತಿದೆ. ಇದರ ಜೊತೆಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ವೃತ್ತಿಯಲ್ಲಿ ವೈದ್ಯರಾಗಿದ್ದ ಡಾ. ಸಿ.ಬಂದಿಗೌಡರು ಗಾಂಧೀಜಿಯವರ ಚಿತಾಭಸ್ಮವನ್ನು ಶ್ರೀರಂಗಪಟ್ಟಣದ ಪಶ್ಚಿಮವಾಹಿನಲ್ಲಿ ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಚೆಂಗಲ್ರಾಯರೆಡ್ಡಿ ಅವರ ಮೂಲಕ ದಿನಾಂಕ 12–2–1948 ರಂದು ಕನ್ನಡನಾಡಿನ ಜೀವನದಿಯಾದ ಕಾವೇರಿ ನದಿಗೆ ವಿಸರ್ಜಿಸಿ ಅದರ ನೆನಪಿಗಾಗಿ ಸ್ಮಾರಕವನ್ನು ನಿರ್ಮಿಸಿದ್ದಾರೆ.

ಡಾ.ಸಿ.ಬಂದಿಗೌಡರು ತಮ್ಮ ಜೀವಿತಾವಧಿಯ ಉದ್ದಕ್ಕೂ ಈ ದಿನವನ್ನು ಸರ್ವೋದಯ ಮೇಳ ಎಂಬ ಹೆಸರಿನಲ್ಲಿ ಗಾಂಧಿ ಚಿಂತನೆಗಳನ್ನು ಮಂಡ್ಯ ಮತ್ತು ಮೈಸೂರು ಸೇರಿದಂತೆ ದಕ್ಷಿಣ ಕರ್ನಾಟಕದ ಜನತೆ ಪ್ರಸರಿಸುತ್ತಾ ಬಂದರು. ಮಂಡ್ಯ ಜಿಲ್ಲೆಯ ಇತಿಹಾಸದಲ್ಲಿ ಸ್ವಾತಂತ್ರ್ಯ ಹೋರಾಟದ ಸ್ಮಾರಕವಾಗಿ ಮದ್ದೂರಿನ ಶಿವಪುರ ಧ್ವಜ ಸತ್ಯಾಗ್ರಹ ಭವನ ಇದ್ದರೆ, ಶ್ರೀರಂಗಪಟ್ಟಣದಲ್ಲಿ ನಡೆಯುತ್ತಿರುವ ಸರ್ವೋದಯ ಮೇಳದಲ್ಲಿ ಗಾಂಧೀಜಿಯವರ ಐತಿಹಾಸಿಕ ನೆನಪುಗಳಿವೆ. 2012 ರಲ್ಲಿ ಡಾ.ಸಿ.ಬಂದಿಗೌಡರು ನಿಧನರಾದ ನಂತರ ಅವರ ಪುತ್ರರಾದ ಡಾ. ಸುಜಯ ಕುಮಾರ್ ಅವರು ತಮ್ಮ ತಂದೆಯವರ ಈ ಉದಾತ್ತ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.


ಇಂದಿನ ಮಂಡ್ಯ ಜಿಲ್ಲೆಯಲ್ಲಿ ಗಾಂಧೀಜಿಯವ ಚಿಂತನೆಗಳು, ಅವರ ಜೀವನದ ದೃಷ್ಟಿಕೋನ ಇವುಗಳೇಲ್ಲವೂ ಜೀವಂತವಾಗಿರುವುದು ಮೂರು ಸ್ಥಳಗಳಲ್ಲಿ ಮಾತ್ರ. ಒಂದನೆಯದಾಗಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರರು ಹಾಗೂ ಗಾಂಧಿವಾದಿಯಾಗಿದ್ದ ದಿ.ಸುರೇಂದ್ರದಾನಿಯವರು ಆರಂಭಿಸಿದ್ದ ಗಾಂಧೀಜಿಯವರ ಕನಸಿನ ಗ್ರಾಮಭಾರತದ ಚಟುವಟಿಕೆಗಳಾದ ಖಾದಿ ಮತ್ತು ಗುಡಿ ಕೈಗಾರಿಕೆ ಹಾಗೂ ಚಿಂತನೆಗಳನ್ನು ಅವರ ಪುತ್ರ ಸಂತೋಷ್ ಕೌಲಗಿ ಜೀವಂತವಿಟ್ಟಿದ್ದಾರೆ. ಅದೇರೀತಿ ಮಂಡ್ಯ ನಗರದಲ್ಲಿ ದಿ.ಜಿ.ಮಾದೇಗೌಡರು ನಿರ್ಮಿಸಿದ ಗಾಂಧಿಭವನದ ಮೂಲಕ ಬಹುತೇಕ ಗಾಂಧಿ ಕುರಿತಾದ ಚಟುವಟಿಕೆಗಳನ್ನು ಅಲ್ಲಿನ ಲಿಂಗಣ್ಣ ಬಂಧೂಕರ್ ನಡೆಸಿಕೊಂಡು ಹೋಗುತ್ತಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಡಾ.ಸಿ.ಬಂದಿಗೌಡರು ತಮ್ಮ ಸಮಾನ ಮನಸ್ಕ ಗೆಳೆಯರೊಂದಿಗೆ ಪಶ್ಚಿಮವಾಹಿನಿಯಲ್ಲಿ ಪ್ರತಿವರ್ಷ ಪೆಬ್ರವರಿ ತಿಂಗಳಿನಲ್ಲಿ ಸರ್ವೋದಯ ಮೇಳವನ್ನು ನಡೆಸುವುದರ ಮೂಲಕ ನಾಡಿನ ಗಾಂಧಿವಾದಿಗಳು ಮತ್ತು ಚಿಂತಕರನ್ನು ಕರೆಸಿ ಅವರಿಂದ ವಿಶೇಷ ಉಪನ್ಯಾಸ ಏರ್ಪಡಿಸುವುದರ ಮೂಲಕ ಜನತೆಗೆ ಗಾಂಧಿ ವಿಚಾರಧಾರೆಗಳನ್ನು ತಲುಪಿಸುತ್ತಿದ್ದರು. ಈಗ ಅವರ ಪುತ್ರ ಡಾ.ಸುಜಯ್ ಕುಮಾರ್ ಪಶ್ಚಿಮವಾಹಿನಯ ನದಿ ತೀರದ ಕೊಳಚೆ ಹಾಗೂ ಕಲ್ಮಶದ ಕಾರಣ ಮೇಳವನ್ನು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಿಕೊಂಡು ಜಿಲ್ಲೆಯ ಗಾಂಧಿ ವಾದಿಗಳ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ಸರವೋದಯ ಮೇಳವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಈ ವರ್ಷದ ಸರ್ವೋದಯ ಮೇಳ ಕಾರ್ಯಕ್ರಮವನ್ನು ಗಾಂಧೀಜಿಯವರು ನಿಧನರಾಗಿ ಎಪ್ಪತ್ತೈದು ವರ್ಷವಾದ ಹಿನ್ನಲೆಯಲ್ಲಿ ಎರಡು ದಿನಕ್ಕೆ ವಿಸ್ತರಿಸಲಾಗಿತ್ತು. ತುಮಕೂರಿನ ಹಿರಿಯ ಗಾಂಧಿವಾದಿ ಶ್ರೀ ಎಂ ಬಸವಯ್ಯನವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಪೆಬ್ರವರಿ ಹನ್ನೊಂದರ ಶನಿವಾರದಂದು ಲೇಖಕಿ ಹೊನ್ನಾವರದ ಡಾ.ಹೆಚ್.ಎಸ್.ಅನುಪಮಾ ಅವರು 'ಈ ಹೊತ್ತಿಗೆ ಗಾಂಧಿ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿದರು. ನನ್ನ ಬದುಕೇ ಒಂದು ಸಂದೇಶ ಎಂದು ಹೇಳಿದ ಮಹಾತ್ಮನ ನೈತಿಕತೆಯ ಕುರಿತು ಮಾತನಾಡಿದ ಅವರು ಇಂದಿನ ರಾಜಕಾರಣಿಗಳಲ್ಲಿ ಅಂತಹ ನೈತಿಕತೆ ಇದೆಯಾ? ಎಂದು ಪ್ರಶ್ನಿಸುವುದರ ಮೂಲಕ ವರ್ತಮಾನದ ರಾಜಕಾರಣಿಗಳ ನೈತಿಕತೆ ದಿವಾಳಿಯಾಗಿರುವುದನ್ನು ಎತ್ತಿ ತೋರಿಸಿದರು.

ಎರಡನೆಯ ದಿನದಂದು ' ಗಾಂಧೀಜಿ ಮತ್ತು ಗ್ರಾಮಭಾರತ' ಎಂಬ ವಿಷಯ ಕುರಿತು ಮಾತನಾಡಿದ ಲೇಖಕ ಡಾ.ಎನ್.ಜಗದೀಶ್ ಕೊಪ್ಪ ಅವರು ವರ್ತಮಾನದ ಭಾರತದಲ್ಲಿ ಗಾಂಧೀಜಿಯವರನ್ನು ಟೀಕಿಸುವುದು ಅಥವಾ ವಿರೋಧಿಸುವುದು ಮನೋರೋಗವಾಗಿದೆ ಎಂದು ಹೇಳುವುದರ ಜೊತೆಗೆ ಅಸ್ಪಶ್ಯತೆಯ ಕುರಿತಾಗಿ ಮೇಲ್ಜಾತಿ ಜನರಲ್ಲಿ ಗಾಂಧಿಯವರು ಮೂಡಿಸಿರುವ ಜಾಗೃತಿಯನ್ನು ವಿವರಿಸಿದರು. ಬಾಪುವಿನ ಕನಸಿನ ಗ್ರಾಮಭಾರತದಲ್ಲಿ ದುಡಿಯುವ ಎಲ್ಲಾ ಜಾತಿ ಮತ್ತು ಧರ್ಮದವರ ಕೈಗಳಿಗೆ ಕೆಲಸ ನೀಡುವುದು ಅವರ ಆದ್ಯತೆಯಾಗಿತ್ತು. ಹಾಗಾಗಿ ಅವರು ಚರಕವನ್ನು ಆಯ್ಕೆ ಮಾಡಿಕೊಂಡರು. ಚರಕ ಮತ್ತು ಖಾದಿ ಚಟುವಟಿಕೆಯಿಂದ ಏಕಕಾಲದಲ್ಲಿ ಹತ್ತಿ ಬೆಳೆಯುವ ರೈತ, ನೂಲು ತೆಗೆಯುವ ಕಾರ್ಮಿಕ, ಬಟ್ಟೆ ನೇಯುವ ನೇಕಾರ ಮತ್ತು ಮಾರಾಟ ಮಾಡುವ ವರ್ತಕ ಹೀಗೆ ಎಲ್ಲರ ಬದುಕನ್ನು ಜಾತ್ಯಾತೀತವಾಗಿ ಹಾಗೂ ಧರ್ಮಾತೀತವಾಗಿ ಸುಸ್ಥಿರಗೊಳಿಸುವುದು ಅವರ ಧ್ಯೇಯವಾಗಿತ್ತು ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಎಂ.ಬಸವಯ್ಯನವರು ಮಾತನಾಡಿ ಗಾಂಧೀಜಿಯವರ ಜೀವನ ಚರಿತ್ರೆ ಭಾರತದ ಇತಿಹಾಸದಲ್ಲಿ ಒಂದು ಮಹಾ ಕಾವ್ಯ ಎಂದು ಬಣ್ಣಿಸಿದರಲ್ಲದೆ ಅವರ ಜೀವನ ಚರಿತ್ರೆಯನ್ನು ಎಲ್ಲಾ ಮಕ್ಕಳಿಗೂ ನಾವು ಓದಿಸಬೇಕಾಗಿದೆ ಎಂದು ಅಭಿಪ್ರಾಯ ಪಟ್ಟರು. ಈ ಬಾರಿಯ ಸರ್ವೊದಯ ಮೇಳಕ್ಕೆ ಬೆಂಗಳೂರಿನ ಗಾಂಧಿ ಭವನದ ಪದಾಧಿಕಾರಿಗಳು ವಿಶೇಷವಾಗಿ ಪ್ರೊ.ಶಿವರಾಜ್ ಮತ್ತು ಎಂ.ಸಿ.ನರೇಂದ್ರ, ಆಗಮಿಸಿ ಮೇಳವನ್ನು ಯಶಸ್ವಿಗೊಳಿಸಿದರು. ಡಾ.ಸುಜಯ್ ಕುಮಾರ್ ಜೊತೆಗೆ ಮೇಲುಕೊಟೆಯ ಸಂತೋಷ್ ಕೌಲಗಿ, ಮೈಸೂರಿನ ಪಿ.ವಿಶ್ವನಾಥ್, ಸುಬ್ರಮಣ್ಯ , ಕಾಳಿಚನ್ನೇಗೌಡ, ಸೇರಿದಂತೆ ಮಲ್ಲನಾಯ್ಕನ ಕಟ್ಟೆಯ ಬೋರೇಗೌಡ, ಮಂಡ್ಯದ ಲಿಂಗಣ್ಣ ಬಂಧೂಕರ್,ಕ್ಯಾತನಹಳ್ಳಿಯ ಡಾ.ಶ್ರೀನಿವಾಸ್, ಹರವು ದೇವೇಗೌಡ ಹಾಗೂ ಮಂಡ್ಯ ಮತ್ತು ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಗಳು ಹಾಗೂ ಅನೇಕ ಸಮಾಜ ಸೇವಕರು ಕೈ ಜೋಡಿಸಿದ್ದು ವಿಶೇಷವಾಗಿತ್ತು.



ಈ ವರ್ಷದ ಸರ್ವೋದಯ ಮೇಳದ ಅಧ್ಯಕ್ಷರಾದ ಡಾ ಎನ್ ಜಗದೀಶ್ ಕೊಪ್ಪ ಅವರು ಮಾತಾಡುತ್ತಿರುವುದು

–ಎನ್ ಜಗದೀಶ್ ಕೊಪ್ಪ




ಗಾಂಧೀಜಿ ಬದುಕಿಸಿದ್ದ ಸಂಗೀತ

ಬೆಳಗಾವಿಯಲ್ಲಿ ಐತಿಹಾಸಿಕ ಅಖಿಲಭಾರತ ವಾರ್ಷಿಕ ಕಾಂಗ್ರೇಸ ಅಧಿವೇಶನ 1924 ರಲ್ಲಿ ಜರುಗಿತು. ಮಹಾತ್ಮ ಗಾಂಧೀಜಿ ಅಧ್ಯಕ್ಷರಾಗಿದ್ದ ಏಕೈಕ ಅಪರೂಪದ ಕಾಂಗ್ರೆಸ್ ಅಧಿವೇಶನ ಅದಾಗಿತ್ತು. ಆ ಸಂದರ್ಭದಲ್ಲಿ ಗಾಂಧೀಜಿಯವರಿಗೆ ಕರ್ನಾಟಕ ಸಂಗೀತ ಕೇಳಿಸಬೇಕೆಂದು, ಸ್ವಾಗತ ಸಮಿತಿಯವರು ಮೈಸೂರಿನ ವೀಣೆ ಶೇಷಣ್ಣನವರನ್ನು ಆಹ್ವಾನಿಸಿದ್ದರು. ವೀಣೆ ಶೇಷಣ್ಣನವರು ಗಾಂಧೀಜಿಯವರ ಎದುರಿಗೆ 15 ನಿಮಿಷ, ಕಾಫಿ ರಾಗವನ್ನು ಅದ್ಭುತವಾಗಿ ನುಡಿಸಿದರು. ಗಾಂಧೀಜಿಯವರು ಸಂತೋಷದಿಂದ ಅದನ್ನು ಆಲಿಸಿದರು. ಸಂಗೀತಕ್ಕೆ ನಿಗದಿಯಾದ ಸಮಯ ಮುಗಿದಿತ್ತು.
ಗಾಂಧೀಜಿಯವರಿಗೆ ಅಂದು ಮೌನ ದಿನವಾಗಿತ್ತು. ಅವರು ಒಂದು ಚೀಟಿಯಲ್ಲಿ ವೀಣಾ ವಾದನ ಮುಂದುವರೆಯಲಿ ಎಂದು ಬರೆದು ತಮ್ಮ ಆಪ್ತ ಕಾರ್ಯದರ್ಶಿಗೆ ಕೊಟ್ಟರು. ಆಗ ಕಾರ್ಯದರ್ಶಿ 'ಸಮಯ ಮೀರಿದೆ ನಿಮಗೊಂದು ಮಹತ್ವದ ಮೀಟಿಂಗ್ ಇದೆ' ಎಂದು ಹೇಳಿದರು. 'ಮೀಟಿಂಗ್ ನಂತರ ನಡೆಯಲಿ' ಎಂದು ಗಾಂಧೀಜಿ ಮತ್ತೆ ಬರೆದರು . ನಂತರ ಮತ್ತೆ 15 ನಿಮಿಷ ವೀಣಾ ವಾದನ ಮುಂದುವರೆಯಿತು. ಅದಾದ ಮೇಲೆ ಗಾಂಧೀಜಿ ಇನ್ನೊಂದು ಚೀಟಿ ಬರೆದರು. 'ಮನಸ್ಸಿಗೆ ತುಂಬಾ ಶಾಂತಿ ಕೊಟ್ಟಿದ್ದಾರೆ' ಎಂದು ಅವರಿಗೆ ತಿಳಿಸಿ ಎಂದು ಅದರಲ್ಲಿ ಬರೆದಿದ್ದರು . ಇದನ್ನು ಕೇಳಿ ವೀಣೇ ಶೇಷಣ್ಣ ತುಂಬಾ ಸಂತೋಷಪಟ್ಟರು.

ಆಕಾಶವಾಣಿ ಬೆಂಗಳೂರಿನಲ್ಲಿ ಸಂಗೀತ ವಿಭಾಗದಲ್ಲಿ ಕಾರ್ಯಕ್ರಮ ನಿರ್ಮಾಪಕರಾಗಿದ್ದ ವೀಣೆ ಶೇಷಣ್ಣನವರ ಶಿಷ್ಯ ವೀಣೆ ದೊರೆಸ್ವಾಮಿ ಅಯ್ಯಂಗಾರ್ ಈ ವಿಷಯವನ್ನು ಆಕಾಶವಾಣಿ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ .

ತಮಗೆ ಸಂಗೀತದಲ್ಲಿ ಆಸಕ್ತಿ ಇದೆಯಾ? ಎಂದು ಗಾಂಧೀಜಿಗೆ ಒಮ್ಮೆ ಪ್ರಶ್ನೆ ಕೇಳಲಾಗಿತ್ತು. 'ನನ್ನಲ್ಲಿ ಸಂಗೀತ ಹಾಗೂ ಹಾಸ್ಯ ಇಲ್ಲದೇ ಇದ್ದಲ್ಲಿ ತೀವ್ರ ಕೆಲಸದ ಒತ್ತಡದಿಂದ ನಾನು ಸತ್ತು ಹೋಗುತ್ತಿದ್ದೆ' ಎಂದು ಗಾಂಧೀಜಿ ಉತ್ತರಿಸಿದರು. 'ಸಂಗೀತ ನನಗೆ ಶಾಂತಿ ಕೊಡುತ್ತದೆ ಯಾವುದೇ ಕಾರಣಕ್ಕಾಗಿ ನನಗೆ ಒತ್ತಡ ಉಂಟಾದಾಗ ಸಂಗೀತ ಕೇಳಿ ಮನಸ್ಸಿಗೆ ಶಾಂತಿಯನ್ನು ಪಡೆಯುತ್ತೇನೆ'. ಸಂಗೀತದಿಂದ ಸಿಟ್ಟು ಅಳಿಯುತ್ತದೆ ಎಂಬುದು ನನಗೆ ಅನುಭವವಾಗಿದೆ. 1907 ರಲ್ಲಿ ಟ್ರಾನ್ಸ್ವಾಲಿನಲ್ಲಿ ಹೊಡೆತ ಬಿದ್ದು ನೋವಿನಿಂದ ನರಳುತ್ತಿದ್ದಾಗ ನನ್ನ ಮಿತ್ರನ ಮಗಳು ಹಾಡಿದ ಇಂಪಾದ ಭಜನೆ 'ಕರುಣಾಳು ಬಾ ಬೆಳಕೆ ' ಕೇಳಿ ನನ್ನ ನೋವೆಲ್ಲ ಮಾಯವಾಯಿತು. ಇದು ತಮ್ಮ ' ಯಂಗ್ ಇಂಡಿಯಾ ' ಪತ್ರಿಕೆಯಲ್ಲಿ ಗಾಂಧೀಜಿಯವರು ಸಂಗೀತದ ಬಗ್ಗೆ ವ್ಯಕ್ತಪಡಿಸಿದ ಅನಿಸಿಕೆಯ ಅವತರಣಿಕೆ.

ಹೌದು , ಗಾಂಧೀಜಿಯವರಿಗೆ ಸಂಗೀತದಲ್ಲಿ ಅಪಾರ ಆಸಕ್ತಿ ಇತ್ತು. ದಿನದ ಪ್ರಾರಂಭದಲ್ಲಿ ಹಾಗೂ ಮಲಗುವ ಮುನ್ನ ಅವರು ನಿತ್ಯ ಭಜನೆಗಳನ್ನು ಕೇಳುತ್ತಿದ್ದರು. ವೈಷ್ಣವ ಜನತೊ. . ; ರಘುಪತಿ ರಾಘವ ರಾಜಾರಾಮ್ ; ಹರಿ ತುಮ ಹರೋ_ಇಂತಹ ಅವರ ಹಲವು ನೆಚ್ಚಿನ ಭಜನೆಗಳು ಇಂದಿಗೂ ಗಾಂಧಿ ಭಜನೆಗಳೆಂದೆ ಜನಪ್ರಿಯವಾಗಿವೆ. ಆಶ್ರಮದಲ್ಲಿ ಭಜನೆಗಳನ್ನು ಹಾಗೆ ಸುಮ್ಮನೆ ಹಾಡುತ್ತಿರಲಿಲ್ಲ. ಅವುಗಳನ್ನು ಶಾಸ್ತ್ರಬದ್ಧವಾಗಿ ಹಾಡುವಂತೆ ಸಂಗೀತ ಸಂಯೋಜನೆ ಮಾಡಿದವರು ಖ್ಯಾತ ಸಂಗೀತ ತಜ್ಞ ದಿಗಂಬರ ಪಲುಸ್ಕರರ ಶಿಷ್ಯ , ನಾರಾಯಣ ಖರೆ . ' ವೈಷ್ಣವ ಜನತೋ. . . ' ಗಾಂಧೀಜಿಯವರ ಜೀವದ ಉಸಿರೇ ಆಗಿತ್ತು. 500 ವರ್ಷಗಳ ಹಿಂದೆ ಇದನ್ನು ಗುಜರಾತಿ ಭಾಷೆಯಲ್ಲಿ ರಚಿಸಿದ್ದು ಸಂತ ಕವಿ ನರಸಿಂಹ ಮೆಹ್ತಾ. ಮಹಾತ್ಮಗಾಂಧೀಜಿಯವರ 150 ನೆಯ ಜನ್ಮೋತ್ಸವದ ಆಚರಣೆ ಅಂಗವಾಗಿ ವೈಷ್ಣವ ಜನತೋ_ಭಜನೆಯನ್ನು ವಿಶ್ವದ 124 ದೇಶಗಳ ಅಲ್ಲಿನ ಹೆಸರಾಂತ ಕಲಾವಿದರು ಹಾಡಿದ್ದರು .ನಂತರ ಎಲ್ಲ ಧ್ವನಿಗಳನ್ನು ಸೇರಿಸಿ ಫ್ಯೂಜನ್ ರೂಪದಲ್ಲಿ ಮೂಡಿಸಿದ್ದು ವಿಶ್ವಸಂಗೀತ ಲೋಕದಲ್ಲಿ ಒಂದು ವಿಸ್ಮಯವೇ ಆಗಿದೆ. ಮಹಾತ್ಮಾ ಗಾಂಧೀಜಿಯವರಿಗೆ ಸಂಗೀತಮಯವಾಗಿ



ಪ್ರತಿಯೊಬ್ಬರು ಸಂಗೀತ ಕಲಿತದ್ದೇ ಆದರೆ, ಬಹಳಷ್ಟು ವೈರ ಭಾವನೆಗಳು ಕೊನೆಗೊಳ್ಳುವವು ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಸಲ್ಲಿಸಿದ ಅಪೂರ್ವ, ವಿನೂತನ ಗೌರವ ಇದಾಗಿದೆ.

1947 ಅಕ್ಟೋಬರ 2 ಗಾಂಧೀಜಿಯವರ ಜನ್ಮ ದಿನದ ಸಂದರ್ಭದಲ್ಲಿ ಅವರಿಗಾಗಿ ಹಿಂದಿ ಭಜನೆಯನ್ನು ಹಾಡಲು ವಿದೂಷಿ ಎಮ್ ಎಸ್ ಸುಬ್ಬಲಕ್ಷ್ಮಿಯವರನ್ನು ಮದ್ರಾಸಿನಿಂದ ದೆಹಲಿಗೆ ಆಹ್ವಾನಿಸಲಾಯಿತು. ಪೂರ್ವ ನಿರ್ಧಾರಿತ ಕಾರ್ಯಕ್ರಮದಿಂದ ಅವರಿಗೆ ದೆಹಲಿಗೆ ಹೋಗಲು ಆಗಲಿಲ್ಲ. ಆದರೇ ಬಾಪುವಿಗಾಗಿ ಎಂ ಎಸ್ ಸುಬ್ಬಲಕ್ಷ್ಮಿಯವರು ಹಲವು ಹಿಂದಿ ಭಜನೆಗಳನ್ನ ರಿಕಾರ್ಡ್ ಮಾಡಿ ಕಳುಹಿಸಿದರು. ಗಾಂಧೀಜಿಯವರ ನೆಚ್ಚಿನ ಮೀರಾಭಜನ 'ಹರಿ ತುಮ ಹರೋ. . . ಅದರಲ್ಲಿರಲಿಲ್ಲ . ಅದನ್ನು ಸುಬ್ಬಲಕ್ಷ್ಮಿಯವರ ಧ್ವನಿಯಲ್ಲೇ ಕೇಳಬೇಕೆಂಬ ಇಚ್ಚೆಯನ್ನು ಗಾಂಧೀಜಿ ಅಕ್ಟೋಬರ 1 ರ ಸಾಯಂಕಾಲ ವ್ಯಕ್ತಪಡಿಸಿದರು. ಗಾಂಧೀಜಿಯವರ ಕೋರಿಕೆಯನ್ನು ಮನ್ನಿಸಿ, ಅಲ್ಪ ಸಮಯದಲ್ಲಿ ಕಷ್ಟಪಟ್ಟು ' ಹರಿ ತುಮ ಹರೋ. . .' ಮೀರಾ ಭಜನೆಯನ್ನು ಸಂಗಿತಕ್ಕೆ ಅಳವಡಿಸಿ ಸುಬ್ಬಲಕ್ಷ್ಮಿಯವರ ಧ್ವನಿಯಲ್ಲೇ ರಾತ್ರಿ 2 ಗಂಟೆಗೆ ಆಲ್ ಇಂಡಿಯಾ ರೇಡಿಯೋ ಮದ್ರಾಸ್ ಕೇಂದ್ರದಲ್ಲಿ ರೆಕಾರ್ಡ ಮಾಡಲಾಯಿತು. ಆ ಧ್ವನಿಮುದ್ರಣವನ್ನು ಅಕ್ಟೋಬರ 2 ರ ಬೆಳಗಿನ ವಿಮಾನದ ಮೂಲಕ ದೆಹಲಿಗೆ ಕಳುಹಿಸಲಾಯಿತು. ಅಂದು ಗಾಂಧೀಜಿ ಅದನ್ನು ಹಲವಾರು ಸಲ ಕೇಳಿ ಸಂತೋಷ ಪಟ್ಟರು. ಈ ಘಟನೆಯನ್ನು ಮತ್ತು ಸಂಗೀತ ಸಂಯೋಜನೆಯನ್ನು ಆಕಾಶವಾಣಿಯ ನಿವೃತ್ತ ನಿರ್ದೇಶಕ ಎಸ್. ಕೃಷ್ಣಮೂರ್ತಿಯವರು ನನ್ನೊಡನೆ ಹಂಚಿಕೊಂಡಿದ್ದರು .


ಕೇಳಿದಷ್ಟು ಸಲ ಮತ್ತೊಮ್ಮೆ ಕೇಳಬೇಕೆನಿಸುವ ಕವಿ ಇಕ್ಬಾಲರ ಸುಂದರ ದೇಶ ಭಕ್ತಿಗೀತೆ 'ಸಾರೆ ಜಹಾಂಸೆ ಅಚ್ಚಾ ಹಿಂದುಸ್ತಾನ ಹಮಾರ. . ., ಗೀತೆಯನ್ನು ಗಾಂಧೀಜಿ ಜೈಲಿನಲ್ಲಿದ್ದಾಗ ಅದನ್ನು ನೂರಾರು ಸಲ ಹಾಡಿಕೊಂಡಿದ್ದರಂತೆ . ಗಾಂಧೀಜಿಯವರಿಗೆ ಸಂಗೀತದ ಗುಂಗು ಎಷ್ಟೊಂದು ಇತ್ತು ಎಂದರೆ ಸುಮಧುರ ಸಂಗೀತ ಅವರ ಕಿವಿಗೆ ಬಿದ್ದಾಗ ಆಕರ್ಷಿತರಾಗುತ್ತಿದ್ದರು.

ಕೇವಲ ವಿಚಾರದಿಂದ ಮಾತ್ರ ಸಂಗೀತ ಮೂಡಿ ಬರುವುದಿಲ್ಲ. ಮನಸ್ಸು ಭಾವನೆ ಹಾಗೂ ಹೃದಯದಿಂದ ಬರುವುದೇ ನಿಜವಾದ ಸಂಗೀತ ನಮ್ಮ ಹೃದಯ ತಂತಿಗಳು ಶೃತಿಗೂಡಿದಾಗ ಮಾತ್ರ ಸಂಗೀತ ರೂಪಗೊಳ್ಳುತ್ತದೆ. ಜನರನ್ನು ಒಗ್ಗೂಡಿಸುವಲ್ಲಿ ಸಂಗೀತದ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದರಲ್ಲಿ ಗಾಂಧೀಜಿಗೆ ಬಲವಾದ ನಂಬಿಕೆ ಇತ್ತು. ಸಮರಸದ ಸಂಗೀತಕ್ಕೆ ಆತ್ಮದ ಯಾತನೆಯನ್ನು ತಗ್ಗಿಸುವ ಶಕ್ತಿಯಿದೆ. ರಾಷ್ಟ್ರೀಯ ಗೀತೆಯನ್ನು ಒಟ್ಟಾಗಿ ಹಾಡಿದಾಗ ಏಕತೆಯ ಭಾವ ಮೂಡಿ ಶಾಂತಿ ಸಾಧಿಸಲು ಸಾಧ್ಯ. ನೂರಾರು ಬಾಲಕರು ಸಾಹಸ ಧೈರ್ಯ, ಭಾವನೆಗಳು ತುಂಬಿದ ಪದ್ಯವನ್ನು ಹಾಡುತ್ತಿದ್ದರೆ ; ಅದೊಂದು ಹೃದಯ ಸ್ಪರ್ಷಿ. ದೃಷ್ಯ ಸಂಗೀತಕ್ಕೆ ನಮ್ಮ ಶಿಕ್ಷಣದಲ್ಲಿ ಸ್ಥಾನ ಸಿಗಲೇಬೇಕು ಮತ್ತು ಜನತೆಯ ಸಾಂಸ್ಕೃತಿಕ ಜಾಗೃತಿಯಲ್ಲಿ ಅದರ ಮೌಲ್ಯವನ್ನು ಒಪ್ಪಲೇಬೇಕು. ಸಂಗೀತದ ಮಹತ್ವ ಮತ್ತು ಸಾಮರ್ಥ್ಯದ ಬಗ್ಗೆ ಗಾಂಧಿಜಿಯವರ ದೃಢವಾದ ವಿಶ್ವಾಸವನ್ನು ಅವರ ಈ ಹೇಳಿಕೆಗಳಲ್ಲಿ ಕಾಣಬಹುದಾಗಿದೆ. ಪ್ರತಿಯೊಬ್ಬರು ಸಂಗೀತ ಕಲಿತದ್ದೇ ಆದರೆ, ಬಹಳಷ್ಟು ವೈರ ಭಾವನೆಗಳು ಕೊನೆಗೊಳ್ಳುವವು ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

(ಕೃಪೆ:ಅಕ್ಷರ ಸಂಗಾತ ಸಾಹಿತ್ಯ ಮಾಸಿಕ)

ಸಿ ಯು ಬೆಳ್ಳಕ್ಕಿ
ನಿವೃತ್ತ ನಿರ್ದೇಶಕರು, ಆಕಾಶವಾಣಿ

ಗಾಂಧಿ ಹೆಜ್ಜೆ ಜಾಡು ಹಿಡಿದು..



ತಮಿಳುನಾಡು, ಕರ್ನಾಟಕ, ಆಂಧ್ರದಲ್ಲಿ ತಿರುವಳ್ಳುವರ್, ಸರ್ವಜ್ಞ, ವೇಮನನಂತಹ ಕ್ರಾಂತಿಕಾರಕ ಕವಿವರ್ಯರು ಆಗಿಹೋಗಿದ್ದಾರೆ. ಕೇರಳದ ನಾರಾಯಣಗುರು, ಕರ್ನಾಟಕದ ಕುದ್ಮುಲ್ ರಂಗರಾವ್, ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಆರ್. ಗೋಪಾಲಸ್ವಾಮಿ ಅಯ್ಯರ್ ಮೊದಲಾದ ಪ್ರೀತಿಯ ವ್ಯಕ್ತಿತ್ವಗಳು ಅಮಾನವೀಯ ಅಸ್ಪೃಶ್ಯತೆ ಆಚರಣೆ, ಶ್ರೇಣೀಕೃತ ಜಾತಿ ವ್ಯವಸ್ಥೆ, ಅರ್ಥವಿಲ್ಲದ ಮೌಢ್ಯಗಳನ್ನು ಹೋಗಲಾಡಿಸಲು, ಮಾನವ ಸೌಹಾರ್ದದ ನೆಲೆಯಲ್ಲಿ ದಿಟ್ಟ ಕೆಲಸ ಮಾಡಿರುವುದು ದಕ್ಷಿಣ ಭಾರತದ ಹೆಗ್ಗಳಿಕೆ.

ಭಾರತದ ಇಂತಹ ಭೂಪ್ರದೇಶದ ಮೇಲೆ ಮಹಾತ್ಮ ಗಾಂಧಿ ಅವರು ಬೀರಿದ ಪ್ರಭಾವ ಬಲು ದೊಡ್ಡದು. ಹಾಗೆಯೇ ಈ ಭಾಗದ ಮಾನವೀಯ ನೆಲೆಗಳಿಂದ ಗಾಂಧೀಜಿ ಕೂಡ ಪ್ರಭಾವಕ್ಕೆ ಒಳಗಾಗಿದ್ದುದು ವಿಶೇಷ.

ಬ್ಯಾರಿಸ್ಟರ್ ಆಗಿ ಇಂಗ್ಲೆಂಡಿನಿಂದ ಭಾರತಕ್ಕೆ ಬಂದ ಸೂಕ್ಷ್ಮಗ್ರಾಹಿ ಗಾಂಧೀಜಿ ಅವರಿಗೆ ಗೋಪಾಲಕೃಷ್ಣ ಗೋಖಲೆ ಅವರು, 'ಇಡೀ ಭಾರತವನ್ನು ಸುತ್ತಿ ಬಾ. ನಿನ್ನ ಸಾಮಾಜಿಕ ಗ್ರಹಿಕೆ ಇನ್ನಷ್ಟು ಆಳವಾಗುತ್ತದೆ' ಎಂಬ ಸಲಹೆ ನೀಡಿದ್ದರು. ಆಗ ಗಾಂಧೀಜಿ, ಇಡೀ ಗ್ರಾಮಭಾರತವನ್ನು ಮೋಹದ ರೀತಿಯಲ್ಲಿ ಸಂಚರಿಸಿದ್ದರು. ದಕ್ಷಿಣ ಭಾರತದಲ್ಲೂ ತುಂಬಾ ಆಸ್ಥೆಯಿಂದಲೇ ಓಡಾಡಿದ್ದರು.

ಅಸ್ಪೃಶ್ಯತೆ ನಿವಾರಣೆ, ಹರಿಜನ ನಿಧಿ ಸಂಗ್ರಹ, ಖಾದಿ ಪ್ರಚಾರ ಹಾಗೂ ಸ್ವಾತಂತ್ರ್ಯ ಚಳವಳಿಯ ಜಾಗೃತಿಯ ಉದ್ದೇಶದಿಂದ ಅವರು ಕರ್ನಾಟಕ, ತಮಿಳುನಾಡು, ಕೇರಳ, ಅವಿಭಜಿತ ಆಂಧ್ರಪ್ರದೇಶಕ್ಕೆ 1896ರಿಂದ 1946ರವರೆಗೆ ಐದು ದಶಕಗಳಲ್ಲಿ ಐವತ್ತಕ್ಕೂ ಹೆಚ್ಚು ಸಲ ಪ್ರವಾಸ ಮಾಡಿದ್ದರು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಚಳವಳಿಯಲ್ಲಿ ತೊಡಗಿದ್ದಾಗಲೇ ಅವರ ಬೆಂಬಲಿಗರಾಗಿದ್ದವರಲ್ಲಿ ತಮಿಳುನಾಡಿನ ವಳ್ಳಿಯಮ್ಮಾಳ್, ನಾಗಪ್ಪನ್ ನಾರಾಯಣಸ್ವಾಮಿ ಸೇರಿದ್ದರು. 1896ರಲ್ಲಿ ಮೊದಲ ಬಾರಿಗೆ 'ಮದ್ರಾಸ್ ಮಹಾಸಭಾ'ದಲ್ಲಿ ಭಾಗವಹಿಸಿದ್ದ ಗಾಂಧೀಜಿ ಖಾದಿ ಪ್ರಚಾರ, ಹರಿಜನ ಸುಧಾರಣೆಯ ಬಗ್ಗೆ ಮಾತನಾಡಿದ್ದರು. ನಂತರ ಇಪ್ಪತ್ತು ಸಲ ತಮಿಳುನಾಡು ಪ್ರವಾಸ ಮಾಡಿ, ಇನ್ನೂರಕ್ಕೂ ಹೆಚ್ಚು ಪ್ರದೇಶಗಳಿಗೆ ಭೇಟಿ ನೀಡಿದ್ದರು. 1915ರಲ್ಲಿ ಗಾಂಧೀಜಿ ಮದ್ರಾಸ್ಗೆ ರೈಲಿನಲ್ಲಿ ಬಂದಿಳಿದು ಕುದುರೆ ಸಾರೋಟಿನಲ್ಲಿ ಮೆರವಣಿಗೆ ಬರುತ್ತಿದ್ದಾಗ, ಅಸಂಖ್ಯಾತ ಅಭಿಮಾನಿಗಳು ಸಾರೋಟಿನಿಂದ ಕುದುರೆಯನ್ನು ಬಿಚ್ಚಿ ತಾವೇ ಸಾರೋಟು ಎಳೆಯುತ್ತಾ ಸಾಗಿದ್ದರು.

ದಕ್ಷಿಣ ಆಫ್ರಿಕಾದಲ್ಲಿದ್ದಾಗಲೇ ತಮಿಳು ಭಾಷೆಯ ಬಗ್ಗೆ ಒಲವು ಹೊಂದಿದ್ದ ಅವರು, ಜಿ.ಯು.ಪೋಪ್ ಅವರ 'ತಮಿಳ್ ಕೈಯೇಡು' ಕೃತಿಯಿಂದ ಆಕರ್ಷಿತರಾಗಿದ್ದರು. 1937ರಲ್ಲಿ ಮದ್ರಾಸ್ನಲ್ಲಿ ನಡೆದ 'ತಮಿಳು ಸಾಹಿತ್ಯ ಸಮ್ಮೇಳನ'ದಲ್ಲಿ ಭಾಗವಹಿಸಿದ್ದ ಗಾಂಧೀಜಿ, ಉ.ವೇ. ಸ್ವಾಮಿನಾಥನ್ ಅವರ

ಭಾಷಣವನ್ನು ಕೇಳಿ ಪ್ರಭಾವಿತರಾಗಿ, 'ಈ ಹಿರಿಯ ವಿದ್ವಾಂಸರ ಮಾರ್ಗದರ್ಶನದಲ್ಲಿ ತಮಿಳು ಭಾಷೆಯನ್ನು ಕಲಿಯುವ ಇಚ್ಛೆ ನನಗಿದೆ' ಎಂದಿದ್ದರು. 1916ರಲ್ಲಿ ಮದ್ರಾಸ್ನಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, 'ಮಾತೃಭಾಷಾ ಶಿಕ್ಷಣ ವ್ಯವಸ್ಥೆ ಜಾರಿಯಾಗದಿದ್ದರೆ, ಭಾರತ ಅಭಿವೃದ್ಧಿ ಹೊಂದುವುದಿಲ್ಲ. ನಾವು ಸ್ವಯಂ ಆಡಳಿತ ನಡೆಸಲು ಕಷ್ಟವಾಗುತ್ತದೆ' ಎಂದಿದ್ದರು. ತಮಿಳುನಾಡಿನಲ್ಲಿ ತಮಿಳು ಮಾತೃಭಾಷಾ ಶಿಕ್ಷಣ ವ್ಯವಸ್ಥೆ ಹೆಚ್ಚು ಗಟ್ಟಿಯಾಗಲು ಅವರ ಈ ಮಾತೇ ಪ್ರೇರಣೆಯಾಯಿತು.

1919ರಲ್ಲಿ ಬ್ರಿಟಿಷ್ ಸರ್ಕಾರ ಜಾರಿ ಮಾಡಿದ 'ರೌಲತ್ ಚಳವಳಿ' ವಿರುದ್ಧದ ಆಂದೋಲನದಲ್ಲಿ ಭಾಗವಹಿಸಲು ಮದ್ರಾಸ್ಗೆ ಬಂದಿದ್ದಾಗ ರಾಜಾಜಿ ಅವರ ಮನೆಯಲ್ಲಿ ಸಮಾಲೋಚನಾ ಸಭೆ ನಡೆದಿತ್ತು. ಹಲವು ವಿದ್ವಾಂಸರು, ಅಭಿಮಾನಿಗಳು ಭಾಗವಹಿಸಿದ್ದರು. 'ಮಾನ್ಯ ಗಾಂಧೀಜಿಯವರೇ, ಈ ಸಂಜೆ ಒಂದು ಸಾರ್ವಜನಿಕ ಸಭೆ ಏರ್ಪಡಿಸಲಾಗಿದೆ. ನೀವು ಅದರ ಅಧ್ಯಕ್ಷತೆ ವಹಿಸಿಕೊಳ್ಳಲು ಸಾಧ್ಯವೇ?' ಎಂದು ವ್ಯಕ್ತಿಯೊಬ್ಬರು ಕೇಳಿಕೊಂಡಿದ್ದರು. 'ನಿಗದಿತ ಕೆಲಸವಿದೆ. ನಾಳೆ ನಿಮ್ಮ ಸಭೆಯನ್ನು ಇಟ್ಟುಕೊಳ್ಳಬಹುದೇ?' ಎಂದು ಗಾಂಧೀಜಿ ಕೇಳಿದಾಗ, 'ಅದು ಸಾಧ್ಯವಿಲ್ಲ. ಯೋಜಿಸಿದಂತೆ ಸಭೆ ನಡೆಯಬೇಕಿದೆ. ತಾವು ಪ್ರಾರಂಭಿಸಿರುವ ಚಳವಳಿಯನ್ನು ನಾನು ಅಭಿನಂದಿಸುತ್ತೇನೆ' ಎಂದು ಹೇಳಿ ಹೊರಟು ಹೋಗಿದ್ದರು. ಅವರು ಹೋದ ನಂತರ ಕುತೂಹಲದಿಂದ ಗಾಂಧೀಜಿ, 'ಅವರು ಯಾರು' ಎಂದು ರಾಜಾಜಿ ಅವರನ್ನು ಕೇಳಿದಾಗ, 'ಅವರು ತಮಿಳುನಾಡಿನ ಕ್ರಾಂತಿಕಾರಿ ಕವಿ ಸುಬ್ರಹ್ಮಣ್ಯ ಭಾರತೀಯಾರ್' ಎಂದು ರಾಜಾಜಿ ಹೇಳಿದರು. 'ಹೌದಾ... ಇವರನ್ನು ತುಂಬ ಸುರಕ್ಷಿತವಾಗಿ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು' ಎಂದು ಗಾಂಧೀಜಿ ಹೇಳಿದ್ದರು. ಇದು ಭಿನ್ನಾಭಿಪ್ರಾಯಗಳ ನಡುವೆ ಕೂಡ ಮನುಷ್ಯಪರ ನಿಲುವಿನ ಬಗ್ಗೆ ಅವರಿಗಿದ್ದ ಕಾಳಜಿಗೆ ದ್ಯೋತಕ.

1921ರಲ್ಲಿ ಗಾಂಧೀಜಿ ಅವರು ತಮಿಳುನಾಡಿಗೆ ಬಂದಿದ್ದಾಗ, ಮದುರೆಗೆ ರೈಲಿನಲ್ಲಿ ಪ್ರಯಾಣಿಸಿದ್ದರು. ದಾರಿಯಲ್ಲಿ ಬಹುಪಾಲು ಜನಸಾಮಾನ್ಯರು ಸೊಂಟದಲ್ಲಿ ಒಂದು ತುಂಡು ಬಟ್ಟೆಯನ್ನು ಮಾತ್ರ ಧರಿಸಿ ದುಡಿಯುತ್ತಿದ್ದ ದೃಶ್ಯವನ್ನು ಕಂಡಿದ್ದರು. ಈ ಮುಂಚೆ ಉದ್ದವಾದ ಪಂಚೆ, ಮೇಲಂಗಿ, ತಲೆಗೆ ದೊಡ್ಡಪೇಟವನ್ನು ಧರಿಸುತ್ತಿದ್ದ ಗಾಂಧೀಜಿ, ನನ್ನ ದೇಶದ ಬಹುಸಂಖ್ಯಾತ ಜನಸಾಮಾನ್ಯರಿಗಿಲ್ಲದ ತುಂಬು ಬಟ್ಟೆ ನನಗೂ ಬೇಡ ಎಂದು ಅದನ್ನು ಕಳಚಿ, ಸೊಂಟಕ್ಕೆ ಒಂದು ಕಚ್ಚೆಪಂಚೆ, ಮೇಲೊಂದು ದುಪ್ಪಟಿಯನ್ನು ಹೊದ್ದುಕೊಳ್ಳುವ ಬಹುದೊಡ್ಡ ಚಾರಿತ್ರಿಕ ನಿರ್ಧಾರವನ್ನು ಮಾಡಿದರು. ಇಂದು ಪ್ರಪಂಚದಾದ್ಯಂತ ಪ್ರಸಿದ್ಧವಾಗಿರುವ ಗಾಂಧೀಜಿಯವರ ಈ ಸರಳ ಉಡುಪಿಗೆ ತಮಿಳುನಾಡಿನ ಜನಸಾಮಾನ್ಯರ ಬದುಕು ಪ್ರೇರಣೆ.

ವಿಶ್ವಪ್ರಸಿದ್ಧ ಮಧುರೆ ಮೀನಾಕ್ಷಿಯಮ್ಮನವರ ದೇವಾಲಯಕ್ಕೆ ಬರಲು ಅಭಿಮಾನಿಗಳು ಗಾಂಧೀಜಿಯನ್ನು ಕೋರಿದ್ದರು. ತಮಿಳುನಾಡಿನ ಪ್ರಸಿದ್ಧ ಕುಟ್ರಾಲ ಜಲಪಾತದಲ್ಲಿ ಮಿಂದು, ಅದರ ಪಕ್ಕ ಇರುವ ದೇವಸ್ಥಾನದಲ್ಲಿ ಪೂಜೆ ಮಾಡಲು ಅಭಿಮಾನಿಗಳು ಒತ್ತಾಯಿಸಿದ್ದರು. ಹರಿಜನ ಬಾಂಧವರಿಗೆ ಅಲ್ಲಿ ಪ್ರವೇಶವಿಲ್ಲವೆಂದು ಗೊತ್ತಾದಾಗ, ಅಲ್ಲಿಗೆ ಹೋಗಲು ನಿರಾಕರಿಸಿದ್ದರು. ಆದರೆ, ಸಾವಿರಾರು ಅಭಿಮಾನಿಗಳು ಹೋರಾಟ ಮಾಡಿ, ಗಾಂಧೀಜಿಯವರ ಇಚ್ಛೆಯಂತೆ ದೇವಾಲಯ ಪ್ರವೇಶಕ್ಕೆ ಹರಿಜನರಿಗೆ ಅವಕಾಶ ಕಲ್ಪಿಸಿದರು. ಆಗ ಗಾಂಧೀಜಿ ಹರಿಜನರೊಂದಿಗೆ ದೇವಾಲಯ ಪ್ರವೇಶಿಸಿ, ತಮಿಳುನಾಡಿನ ಜನರ ಹೋರಾಟದ ಮನೋಭಾವವನ್ನು ಪ್ರಶಂಸಿಸಿದ್ದರು.

ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮೈಸೂರು ಪ್ರಾಂತ್ಯ ಸೇರಿದಂತೆ ಕರ್ನಾಟಕದಲ್ಲಿ ಗಾಂಧೀಜಿ 1915ರಿಂದ 1937ರವರೆಗೆ ಹದಿನಾರು ಸಲ ಪ್ರವಾಸ ಮಾಡಿದ್ದರು. ಇನ್ನೂರಕ್ಕೂ ಹೆಚ್ಚು ಪ್ರದೇಶಗಳಿಗೆ ಭೇಟಿ ನೀಡಿದ್ದರು. 1915ರಲ್ಲಿ ಗೋಖಲೆಯವರ ಭಾವಚಿತ್ರವನ್ನು ಅನಾವರಣ ಮಾಡುವುದಕ್ಕಾಗಿ ಬೆಂಗಳೂರಿಗೆ ಬಂದಿದ್ದರು. 1927ರಲ್ಲಿ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ತಗಡೂರು, ಬದನವಾಳು ಖಾದಿ ನೂಲು ತಯಾರಿಕಾ ಕೇಂದ್ರಗಳನ್ನು ಸಂದರ್ಶಿಸಿದ್ದರು. ಅಲ್ಲಿ ಖಾದಿ ನೂಲುತ್ತಿದ್ದವರಲ್ಲಿ ಹರಿಜನ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದುದನ್ನು ಕಂಡು ಹಿಗ್ಗಿದ್ದರು.



ದಣಿವರಿಯದೆ ದೇಶವನ್ನು ಸುತ್ತುತ್ತಿದ್ದ ಗಾಂಧೀಜಿ, 1927ರಲ್ಲಿ ದಕ್ಷಿಣ ಭಾರತದ ಪ್ರವಾಸದಲ್ಲಿದ್ದಾಗ ಆರೋಗ್ಯ ಸಮಸ್ಯೆ ಎದುರಿಸಿದ್ದರು. ಗಾಂಧೀಜಿಯನ್ನು ಪರೀಕ್ಷಿಸಿದ ವೈದ್ಯರು ಪ್ರಶಾಂತ ಸ್ಥಳದಲ್ಲಿ ವಿಶ್ರಾಂತಿ ಪಡೆಯುವ ಅಗತ್ಯವಿದೆ ಎಂದು ತಿಳಿಸಿದ್ದರು. ರಾಜಾಜಿ ಹಾಗೂ ಗಂಗಾಧರರಾವ್ ದೇಶಪಾಂಡೆ ಅವರು ಕರ್ನಾಟಕದ ನಂದಿ ಗಿರಿಧಾಮವೇ ಸೂಕ್ತವೆಂದು ಸೂಚಿಸಿದ್ದರು. ಗಾಂಧೀಜಿ ಒಪ್ಪಿ 1927ರಲ್ಲಿ ನಲವತ್ತೈದು ದಿನ ನಂದಿಬೆಟ್ಟದಲ್ಲಿ ತಂಗಿದ್ದರು. ನಂತರ ಬೆಂಗಳೂರಿನ ಕುಮಾರ ಕೃಪಾದಲ್ಲಿ ಎಂಬತ್ತೇಳು ದಿನ, 1936ರಲ್ಲಿ ಎರಡನೆಯ ಬಾರಿ ನಂದಿ ಗಿರಿಧಾಮದಲ್ಲಿ ಇಪ್ಪತ್ತು ದಿನ ವಿಶ್ರಾಂತಿ ಪಡೆದಿದ್ದರು. ಮೈಸೂರು ಮಹಾರಾಜರ ಆಡಳಿತವು ಗಾಂಧೀಜಿ ಆತಿಥ್ಯವನ್ನು ತಮ್ಮ ಪುಣ್ಯದ ಕೆಲಸ ಎಂದು ಭಾವಿಸಿತ್ತು. ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ತುಂಬು ಆಸಕ್ತಿ ವಹಿಸಿದ್ದರು. ಆ ಅವಧಿಯಲ್ಲಿ ಗಾಂಧೀಜಿ ಪ್ರಭಾವಕ್ಕೆ ಒಳಗಾಗಿದ್ದ ಕರ್ನಾಟಕದ ಎಲ್ಲ ವರ್ಗದ, ಎಲ್ಲ ವಯೋಮಾನದ ಹಲವು ಸ್ತ್ರೀ ಪುರುಷರು ಇದೊಂದು ಸುವರ್ಣ ಅವಕಾಶ ಎಂದು ಭಾವಿಸಿ ಗಾಂಧೀಜಿಯವರನ್ನು ಭೇಟಿ ಮಾಡಿದ್ದರು. ಈ ಅಭಿಮಾನಿಗಳಲ್ಲಿ ಕೆಲವರಾದರೂ ತಮ್ಮ ವಿಲಾಸಿ ಜೀವನ ವ್ಯರ್ಥ ಎಂಬುದನ್ನು ಅರಿತು, ಸರಳ ಜೀವನಕ್ಕೆ ಪರಿವರ್ತಿತರಾದದ್ದು ಗಮನಾರ್ಹವಾದ ಸಂಗತಿ.

ಕರ್ನಾಟಕದ ಕೆಲವರು ಸಾಬರಮತಿ ಆಶ್ರಮ ಸೇರಲು ಬಯಸಿದ್ದರು. 'ನಾನು ನಿಮ್ಮೂರಿಗೆ ಬಂದು ಹರಿಜನ ಕೇರಿಯನ್ನು ಸ್ವಚ್ಛ ಮಾಡಿದ ಕೆಲಸಕ್ಕೆ ಪ್ರಾಮಾಣಿಕವಾಗಿ ಸ್ಪಂದಿಸಿದವರು ಮಾತ್ರ ನಮ್ಮ ಆಶ್ರಮಕ್ಕೆ ಬರಬಹುದು' ಎಂದು ಗಾಂಧೀಜಿ

ಹೇಳಿದ್ದರು. ಕರ್ನಾಟಕದ ವೀರಮ್ಮ ಯರೇಸೀಮೆ, ಕರಿಯಪ್ಪ ಯರೇಸೀಮೆ ದಲಿತ ದಂಪತಿ ಸಾಬರಮತಿ ಆಶ್ರಮದಲ್ಲಿ ಗಾಂಧೀಜಿಯವರ ಪ್ರೀತಿಪಾತ್ರರಾಗಿದ್ದರು. '1936ರಿಂದ 1941ನೇ ಇಸವಿಯವರೆಗೆ ಅವರ ಮಗಳಂತೆ ಇದ್ದೆನು. ಆಗ ನನ್ನ ಕೂಡ ಎಷ್ಟು ಪ್ರೇಮದಿಂದ ಇರುತ್ತಿದ್ದರೊ ದೇವರೇ ಬಲ್ಲ. ದಿನಾಲು ನನ್ನನ್ನು ನೋಡದ ವಿನಾ ಅವರಿಗೆ ಸಮಾಧಾನವಾಗುತ್ತಿದ್ದಿಲ್ಲ. ನನಗೆ ಹಿಂದಿ ಬರುತ್ತಿದ್ದಿಲ್ಲ. ತಾವೇ ರಾತ್ರಿ 9 ಗಂಟೆಗೆ ಹಿಂದಿ ಹೇಳಿಕೊಡುತ್ತಿದ್ದರು. ನನ್ನಿಂದ ಅವರು ಕನ್ನಡ ಕಲಿಯುತ್ತಿದ್ದರು' ಎಂಬ ವೀರಮ್ಮ ಅವರ ಮಾತುಗಳು ಗಾಂಧೀಜಿಯವರ ಅಂತಃಕರಣಕ್ಕೆ ಸಾಕ್ಷಿ.

ವೀರಮ್ಮ ಅವರಿಂದ ಅಲ್ಪಸ್ವಲ್ಪ ಕನ್ನಡ ಕಲಿತ ಗಾಂಧೀಜಿ ತಮ್ಮ ಆಪ್ತರಾಗಿದ್ದ ಗಂಗಾಧರರಾವ್ ಅವರಿಂದ ಇನ್ನಷ್ಟು ಕನ್ನಡ ಕಲಿತು 'ಮೋ.ಕ. ಗಾಂಧಿ' ಎಂಬ ಚಂದದ ಅಕ್ಷರದ ಕನ್ನಡ ಸಹಿಯನ್ನು ಕಲಿತಿದ್ದು, ಕನ್ನಡಿಗರ ಮೇಲೆ ಅವರಿಗೆ ಇದ್ದ ಪ್ರೀತಿಗೆ ಸಾಕ್ಷಿಯಂತಿದೆ.

ರಾಜಾಜಿಯವರ ಮಗಳು ಲಕ್ಷ್ಮಿಯು ನಂದಿಬೆಟ್ಟದಲ್ಲಿ ಗಾಂಧೀಜಿಯವರ ಸೇವೆ ಮಾಡುತ್ತಿದ್ದಾಗ, ಅಲ್ಲೇ ಇದ್ದ ಗಾಂಧೀಜಿಯವರ ಮಗ ದೇವದಾಸ್ ಗಾಂಧಿಯನ್ನು ಪ್ರೀತಿಸಿದ್ದರು. ಗಾಂಧೀಜಿಯವರಿಗೆ ವಿಷಯ ಗೊತ್ತಾಗಿ ರಾಜಾಜಿಯವರೊಂದಿಗೆ ಮಾತನಾಡಿ 1933ರಲ್ಲಿ ಸರಳವಾಗಿ ಮದುವೆ ಮಾಡಿಸಿದ್ದರು.

ಅಸ್ಪೃಶ್ಯತೆ ನಿವಾರಣೆಯ ಕೆಲಸಗಳು ದೇಶದಾದ್ಯಂತ ಎಲ್ಲಿ ನಡೆದಿದ್ದರೂ ಗಾಂಧೀಜಿ ಅಲ್ಲಿಗೆ ಧಾವಿಸಿ ಪ್ರೇರೇಪಿತರಾಗುತ್ತಿದ್ದರು. ಕುದ್ಮುಲ್ ರಂಗರಾವ್ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ಪಿಡುಗಿನ ವಿರುದ್ಧ ಹೋರಾಡಿ, ದಲಿತರ ಪಾಲಿಗೆ ಆಶಾಕಿರಣವಾಗಿದ್ದವರು. ತಮಗಿಂತ ಹತ್ತು ವರ್ಷ ದೊಡ್ಡವರಾಗಿದ್ದ ರಂಗರಾವ್ ಅವರ ಈ ಕೆಲಸಗಳಿಂದ ಪ್ರಭಾವಿತರಾಗಿದ್ದ ಗಾಂಧೀಜಿ, 1934ರ ಫೆಬ್ರುವರಿಯಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದರು. ರಂಗರಾವ್ ಅವರ ಡಿಸಿಎಂ ಸಂಸ್ಥೆ ಹಾಗೂ ಅವರ ಸಮಾಧಿಗೆ ಭೇಟಿ ನೀಡಿದ್ದರು. 'ರಂಗರಾವ್ ಅವರ ರಚನಾತ್ಮಕ ಮಾನವೀಯ ಸೇವಾ ಕಾರ್ಯಗಳಿಂದ ನಾನು ಕೆಲವು ವಿಚಾರಗಳನ್ನು ಅರಿತುಕೊಂಡೆ. ಅಸ್ಪೃಶ್ಯತಾ ನಿವಾರಣೆ ಕಾರ್ಯದಲ್ಲಿ ಅವರು ನಿಜವಾಗಿಯೂ ನನ್ನ ಗುರುಗಳು' ಎಂದು ಅಂದಿನ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದ್ದರು.

ರಾಷ್ಟ್ರಕವಿ ಎಂ.ಗೋವಿಂದ ಪೈ ಅವರು ತಮ್ಮ ಹಿರಿಯರು ಉಪಯೋಗಿಸುತ್ತಿದ್ದ ಊರುಗೋಲನ್ನು ಸ್ವಾತಂತ್ರ್ಯ ಚಳವಳಿಯಲ್ಲಿದ್ದ ಕಾಲೇಲ್ಕರ್ ಅವರಿಗೆ ಕಾಣಿಕೆಯಾಗಿ ನೀಡಿದ್ದರು. ಕಾಲೇಲ್ಕರ್ ಅವರು ಗಾಂಧೀಜಿ ನಡೆಸಿದ ದಂಡಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಾಗ, ಈ ಊರುಗೋಲನ್ನು ಗಾಂಧೀಜಿಗೆ ನೀಡಿದ್ದರು. ಐತಿಹಾಸಿಕ ದಂಡಿ ಸತ್ಯಾಗ್ರಹದಲ್ಲಿ ಗಾಂಧೀಜಿ ಹಿಡಿದು ಊರಿಕೊಂಡು ಹೋದ ಊರುಗೋಲು ಕನ್ನಡನಾಡಿನ ಗೋವಿಂದ ಪೈ ಅವರ ಮನೆತನದ ಪರಂಪರೆಯದು ಎಂಬುದು ದಕ್ಷಿಣ ಭಾರತದ ಕನ್ನಡಿಗರಿಗೆ ಬಹುಹೆಮ್ಮೆಯ ಸಂಗತಿ.

ಹೀಗೆ ತಮ್ಮ ಬಹು ತಿಳಿವಳಿಕೆ, ಗಾಢವಾದ ಅನುಭವ, ಅಗಾಧವಾದ ಮಾನವ ಪ್ರೀತಿ, ತೀಕ್ಷ್ಣವಾದ ಚಿಂತನೆಗಳಿಂದ ನೈತಿಕ ಮೌಲ್ಯಗಳ ಬೀಜವನ್ನು ಬಿತ್ತುತ್ತ ಅಹಿಂಸೆ–ಸತ್ಯಾಗ್ರಹದಂತಹ ಮಹತ್ವದ ಶಕ್ತಿಗಳನ್ನು ಪ್ರಪಂಚಕ್ಕೆ ತೋರಿಸಿದ ಮಹಾನ್ ಶಕ್ತಿ ಗಾಂಧೀಜಿ. ಇಂತಹ ಶಕ್ತಿಯು ದಕ್ಷಿಣ ಭಾರತದ ಮೇಲೆ ತನ್ನ ಗಾಢವಾದ ಪ್ರಭಾವವನ್ನು ಬೀರಿರುವುದು ಅವಿನಾಭಾವ ಸಂಬಂಧದ ದ್ಯೋತಕವೇ ಆಗಿದೆ.

ಕೇರಳ, ಆಂಧ್ರ ಪ್ರದೇಶದಲ್ಲಿ ಹೆಜ್ಜೆಗುರುತು...

ಶ್ರೇಣೀಕೃತ ಜಾತಿವ್ಯವಸ್ಥೆಯ ಭೀಕರ ಸ್ಥಿತಿಯಲ್ಲಿದ್ದ ಕೇರಳ ರಾಜ್ಯಕ್ಕೆ ಗಾಂಧೀಜಿ ಐದು ಸಲ ಪ್ರವಾಸ ಮಾಡಿದ್ದರು. ಅಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಕ್ರಾಂತಿಯನ್ನೇ ಮಾಡಿದ ನಾರಾಯಣಗುರುಗಳ ಸಮಾಜ ಸುಧಾರಣೆಯ ಅರಿವು ಗಾಂಧೀಜಿ ಅವರಿಗಿತ್ತು. ತಮಗಿಂತ ಸುಮಾರು ಹದಿನೈದು ವರ್ಷ ಹಿರಿಯರಾಗಿದ್ದ ನಾರಾಯಣ ಗುರುಗಳಿಂದ ಪ್ರಭಾವಿತರಾಗಿದ್ದ ಗಾಂಧೀಜಿ, 1925ರ ಮಾರ್ಚ್‌ನಲ್ಲಿ ತಿರುವನಂತಪುರದ ವರ್ಕಲದ ಬ್ರಹ್ಮಗಿರಿಮಠಕ್ಕೆ ಬಂದು ನಾರಾಯಣ ಗುರುಗಳ ದರ್ಶನ ಪಡೆದಿದ್ದರು. ಹೀಗೆ ದಕ್ಷಿಣ ಭಾರತದ ಮಾನವೀಯ ಶಕ್ತಿಗಳಿಂದಲೂ ಗಾಂಧೀಜಿ ಪ್ರಭಾವಿತರಾಗಿದ್ದುದು ವಿಶೇಷ. ಕೇರಳದ ಗಾಂಧಿ ಎಂದೇ ಹೆಸರಾಗಿರುವ ಕೆ.ಕೇಳಪ್ಪನ್ ಅವರ ನೇತೃತ್ವದಲ್ಲಿ ಗುರುವಾಯೂರು ಶ್ರೀಕೃಷ್ಣ ದೇವಾಲಯಕ್ಕೆ ಕೆಳವರ್ಗದವರ ಪ್ರವೇಶಕ್ಕಾಗಿ ನಡೆಯುತ್ತಿದ್ದ ಹೋರಾಟವನ್ನು ಗಾಂಧೀಜಿ ಬೆಂಬಲಿಸಿದ್ದರು.

ಅವಿಭಜಿತ ಆಂಧ್ರಪ್ರದೇಶಕ್ಕೆ ಗಾಂಧೀಜಿ ಹತ್ತಕ್ಕೂ ಹೆಚ್ಚು ಸಲ ಪ್ರವಾಸ ಮಾಡಿದ್ದರು. 1920ರಲ್ಲಿ ತಿರುಪತಿಗೆ ಭೇಟಿ ನೀಡಿದ್ದ ಗಾಂಧೀಜಿ ತಮ್ಮನ್ನು ಒಯ್ಯಲು ತಂದಿದ್ದ ಡೋಲಿಯನ್ನು ನಿರಾಕರಿಸಿದ್ದರು. ಹರಿಜನ ಬಂಧುಗಳೊಟ್ಟಿಗೆ ಸಾಗುವುದು ನನಗೆ ಸಂತಸದ ಕೆಲಸ ಎಂದು ಹೇಳಿ ತಮ್ಮ ಸಹಜ ನಡವಳಿಕೆಯಿಂದ ಸವರ್ಣೀಯರ ಮನಃ ಪರಿವರ್ತನೆಯ ಕೆಲಸ ಮಾಡಿದ್ದರು. ಇಷ್ಟಾಗಿಯೂ ಗಾಂಧೀಜಿಯವರ ಜೊತೆಗಿದ್ದ ಹರಿಜನರಿಗೆ ತಿರುಪತಿಯ ತಿರುಮಲ ವೆಂಕಟೇಶ್ವರಸ್ವಾಮಿ ದೇವಸ್ಥಾನಕ್ಕೆ ಪ್ರವೇಶ ನೀಡಲು ಅಲ್ಲಿನ ವ್ಯವಸ್ಥೆ ನಿರಾಕರಿಸಿತ್ತು. ಆಗ ಗಾಂಧೀಜಿ ಅಹಿಂಸಾತ್ಮಕ ಹೋರಾಟದ ಮೂಲಕ ಅಲ್ಲಿನ ವ್ಯವಸ್ಥೆಯ ಮನಃಪರಿವರ್ತಿಸುವಲ್ಲಿ ಯಶಸ್ವಿಯಾದರು. ಹೀಗೆ ಅಸ್ಪೃಶ್ಯರಾಗಿದ್ದವರಿಗೆ ತಿರುಪತಿ ದೇವಸ್ಥಾನದ ಪ್ರವೇಶ ದೊರಕಿದ್ದು ಭಾರತದಲ್ಲಿಯೇ ಚಾರಿತ್ರಿಕವಾದ ಸಂಗತಿಯಾಗಿದೆ.

ನಿಜಾಮರ ಆಡಳಿತದ ಅಂಕುಶದಲ್ಲಿದ್ದ ಹೈದರಾಬಾದ್ ಜನತೆಯು, ಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯ ಪ್ರಭಾವಕ್ಕೆ ಒಳಗಾಗಿ ಧೈರ್ಯದಿಂದ ಸಂಘಟಿತವಾಗಲು ಮುಂದಾಯಿತು. ನಿಜಾಮರ ಆಡಳಿತದಲ್ಲಿ ಉರ್ದುಮಯವಾಗಿದ್ದ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಳೀಯರು ಮಾತೃಭಾಷೆಯ ಶಿಕ್ಷಣದಿಂದ ವಂಚಿತರಾಗಬೇಕಾದ ಸ್ಥಿತಿ ಇತ್ತು. ಗಾಂಧೀಜಿಯವರ ಚಳವಳಿಯಿಂದ ಪ್ರೇರಣೆಗೊಂಡ ವಾಮನ್ ನಾಯಕ, ಮಾಡಪಾಟಿ ಹನುಮಂತರಾವ್, ಮುಂದಮುಲ ನರಸಿಂಗರಾವ್ ಮುಂತಾದವರು ಸೇರಿ 'ವಿವೇಕವರ್ಧಿನಿ ಶಿಕ್ಷಣ ಸಂಸ್ಥೆ'ಯನ್ನು ತೆರೆದರು. ಈ ಸಂಸ್ಥೆಯು ಹಲವು ಬಗೆಯ ಬದಲಾವಣೆಗಳಿಗೆ ದಾರಿ ಮಾಡಿಕೊಟ್ಟಿತು.

– ಎಂ. ಎಸ್ ಶೇಖರ್..

(ಪ್ರಜಾವಾಣಿ – 27. 09. 2020)

ಪುಸ್ತಕ ಪರಿಚಯ

ಎಲ್ಲರ ಗಾಂಧೀಜಿ



ಮಹಾತ್ಮ ಗಾಂಧಿಯವರ ಪಾರದರ್ಶಕ ವ್ಯಕ್ತಿತ್ವ ಮತ್ತು ಚಿಂತನೆಯ ಅಪೂರ್ವ ಹೊಳಹುಗಳನ್ನು ಕಾಣಿಸುವ ನೂರ ಇಪ್ಪತ್ತು ನಾಲ್ಕು ಮಾತು– ಬರಹಗಳು ಹಾಗೂ ನೂರಕ್ಕೂ ಹೆಚ್ಚು ಗಾಂಧಿ ನುಡಿಗಳನ್ನು ಒಳಗೊಂಡ "ಎಲ್ಲರ ಗಾಂಧೀಜಿ" ಸಂಕಲನವನ್ನು ಎಲ್ಲರ ಕೈಗೆ ಒಪ್ಪಿಸುತ್ತಿರುವೆ. ಈ ಬರಹಗಳನ್ನು ಮುಕ್ತ ಮನಸ್ಸಿನಿಂದ ಓದುವ ಎಲ್ಲರ ಪ್ರಜ್ಞೆ ಹಾಗೂ ಮನಸ್ಸಿನೊಳಗೆ ಗಾಂಧಿ ಚಿಂತನೆಗಳು ನಿಧಾನಕ್ಕೆ ಇಳಿಯಬಲ್ಲವು. ಗಾಂಧೀಜಿಯ ಬಗ್ಗೆ ಇರುವ ಅನಗತ್ಯ ಪೂರ್ವಗ್ರಹಗಳುಚದುರಿ ಹೋಗ ಬಲ್ಲವು. ಯಾಕೆಂದರೆ ಅಂತಿಮವಾಗಿ ಗಾಂಧೀಜಿ ಮಾತಾಡುತ್ತಿರುವುದು ನಮ್ಮೊಳಗಿನ 'ಮನುಷ್ಯ' ನನ್ನು ಉದ್ದೇಶಿಸಿ. ಇಂಗ್ಲಿಷ್, ಗುಜರಾತಿ ಹಿಂದಿಯಲ್ಲಿರುವ ಮಾತು ಬರಹಗಳ ಪಾರದರ್ಶಕ ಭಾಷೆ ಮಕ್ಕಳಿಗೂ ಅರ್ಥವಾಗುವಷ್ಟು ಸರಳವಾಗಿದೆ.

ಮಾನವರೊಳಗೆ ಹುದುಗಿರುವ ಒಳಿತನ್ನು ಹೊರತರುವ ಹಾದಿಯಲ್ಲಿ ವಿಕಾಸಗೊಂಡ ಗಾಂಧಿ ನೋಟಗಳ ಆತ್ಮೀಯತೆ, ಮಾರ್ದವತೆ, ಸತ್ಯಗಳು ಈ ಪುಸ್ತಕದ ಪುಟ್ ಪುಟಗಳಲ್ಲೂ ನಮ್ಮನ್ನು ತಟ್ಟುತ್ತವೆ. ನ್ಯಾಯ ಮತ್ತು ಸಾಮಾಜಿಕ ನ್ಯಾಯ, ನೈತಿಕ ಬರವಣಿಗೆ, ಚಳವಳಿ, ಸತ್ಯಾಗ್ರಹ, ಸತ್ಯ ಶೋಧನೆ, ತತ್ವಜ್ಞಾನ, ನಿರ್ಭಯತೆ ಮುಂತಾದ ಹಲವು ಅಯಾಯಮಗಳು ಬೆರೆತು ಹುಟ್ಟಿದ ಗಾಂಧಿ ಚಿಂತನೆಗಳು ಒಂದು ನಾಡಿನ ಹಾಗೂ ಮನುಷ್ಯನ ಆರೋಗ್ಯಕರ ದೇಹ ಮನಸ್ಸುಗಳಿಗೆ ಬೇಕಾದದ್ದನ್ನೆಲ್ಲ ಹುಡುಕುತ್ತವೆ.

ಈ ಪ್ರತಿ ಬರಹದಲ್ಲೂ ಒಂದಲ್ಲ ಒಂದು ವಿಶಿಷ್ಟ ಒಳನೋಟ, ಚಿಂತನೆಗಳು ನಿಮ್ಮ ವ್ಯಕ್ತಿತ್ವದಲ್ಲಿ ಬೆರೆಯುತ್ತವೆ. ನೀವು ಒಳ್ಳೆಯ ಲೇಖಕ ಅಥವಾ ಲೇಖಕಿ ಆಗ ಬೇಕೆಂದರೆ ಗಾಂಧಿ ಬರವಣಿಗೆಯ ನೆರಗುಣ , ಸ್ಪಷ್ಟತೆ , ಪ್ರಾಮಾಣಿಕತೆಗಳು ನಿಮಗೆ ನಿಜಕ್ಕೂ ದಾರಿದೀಪವಾಗಬಲ್ಲವು .

'ಗಾಂಧೀಜಿಯನ್ನು ಬಣ್ಣಿಸುವುದೆಂದರೆ ಹಿಮಾಲಯವನ್ನು ಬಣ್ಣಿಸಲು ಪ್ರಯತ್ನಿಸಿದಂತೆ' ಎಂಬ ಬರ್ನಾರ್ಡ್ ಶಾ ಅವರ ಮಾತು ಗಾಂಧೀಜಿಯನ್ನು ಬಣ್ಣಿಸುವ ಸವಾಲಿನ ಜೊತೆಗೇ ಅವರ ವ್ಯಕ್ತಿತ್ವದ ಸಂಕೀರ್ಣತೆ, ಅಗಾಧತೆಯನ್ನು ಹೇಳುತ್ತದೆ. ಗಾಂಧೀಜಿಯನ್ನು ಬಣ್ಣಿಸಲು ಹೊರಟರೆ ಅವರ ವ್ಯಕ್ತಿತ್ವದ ಹಲವಾರು ಮುಖಗಳು ಕಾಣತೊಡಗುತ್ತವೆ. ಬಾಲ್ಯದಲ್ಲೂ ಹರಿಶ್ಚಂದ್ರ, ಶ್ರವಣಕುಮಾರನ ಕತೆಗೆ ಮಿಡಿದು ಕಣ್ಣೀರಿಟ್ಟ ಮುಗ್ಧ ಮನಸ್ಸನ್ನು ಕೊನೆತನಕ ಉಳಿಸಿಕೊಂಡ ಮಗು. ಕಾನೂನು ಕಲಿತು, ಸ್ಪಷ್ಟವಾಗಿ ಯೋಚಿಸುವ, ನ್ಯಾಯಯುತ ಹೋರಾಟವನ್ನು ತರ್ಕಬದ್ಧವಾಗಿ ಕಟ್ಟುವ, ನ್ಯಾಯ – ನೈತಿಕತೆಗಳನ್ನು ಬೆಸೆದ ನ್ಯಾಯವಾದಿ. ನೈತಿಕತೆ – ಸತ್ಯ ಎರಡನ್ನೂ ಬೆಸೆದ ಪತ್ರಕರ್ತ. ಸತ್ಯಾಗ್ರಹವನ್ನು ಹೋರಾಟ ತತ್ವವನ್ನಾಗಿ ಮಾಡಿದ ತತ್ವಜ್ಞಾನಿ. ಅಹಿಂಸೆಯನ್ನು ದೈನಂದಿನ ತತ್ವವಾಗಿ, ಸಂಘಟಿತ ಜನತಾ ಹೋರಾಟದ ಪ್ರಬಲ ಅಸ್ತ್ರವನ್ನಾಗಿ ರೂಪಿಸಿ ಕೊಟ್ಟ ಮೊದಲ ಲೋಕನಾಯಕ. ಹಿಡಿ ಉಪ್ಪು ತಯಾರಿಸಿ ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಸವಾಲೆಸೆದ ನಿರ್ಭೀತ ಚಳವಳಿಗಾರ. ಉಪ್ಪು ಚರಕದಂಥ ಪರಿಚಿತ ವಸ್ತುಗಳಿಗೆ ವ್ಯಾಪಕಾರ್ಥ ಕೊಟ್ಟ ಕವಿ. 'ಸ್ವರಾಜ್ಯ'ವು ಒಂದು ದೇಶ ತನ್ನನ್ನು ತಾನು ಆಳಿಕೊಳ್ಳುವ ತತ್ವವಷ್ಟೇ ಅಲ್ಲ, ಅದು ಮನುಷ್ಯ ತನ್ನನ್ನು ತಾನು ಆಳಿಕೊಳ್ಳುವ ತತ್ವ ಕೂಡ ಎಂಬ ವ್ಯಾಖ್ಯಾನ ಕೊಟ್ಟ ಸೂಕ್ಷ್ಮ ಚಿಂತಕ

ದೈಹಿಕ ದುಡಿಮೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿ, ಚರಕ, ಖಾದಿಗಳನ್ನು ಗ್ರಾಮದ ಸ್ವಾವಲಂಬನೆಯ ಸಹಜ ಸಾಧನಗಳನ್ನಾಗಿ ಮಾಡಿದ ಗ್ರಾಮಕೇಂದ್ರಿತ ಅರ್ಥಶಾಸ್ತ್ರಜ್ಞ. ಜಗತ್ತಿನ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ದೇಶದ ಸ್ವಾತಂತ್ರ್ಯ ಹೋರಾಟವನ್ನು ಒಂದು ಕೋಳಿತ ಸಮಾಜದ ಪರಿವರ್ತನೆಯ ಹೊರಟವನ್ನಾಗಿ ಪರಿವರ್ತಿಸಿದ ಸಾಮಾಜಿಕ ನಾಯಕ. ಅಸ್ಪೃಶ್ಯತೆಯ ವಿರುದ್ಧ ನಿರಂತರ ಹೋರಾಟ ಮಾಡಿದ ಸಮಾಜ ಸುಧಾರಕ. ಜಗತ್ತಿನ ಎಲ್ಲ ಧರ್ಮಗಳ ಒಳತಿರುಳನ್ನು ಬೆಸೆದು ಮಾನವೀಯ ಹಿಂದೂ ಧರ್ಮವನ್ನು ರೂಪಿಸಲು ಹೊರಟ ಧಾರ್ಮಿಕ ಚಿಂತಕ. ಆಧುನಿಕತೆ ಆಧುನಿಕ ನಾಗರೀಕತೆ ಹಾಗೂ ಪಶ್ಚಿಮ ರೂಪಿಸಿಕೊಂಡ ದಮನದ ಅಸ್ತ್ರಗಳನ್ನು ಜಗತ್ತಿಗೆ ತೋರಿಸಿದ ಸಂಸ್ಕೃತಿ ವಿಮರ್ಶಕ. ಆಧುನಿಕ ಗುಜರಾತಿ ಗದ್ಯದ ಪ್ರವರ್ತಕ; ಗುಜರಾತಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರಂತರವಾಗಿ ಬರೆದು ಸಾವಿರಾರು ಪುಟಗಳ ಸರಳ ನೇರ ಬರವಣಿಗೆ ಮಾಡಿ ಕೋಟಿಗಟ್ಟಲೆ ಓದುಗರನ್ನು ತಲುಪಿದ ಹಾಗೂ ತಲುಪುತ್ತಲೇ ಇರುವ ಲೇಖಕ

ತನ್ನ ಬದುಕು ಹಾಗು ಚಿಂತನೆಗಳಲ್ಲಿ ನುಸುಳಿದ ಹಲಬಗೆಯ ವೈರುಧ್ಯಗಳನ್ನು ಪರೀಕ್ಷೆಗೆ ಒಳಪಡಿಸಿಕೊಂಡ ಸ್ವ–ಪರೀಕ್ಷಕ. ಈ ದೇಶದ ಮೂಲ ಖಾಯಿಲೆಗಳಾದ ಅಸ್ಪೃಶ್ಯತೆ , ಅಸಮಾನತೆ , ಮೂಲಭೂತವಾದ , ಕೋಮುವಾದಗಳನ್ನು ಗುಣಪಡಿಸಲು ಸದಾ ಶ್ರಮಿಸಿದ ಡಾಕ್ಟರು. ದೇಹ ಕುರಿತು ಆಳವಾಗಿ ಕ್ಷಾತ್ರಿಸಿ ಪ್ರಯೋಗಗಳನ್ನು ಮಾಡಿದ ಪ್ರಯೋಗಶೀಲ. ಮೊದಲ ಘಟ್ಟದ ಮುಖ್ಯ ನಿರ್ವಸಾಹತೀಕರಣ ತಾತ್ವಿಕ. ಎದುರಾಳಿಯೆದುರು ದಿಟ್ಟವಾಗಿ ನಿಲ್ಲ ಬಲ್ಲ ನಿರ್ಭೀತ ; ಕುವೆಂಪು ಬಣ್ಣಿಸಿದಂತೆ, 'ಕ್ರಿಸ್ತ ಬುದ್ಧರ ಮೈತ್ರಿಯಂ ಸಾಧಿಸುತ ವಿಶ್ವ ನಾಯಕರ ಪಂಕ್ತಿಯಲಿ ನಿಂತ' ; 'ಯಂತ್ರ ನಾಗರಿಕತೆಯ ರಾಜಕೀಯ ಕುಟಿಲ ತಂತ್ರಕಾಧ್ಯಾತ್ಮವನು 'ತಂದ ಅನನ್ಯ ಸಂತ .. ಹೀಗೆ ಗಾಂಧಿ ವ್ಯಕ್ತಿತ್ವ, ಚಿಂತನೆ, ಕ್ರಿಯೆ, ಪ್ರಭಾವಗಳನ್ನು ಬಣ್ಣಿಸುತ್ತಲೇ ಹೋಗಬಹುದು. 'ತಮ್ಮ ಜೀವನದ ಎರಡು ಘಟ್ಟಗಳಲ್ಲಿ ಮಾತ್ರ ಪೂರ್ಣ ಪ್ರಮಾಣದಲ್ಲಿ ಬೀದಿಗಿಳಿದಿದ್ದ ಗಾಂಧೀಜಿ ಉಳಿದಂತೆ ಬಹುತೇಕ ವರ್ಷಗಳನ್ನು ಚಿಂತನೆ ಹಾಗೂ ಬರಹಗಳಲ್ಲಿ ಕಳೆದಿದ್ದರು' ಎಂದು ಶ್ರೀಲಂಕಾದ ಗಾಂಧಿವಾದಿ ಟಿ ಕೆ ಮಹದೇವನ್ ಬರೆಯುತ್ತಾರೆ. ಸತ್ಯದೊಂದಿಗೆ ಸದಾ ಪ್ರಯೋಗ ಮಾಡಿ ಒಳ್ಳೆಯದನ್ನೇ ಹುಡುಕಿದ, ಗಂಧ್ ಅಭಿವ್ಯಕ್ತಿಯ ಸಾವಿರಾರು ಪುಟಗಳಲ್ಲಿ ಇಂದಿಗೆ ಅಗತ್ಯವಾದ ಅರ್ಥಪೂರ್ಯ್ಯನ್ರ್ಣ ವೈವಿಧ್ಯಮಯ ಬರಹಗಳು, ಬರಹಗಳ ಸಂಗ್ರಹ ರೂಪಗಳು ಇಲ್ಲಿವೆ. ಇವತ್ತು ಕೊಂಚ ಅಸಂಗತ ಎನ್ನಬಹುದಾದ ಗಾಂಧಿ ಚಿಂತನೆಗಳನ್ನು ಕೈ ಬಿಟ್ಟು ಈ ಕಾಲಕ್ಕೆ ಅಗತ್ಯವಾದ ಚಿಂತನೆಗಳನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ. ಗಾಂಧೀಜಿ ಯಾವುದೋ ಕಾಲದ ಸವಕಲು ಚಿಂತಕರಲ್ಲ. ಎಲ್ಲ ಕಾಲಕ್ಕೂ ಬೇಕಾದ ಮಹತ್ವದ ಚಿಂತಕರು ಎಂಬುದನ್ನು ಮನದಟ್ಟು ಮಾಡುವ ಈ ಬರಹಗಳು ಓದುಗರೊಡನೆ ನೇರವಾಗಿ ಮಾತಾಡುತ್ತವೆ..

('ಎಲ್ಲರ ಗಾಂಧೀಜಿ' ಕೃತಿಯ ಸಂಪಾದಕ ನಟರಾಜ್ ಹುಳಿಯಾರ್ ಅವರ ಮುನ್ನುಡಿಯ ಮಾತುಗಳು)



ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಗಾಂಧೀಜಿಯ ಪ್ರಭಾವ

ತೊಂಬತ್ತರ ದಶಕ. ಜಾಗತೀಕರಣದ ಉದಾರ ನೀತಿಗಳನ್ನು ಭಾರತ ಆಗಷ್ಟೇ ಪ್ರಕಟಿಸಿತ್ತು. ನೆಹರೂ ಕನಸಿನ **"ಸಾರ್ವಜನಿಕ ಉದ್ದಿಮೆಗಳು ಆಧುನಿಕ ಭಾರತದ ದೇವಾಲಯಗಳು"** (public sectors are temples of modern India) ಎನ್ನುವ ಘೋಷಣೆ ಅವಸಾನದ ಸ್ಥಿತಿ ತಲುಪಿತ್ತು. ಇದರ ಘೋರಿಯ ಮೇಲೆ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಮೊಳಕೆಯೊಡೆಯಲು ಜಾಗತೀಕರಣ ಅನುವು ಮಾಡಿಕೊಟ್ಟಿತ್ತು. ಆಗ ಜಗತ್ತಿನೆಲ್ಲೆಡೆ ಭಾರತದ ಬಗ್ಗೆ ಪ್ರತಿರೋಧ,ತಿರಸ್ಕಾರಗಳಿದ್ದವು. ಅದು ಎಷ್ಟೋ ಬಾರಿ ಅವಹೇಳನದ ರೂಪದಲ್ಲಿ ಬಂದಿದ್ದು ಉಂಟು. ಒಮ್ಮೆ ಈ ಕೆಲಸಗಳು ಭಾರತಕ್ಕೆ ಹೋದರೆ ಮತ್ತೆ ಅಲ್ಲಿಂದ ವಾಪಸ್ ತೆಗೆದುಕೊಳ್ಳಲಾಗುವುದಿಲ್ಲ ಎಂಬ ಕಾರಣಕ್ಕೆ – ಪ್ರತಿರೋಧ . ಇದರ ಜೊತೆಗೆ ಎಲ್ಲವೂ ಭಾರತಕ್ಕೆ ಹೋಗುವ ಪ್ರಕ್ರಿಯೆ ಆರಂಭವಾಗುತ್ತದೆ ಎನ್ನುವ (it's only beginning of everything moving to India) ಅಸುರಕ್ಷತೆಯ ಭಯ . ತಮ್ಮ ಕೆಲಸಗಳನ್ನು ಭಾರತದ ಪ್ರತಿಭಾನ್ವಿತ ಎಂಜಿನಿಯರುಗಳಿಂದ ಉಳಿಸಿಕೊಳ್ಳಲು ಆಗದ ಹತಾಶೆಗೆ – ಅವಹೇಳನ. ಇದಕ್ಕೆ ತಕ್ಕಂತೆ ಆಯಾ ದೇಶದ ನೀತಿಗಳು ಸಹ ಮಾಹಿತಿ ತಂತ್ರಜ್ಞಾನದ ಎಂಜಿಯರುಗಳನ್ನು ಸ್ಥಳೀಯವಾಗಿ ಪೂರೈಸಲಾಗದೆ ಹೊರದೇಶದಿಂದ ಬರಲು ಅನುವು ಮಾಡಿಕೊಟ್ಟಿದ್ದವು. ಹೀಗಾಗಿ ಈ ಕೆಲಸಗಳು ಗುತ್ತಿಗೆ ರೂಪದಲ್ಲಿ ಭಾರತಕ್ಕೆ ಬರುವುದು ಒಂದೆಡೆಯಾದರೆ; ಭಾರತದ ಎಂಜಿನಿಯರುಗಳು ವಿದೇಶದಲ್ಲಿನ ಕೆಲಸಗಳನ್ನು ಸ್ಥಳೀಯರಿಂದ ಕಬಳಿಸಲು ಆರಂಭಿಸಿದ್ದು ಇನ್ನೊಂದೆಡೆ. ಇದರಿಂದ ವಿದೇಶಿ ಸ್ಥಳೀಯರಿಗೆ ಬಂದ ಕೋಪ ಸಹಜವಾಗಿತ್ತು ಮತ್ತುಅದು ನಾನಾ ರೂಪದಲ್ಲಿ ಕಾಣತೊಡಗಿತ್ತು.

ಹೀಗೆ ಆರಂಭವಾದ ಮಾಹಿತಿ ತಂತ್ರಜ್ಞಾನದ ಜಾಗತೀಕರಣ ಆ ದಶಕದ ಮಧ್ಯದ ಸುಮಾರಿಗೆ ಕೆಲವು ಪ್ರತಿಷ್ಠಿತ ಕಂಪನಿಗಳನ್ನು ಹುಟ್ಟಿ ಹಾಕಿತ್ತು . ಅವು ಶೀಘ್ರವಾಗಿ ಬೆಳೆಯಲಾರಂಭಿಸಿದ್ದವು ಸಹ. ಜಗತ್ತಿನೆಲ್ಲೆಡೆ ಅದರಲ್ಲೂ ಅಮೇರಿಕಾದಲ್ಲಿ ವಿಶೇಷವಾಗಿ ಭಾರತದ ಮಾಹಿತಿ ತಂತ್ರಜ್ಞಾನದ ಹೆಜ್ಜೆ ಗುರುತುಗಳು ಕಾಣಲಾರಂಭಿಸಿತ್ತು. ಜೊತೆಗೆ ಅನೇಕ ಅಮೆರಿಕಾದ ಪ್ರತಿಷ್ಠಿತ ಕಂಪನಿಗಳು ಭಾರತದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ನಿಧಾನವಾಗಿ ನೆಲೆಯೂರಲು ಶುರು ಮಾಡಿದ್ದವು. ಅಮೆರಿಕಾದ ಸ್ಥಳೀಯ ಕಂಪನಿಗಳಿಗೆ ಎಂಜಿನೀಯರುಗಳ ಪೂರೈಕೆ ಒಂದು ಸಮಸ್ಯೆಯಾದರೆ ಭಾರತದಲ್ಲಿ ಕಡಿಮೆ ಬೆಲೆಗೆ ಸಿಗುತ್ತಿದ್ದ ಅತ್ಯುತ್ತಮ ಎಂಜಿನಿಯರುಗಳು ಒಂದು ವಿಶೇಷ ಆಕರ್ಷಣೆ.

ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಗೆ ಬಂಡವಾಳ ಕಡಿಮೆ. ಜ್ಞಾನ ಮತ್ತು ಅದನ್ನು ತಮ್ಮ ತಮ್ಮ ಕ್ಷೇತ್ರಗಳಿಗೆ ಅಳವಡಿಸುವ ಬುದ್ಧಿಯೇ ಅದರ ಬುನಾದಿ. ಹಾಗಾಗಿ ಅದು ಎಂಜಿನಿಯರುಗಳ ಪರಿಣಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ಇದು ಕಡಿಮೆ ಅಪಾಯದ ಬಂಡವಾಳ ಹೂಡಿಕೆ. (investment). ಸರಿಯಾಗಿ ನಡೆಯಲಿಲ್ಲವಾದರೆ ಸುಲಭವಾಗಿ ಸಂಸ್ಥೆಯನ್ನು ಮುಚ್ಚಿ ಹೊರನಡೆಯಲೂ ಬಹುದು.

ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ HAL(Hindustan Aeronautics Ltd.,) HMT (Hindustan Machine Tools), BEL(Bharat Electronics Ltd.,), BHEL(Bharat Heavy Electricals Ltd.,), BMEL(Bharat Earth Movers Ltd.,), ITI(Indian Telephone Industries) ಮುಂತಾದ ಸಾರ್ವಜನಿಕ ಉದ್ಯಮಗಳು ಸಮರ್ಥ ಅನುಭವಿ ಎಂಜಿನಿಯರುಗಳನ್ನು ಅನೇಕ ವರ್ಷಗಳಿಂದ ಅಭಿವೃದ್ಧಿ ಪಡಿಸುತ್ತಾ ಬಂದಿರುವುದು ಬಹುರಾಷ್ಟ್ರೀಯ ಕಂಪನಿಗಳಿಗೆ. ಭಾರತದಲ್ಲಿ ನೆಲೆಯೂರಲು ವರದಾನವಾಯಿತು. ISRO(Indian Space Research Organization), NAL(National Aeronautical Laboratory), Defense Laboratories ಸಂಶೋಧನೆ ಮತ್ತು ಅಭಿವೃದ್ಧಿ ಘಟಕಗಳು ತಂತ್ರಜ್ಞಾನದ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳ ಶಾಖೆಗಳನ್ನು ಬೆಂಗಳೂರಿನಲ್ಲಿ ತೆರೆಯಲು ಪರೋಕ್ಷವಾಗಿ ನೆರವು ನೀಡಿದವು.

ಈ ಬಹುರಾಷ್ಟ್ರೀಯ (Multi National Company) ಕಂಪನಿಗಳು

ನೀಡುವ ಐದರಿಂದ ಹತ್ತು ಪಟ್ಟು ಹೆಚ್ಚು ಆಕರ್ಷಕ ಸಂಬಳ ಮತ್ತು ಇತರ ಭತ್ಯೆಗಳ ಸೆಳೆತಕ್ಕೆ ಒಳಗಾಗಿ ಸಾರ್ವಜನಿಕ ಉದ್ಯಮಗಳಲ್ಲಿದ್ದ ನಮ್ಮ ಸಮರ್ಥ ಎಂಜಿನಿಯರುಗಳು ಅವುಗಳನ್ನು ತೊರೆದು ಬಹುರಾಷ್ಟ್ರೀಯ ಕಂಪನಿಗಳಿಗೆ ಸೇರಿದರು. ಇದು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಇಲ್ಲಿ ಬೇರು ಬಿಡುವುದರ ಜೊತೆಗೆ ವೇಗವಾಗಿ ಬೆಳೆಯಲು ಅನುವು ಮಾಡಿಕೊಟ್ಟಿತು .

ಹೀಗೆ ಆರಂಭವಾದ ಮಾಹಿತಿ ತಂತ್ರಜ್ಞಾನದ ಚಟುವಟಿಕೆಗಳ ಕಾರಣದಿಂದಾಗಿ ಮುಂದಿನ ಹತ್ತು ಹದಿನೈದು ವರ್ಷಗಳಲ್ಲಿ ಭಾರತವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ಥಾನ ಗಳಿಸಿಕೊಂಡಿತು. ಭಾರತದ ಎಂಜಿನಿಯರುಗಳು ಕೈ ಇಡದ ಯಾವುದೇ ವಸ್ತು ತಂತ್ರಜ್ಞಾನ ಪ್ರಪಂಚದಲ್ಲಿ ಇಲ್ಲ ಅಥವಾ ಭಾರತೀಯ ಎಂಜಿನಿಯರುಗಳು ಕೆಲಸ ನಿಲ್ಲಿಸಿದರೆ ಪ್ರಪಂಚದ ಎಲ್ಲ ತಂತ್ರಜ್ಞಾನ ವಸ್ತುಗಳು ಒಂದಲ್ಲ ಒಂದು ತೊಂದರೆ ಎದುರಿಸಬೇಕಾಗುತ್ತದೆ ಎನ್ನುವಷ್ಟರ ಮಟ್ಟಿಗೆ ಭಾರತದ ಖ್ಯಾತಿ ಬೆಳೆಯಿತು. ಅದರಲ್ಲೂ ಅಮೆರಿಕಾದ ಕಂಪನಿಗಳು ಭಾರತದ ಮಾಹಿತಿ ತಂತ್ರಜ್ಞಾನದ ಎಂಜಿನಿಯರುಗಳ ಮೇಲೆ ತುಂಬಾ ಅವಲಂಬಿತವಾಗಿದ್ದವು.

ಆ ಸಮಯಕ್ಕೆ ಸರಿ ಸುಮಾರು ಶೇ. 65 ರಷ್ಟು ಭಾರತದ ತಂತ್ರಜ್ಞಾನ ರಫ್ತು ಅಮೇರಿಕಾ ಸಂಯುಕ್ತ ದೇಶಗಳಿಗೆ ಹೋಗುತಿತ್ತು. ಅದರಲ್ಲಿ ಸುಮಾರು ಶೇ .35 ರಷ್ಟು ಬೆಂಗಳೂರಿನಿಂದ ರಫ್ತಾಗುತ್ತಿತ್ತು. ಹೀಗಾಗಿ ಭಾರತ/ಬೆಂಗಳೂರಿಗೆ 'Silicon Valley of Asia' ಎಂಬ ಹೆಸರು ಬಂದಿತ್ತು. ಇಷ್ಟೊಂದು ಮಟ್ಟದ ರಫ್ತು ಅಮೇರಿಕಾ ಸಂಯುಕ್ತ ದೇಶಗಳಿಗೆ ಆಗಲು ಇಂಗ್ಲಿಷ್ ಭಾಷೆಯ ಅರಿವು ಕೂಡ ದೊಡ್ಡ ಮಟ್ಟದಲ್ಲಿ ಸಹಾಯ ಮಾಡಿತ್ತು. ಸಂವಹನವನ್ನು ಸುಲಭ ಮಾಡಿತ್ತು.

"Success breeds success" ಎಂಬಂತೆ ಈ ಯಶಸ್ಸನ್ನು ನೋಡಿದ ಬೇರೆ ದೇಶಗಳು ವಿಶೇಷವಾಗಿ ಭಾಷೆಯ ತೊಡಕಿನ ಯುರೋಪ್ ದೇಶಗಳು ಜರ್ಮನಿ, ಫ್ರಾನ್ಸ್, ಇಟಲಿ, ಸ್ವೀಡನ್, ಸ್ವಿಟ್ಜರ್ಲ್ಯಾಂಡ್ ಮತ್ತು ಏಷ್ಯಾ ದೇಶಗಳಾದ ದಕ್ಷಿಣ ಕೊರಿಯಾ, ಜಪಾನ್, ಚೀನಾ ಗಳು ಭಾರತದತ್ತ ಹಾಗೂ ಭಾರತೀಯ ತಂತ್ರಜ್ಞಾನ ಕಂಪನಿಗಳು ಆ ದೇಶಗಳತ್ತ ನೋಡತೊಡಗಿದವು. ಇದರ ಫಲವಾಗಿ ವಿಭಿನ್ನ ಕೈಗಾರಿಕೆಗಳು ಸಾಫ್ಟ್ ವೇರ್ ಅಭಿವೃದ್ಧಿಗೆ ಭಾರತಕ್ಕೆ ಬರತೊಡಗಿದವು. ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ರಫ್ತಾಗುತಿದ್ದ ಬಹುಪಾಲು ತಂತ್ರಜ್ಞಾನ ಬ್ಯಾಂಕಿಂಗ್, ವಿಮೆ, ಹಣಕಾಸು ವಲಯಕ್ಕೆ ಸಂಬಂಧಿಸಿದ್ದವು. ಈಗ Automotive Technology (ವಾಹನ ತಂತ್ರಜ್ಞಾನ), Aerospace & Defense Technology (ವಿಮಾನ ತಂತ್ರಜ್ಞಾನ), Medical Technology(ವೈದ್ಯಕೀಯ ತಂತ್ರಜ್ಞಾನ), Semiconductor Technology Company ಗಳು ಭಾರತಕ್ಕೆ ಬರುವುದು ಮತ್ತು ಬೆಳೆಯುವುದು ಶುರುವಾಯಿತು.

ಹೀಗೆ ಭಾರತಕ್ಕೆ ಬಂದ ಅನೇಕ Automotive company ಗಳಲ್ಲಿ ಒಂದು ನಾನು ಕೆಲಸ ಮಾಡುತಿದ್ದ ಕಂಪನಿಯೂ ಆಗಿತ್ತು. ಇದು ಜಗತ್ತಿನಾದ್ಯಂತ ಸುಮಾರು ರೂ. 350,000 ಕೋಟಿಯಷ್ಟು ವಹಿವಾಟಿರುವ ಬೃಹತ್ ಕಂಪನಿ. ನಾನು ಆ ಕಂಪನಿಯ India R&D Engineering/India Technology Center (ಭಾರತದ ಸಂಶೋಧನೆ ಮತ್ತು ಅಭಿವೃದ್ಧಿ) ಅಂಗಸಂಸ್ಥೆಯ ಮುಖ್ಯಸ್ಥನಾಗಿದ್ದೆ.

ಆಗ ಭಾರತದಲ್ಲಿ ಕಾರುಗಳನ್ನು ಹೊಂದಿದ್ದವರ ಸಂಖ್ಯೆ ತುಂಬ ಕಡಿಮೆ ಇತ್ತು ಮತ್ತು ಅದಿನ್ನೂ ಪ್ರತಿಷ್ಠಿತ ವರ್ಗದವರಿಗೆ ಮಾತ್ರ ಎನ್ನುವಂತಿತ್ತು. ಜರ್ಮನಿಯಲ್ಲಿ ಹುಟ್ಟಿದ ಎಲ್ಲರೂ ಮೊದಲು ಇಂಜಿನಿಯರ್ ಆಮೇಲೆ ಅವರ ವೃತ್ತಿ ಲೆಕ್ಕ ಪರಿಶೋಧಕ, ಉಪನ್ಯಾಸಕ, ವೈದ್ಯ... ಎಂಬ ಮಾತಿದೆ. ಭಾರತ ಅದಕ್ಕೆ ತದ್ವಿರುದ್ಧ. ಕಾರುಗಳ ಬಗ್ಗೆ ಗೊತ್ತಿಲ್ಲದ ನಾವು ಕಾರು ನಡೆಸಲು, ನಿಯಂತ್ರಿಸಲು ಬೇಕಾದ ಕಾರಿನ ಒಳಗೆ ಇರುವ ಸಾಫ್ಟ್ ವೇರನ್ನು ಅಭಿವೃದ್ಧಿಪಡಿಸುವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು. ಇದರಲ್ಲಿ ಏನಾದರೂ ಹೆಚ್ಚು ಕಮ್ಮಿಯಾದರೆ, ತಪ್ಪಿದ್ದರೆ ಅದು ಕಾರು ನಡೆಸುವವರ ಜೀವಕ್ಕೆ ಅಪಾಯ ತರುವುದರ ಜೊತೆಗೆ ಕಾರು ಕಂಪನಿಗಳು ದೊಡ್ಡ ಮೊತ್ತದ ದಂಡ ಕಟ್ಟಬೇಕಾಗುತಿತ್ತು.

ನಮ್ಮ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಿಗೆ ಭಾರತೀಯ ಎಂಜಿನಿಯರುಗಳ ಜೊತೆ ಕೆಲಸ ಮಾಡುವುದು ಇದೆ ಕಾರಣಕ್ಕೆ ಸಹಜವಾಗಿಯೇ ಆತಂಕ ಉಂಟು ಮಾಡಿತ್ತು. ಆದರೆ ಬದಲಾಗುತ್ತಿರುವ ತಂತ್ರಜ್ಞಾನದಲ್ಲಿ ಮತ್ತು ಪೈಪೋಟಿಯಲ್ಲಿ ಆಯ್ಕೆಗಳು ಕಮ್ಮಿ ಇದ್ದು ಅನಿವಾರ್ಯವೂ ಆಗಿತ್ತು. ಆದರೂ ಇದು ಅಲ್ಲಿನ ಮೇನೇಜರುಗಳಿಗೆ ಮತ್ತು ಎಂಜಿನಿಯರುಗಳಿಗೆ ಬೇಡದ ನುಂಗುವ ತುತ್ತಾಗಿತ್ತು. ಅದನ್ನು ಅರಗಿಸಿಕೊಳ್ಳಲಾಗದೆ ಹಲವು ರೀತಿಯಲ್ಲಿ ಅಸಹನೆಗಳು ವ್ಯಕ್ತವಾಗುತ್ತಿದ್ದವು. ಪ್ರತೀ ಮೀಟಿಂಗ್ ಗಳಲ್ಲಿ, ಸಂವಹನದಲ್ಲಿ, ತಪ್ಪುಗಳನ್ನು ಸಹಜಕ್ಕಿಂತ ದೊಡ್ಡದಾಗಿ ಎತ್ತಿ ತೋರಿಸುತ್ತಿದ್ದರು .

ಇಂತಹ ಪರಿಸ್ಥಿತಿಯಲ್ಲಿ ಜಗತ್ತಿನ ಎಲ್ಲ ಹಿರಿಯ ನಾಯಕರುಗಳ (leaders) ಕಾರ್ಯಾಗಾರವನ್ನು CEO(Chief Executive Officer) Corporate Headquarters ನಲ್ಲಿ ಆಯೋಜಿಸಿದ್ದರು. ಇದು ಕಂಪನಿಯ ಮುಂದಿನ ಬೆಳವಣಿಗೆಗೆ ಯಾವ ರೀತಿ ತಂತ್ರಗಳನ್ನು ರೂಪಿಸಬೇಕು ಎನ್ನುವ ವಿಷಯಕ್ಕೆ ಸಂಬಂಧಿಸಿತ್ತು. ಅಲ್ಲಿ ಮಾನವ ಸಂಪನ್ಮೂಲ (Human Resource Development), ವಾಣಿಜ್ಯ (commercials), ಹಣಕಾಸು (Finance), ವ್ಯಾಪಾರ (Business), Engineering, ಸಂಶೋಧನೆ (innovation) ಗೆ ಸಂಬಂಧಪಟ್ಟ ಎಲ್ಲ ಹಿರಿಯ ಅಧಿಕಾರಿಗಳೂ, ನಾಯಕರುಗಳೂ ಇದ್ದರು.

ಈ ಕಾರ್ಯಾಗಾರವನ್ನು ಉದ್ಘಾಟಿಸಿ ಅವರ ಅಭಿಪ್ರಾಯವನ್ನು CEO ಹೇಳುವುದರೊಂದಿಗೆ ಚರ್ಚೆ ಪ್ರಾರಂಭವಾಗುವುದಿತ್ತು. CEO ಕಂಪನಿಯ ಪ್ರತಿ ವಿಭಾಗದ, ಪ್ರತಿ ದೇಶದ, ಪ್ರತಿ ಉತ್ಪನ್ನದ ಬಗ್ಗೆ ಮಾತಾಡಿ ಆಗುತ್ತಿರುವ ಬದಲಾವಣೆ ಮತ್ತು ಅದರ ವೇಗ ತಂದೊಡ್ಡುತ್ತಿರುವ ಸವಾಲುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಮಹಾತ್ಮ ಗಾಂಧೀಜಿಯವರ ಈ ಮಾತನ್ನು ಆ ಸಮಯದ ತುರ್ತಾಗಿ ಉಲ್ಲೇಖಿಸಿದರು. ಅದು "Be the change that you want to see in the world" (ಜಗತ್ತಿನಲ್ಲಿ ಏನು ಬದಲಾವಣೆ ಆಗಬೇಕೆಂದು ನೀನು ಬಯಸುತ್ತೀಯೋ ಮೊದಲು ಅದು ನೀನಾಗು ..)

ಇದು ಅಲ್ಲಿನವರೆಗಿನ ಸನ್ನಿವೇಶಗಳಿಂದ ಬಂದಿದ್ದ ಕೀಳರಿಮೆಯ ಫಲವಾಗಿ ಎಲ್ಲೋ ಒಂದು ಮೂಲೆಯಲ್ಲಿ ಕುಳಿತಿದ್ದ ನನ್ನನ್ನು ಬಡಿದೆಬ್ಬಿಸಿತ್ತು. ಇದ್ದಕ್ಕಿದ್ದಂತೆ ನಾನು ಮುಂಚೂಣಿಯಲ್ಲಿರುವ "Front Seat"

ಭಾವನೆ ನನ್ನಲ್ಲಿ ಉಂಟಾಯಿತು. ಎಲ್ಲ ಹಿರಿಯ ಅಧಿಕಾರಿಗಳು ನನ್ನೆಡೆ ನೋಡುತ್ತಿರುವ ಅನುಭವ. ಅಇಔ ರ ಮಹಾತ್ಮಗಾಂಧಿಜೀಯವರ ಉಲ್ಲೇಖದಲ್ಲಿ ನಾನು ಭಾರತವನ್ನು ಕಂಡೆ, ಆ ಭಾರತದಲ್ಲಿ ನನ್ನನ್ನು ಕಂಡೆ, ಅದರಿಂದ ನನ್ನಲ್ಲಿ ಆತ್ಮವಿಶ್ವಾಸವನ್ನು ಕಂಡುಕೊಂಡೆ.

ಹೀಗೆ ಪ್ರಭಾವಿತನಾದ ನಾನು ನನ್ನ ಅಭಿಪ್ರಾಯಗಳನ್ನು ಮಂಡಿಸುವಾಗ ಆ ವಿಷಯ ಮಂಡನೆಯಲ್ಲಿ ನಾನೇ ಅಧಿಕೃತ ವ್ಯಕ್ತಿಯಾಗಿದ್ದೇನೆ ಎಂದು ನನಗೆ ಅನಿಸತೊಡಗಿತು. ನನ್ನನ್ನೇ ಕಂಡು ಕೊಟ್ಟ ಆ ಕಾರ್ಯಾಗಾರ ನನ್ನ ಮಟ್ಟಿಗೆ ಯಶಸ್ವಿ ಕಾರ್ಯಾಗಾರವಾಯಿತು. ಇದು ಹಿರಿಯ ಅಧಿಕಾರಿಗಳಲ್ಲಿ ಭಾರತದ ನಾಯಕರುಗಳ ಬಗ್ಗೆ ಇದ್ದ ವಿಶ್ವಾಸಕ್ಕೆ, ನಮ್ಮ ಆತ್ಮವಿಶ್ವಾಸವನ್ನು ಜೊತೆಗೂಡಿಸಿತು. ಅದರ ಫಲವಾಗಿ ಮುಂದಿನ ಎರಡು ವರ್ಷಗಳಲ್ಲಿ ಭಾರತದ ಸಂಶೋಧನೆ ಮತ್ತು ಅಭಿವೃದ್ಧಿ (India Engineering R&D Center) ಕೇಂದ್ರ ಜಗತ್ತಿನ ಅತೀ ದೊಡ್ಡ ಕೇಂದ್ರವಾಗಿ ಬೆಳೆಯಿತು. ಸುಮಾರು ತಂತ್ರಜ್ಞಾನಗಳಿಗೆ ನಮ್ಮ ಸ್ಥಳೀಯ ಕೇಂದ್ರವೇ ನಾಯಕತ್ವ ವಹಿಸಿಕೊಂಡಿತು. ಎಷ್ಟೋ ಉದಯೋನ್ಮುಖ ತಂತ್ರಜ್ಞಾನಗಳಿಗೆ (emerging technologies) ಉತ್ಕೃಷ್ಟ ಕೇಂದ್ರ (Center of Excellence) ತೆರೆದು ಅನೇಕ ಜಾಗತಿಕ 'ಹಕ್ಕುಸ್ವಾಮ್ಯ'ಗಳನ್ನು (patents) ಭಾರತೀಯ ಕೇಂದ್ರದಿಂದ ನೋಂದಣಿ ಮಾಡಲು ಸಹಾಯವಾಯಿತು. ಇಂದು ಈ ಸಂಸ್ಥೆ ಸುಮಾರು 6000 ಎಂಜಿನಿಯರುಗಳು ಕೆಲಸ ಮಾಡುತ್ತಿರುವ ಸಂಸ್ಥೆಯಾಗಿ ಬೆಳೆದಿದೆ. ಜಗತ್ತಿನಲ್ಲಿ ಯಾವುದೇ ಕಾರು ಚಲಿಸುತ್ತಿದ್ದರೆ ಅದರಲ್ಲಿ ಇಲ್ಲಿನ ಎಂಜಿನಿಯರುಗಳು ಅಭಿವೃದ್ಧಿ ಮಾಡಿದ ಒಂದು ತುಣುಕಾದರೂ ಇದ್ದೆ ಇರುವ ಎತ್ತರಕ್ಕೆ ಬೆಳೆದಿದೆ. ಇಂದು ಜನರು ಮಾಲಿನ್ಯರಹಿತ, ಸುರಕ್ಷಿತ, ಅನುಕೂಲಗಳುಳ್ಳ ವಾಹನಗಳಲ್ಲಿ ಚಲಿಸುತ್ತಿದ್ದರೆ ಅದರ ಹಿಂದೆ ಇಲ್ಲಿನ engineers ಜ್ಞಾನ ಹಾಗೂ ಕೈ ಚಳಕ ಇದೆ.

ಜೊತೆಗೆ ಕಾರ್ಪೊರೇಟ್ ಕಂಪನಿ ಕೂಡ ಜಗತ್ತಿನಾದ್ಯಂತ ಬದಲಾವಣೆಗೆ ತನ್ನನ್ನು ಅಳವಡಿಸಿಕೊಂಡು ವೇಗವಾಗಿ ಬೆಳೆಯುತ್ತಿದೆ. ಹೀಗೆ ಒಂದು ಜಗದ್ವಿಖ್ಯಾತ ಕಂಪನಿಯನ್ನು, ನಾಯಕರುಗಳನ್ನು, ನನ್ನಂಥ ವ್ಯಕ್ತಿಗಳನ್ನು ಒಂದು ಮಹಾತ್ಮಗಾಂಧಿಯವರ ಮಾತಿನ ಉಲ್ಲೇಖ ಪ್ರೇರೇಪಿಸಬಲ್ಲ ಶಕ್ತಿಯಿದ್ದರೆ ಸ್ವಾತಂತ್ರದ ಸಂಗ್ರಾಮದಲ್ಲಿ ಇಡೀ ದೇಶವೇ ಅವರನ್ನು ಹಿಂಬಾಲಿಸಿದ್ದರಲ್ಲಿ ಮತ್ತು ಜಗತ್ತಿನಾದ್ಯಂತ ಅವರನ್ನು ಅನುಸರಿಸುವವರು, ಪ್ರಭಾವಿತರಾಗಿರುವವರು ತುಂಬಿರುವುದರಲ್ಲಿ ನನಗೆ ಯಾವುದೇ ಅಚ್ಚರಿಯಿಲ್ಲ.

–ಗೂಳೂರು ಎನ್ ರಾಘವೇಂದ್ರ,
ಮಾಜಿ ಜಾಗತಿಕ ವ್ಯವಹಾರ ಮುಖ್ಯಸ್ಥರು
ಟೆಕ್ ಮಹಿಂದ್ರ , ಬಹುರಾಷ್ಟ್ರೀಯ ಕಂಪನಿ.

ಮಕ್ಕಳಿಗಾಗಿ ಗಾಂಧಿ ಕತೆ



ಗಾಂಧಿ ಕ್ಲಾಸ್

ಮೂರನೇ ದರ್ಜೆಯ ಪ್ರಯಾಣ ಅಥವಾ ಪ್ರವೇಶ ಇವುಗಳಿಗೆಲ್ಲ ಗಾಂಧಿಕ್ಲಾಸ್ ಎಂದು ಕರೆಯುವುದನ್ನು ನೀವು ಕೇಳಿರಬಹುದು. ಅದಕ್ಕೆ ಕಾರಣವೆಂದರೆ ಗಾಂಧೀಜಿಯವರು ಯಾವಾಗಲೂ ಜನಸಾಮಾನ್ಯರು ಉಪಯೋಗಿಸುವ ಇಂತಹ ದರ್ಜೆಯನ್ನೇ ಇಷ್ಟಪಡುತ್ತಿದ್ದರು.


ಒಮ್ಮೆ ಹೀಗಾಯಿತು, ಅವರಿಗೆ ತುರ್ತಾಗಿ ಬಾಂಬೆಯಿಂದ ಮದ್ರಾಸ್ ಗೆ ಹೋಗಬೇಕಿತ್ತು. ರೇಲ್ವೆ ಸ್ಟೇಷನ್ ಗೆ ಹೋದ ಗಾಂಧೀಜಿಯವರು ಟಿಕೇಟಿಗಾಗಿವಿಚಾರಿಸಿದರೆ ಮೂರನೇ ದರ್ಜೆಯ ಟಿಕೇಟನ್ನು ರೈಲು ಇನ್ನೇನು ಬರುವುದೆನ್ನುವಾಗ ಕೊಡುತ್ತೇವೆ ಎಂದರು. ರೈಲು ಬರುವ ವೇಳೆಗೆ ಟಿಕೇಟಿಗಾಗಿ ತೀವ್ರ ನೂಕುನುಗ್ಗಲು ಉಂಟಾಯಿತು. ಹೇಗೋ ಟಿಕೇಟು ಖರೀದಿಸಿ ರೈಲನ್ನು ಹತ್ತಿದರೆ ಎಲ್ಲಿಯೂ ಕುಳಿತುಕೊಳ್ಳಲು ಸ್ಥಳವಿರಲಿಲ್ಲ. ರೈಲು ಅಧಿಕಾರಿಗಳನ್ನು ವಿಚಾರಿಸಿದರೆ ಸ್ಥಳವಿದ್ದಲ್ಲಿ ನಿಲ್ಲುವಂತೆ ಹೇಳಿದರು. ಗಾಂಧೀಜಿಯವರೊಂದಿಗೆ ಅವರ ಮಡದಿ ಕಸ್ತೂರ್ ಬಾ ಕೂಡ ಇದ್ದರು. ನೂಕುನುಗ್ಗಲಿನಿಂದ ಬೇಸತ್ತ ಗಾಂಧೀಜಿ ಎರಡನೇ ದರ್ಜೆಯ ಭೋಗಿಗೆ ಹೋಗಿ ಕುಳಿತರು. ಟಿಕೇಟು ಅಧಿಕಾರಿ ಅವರಿಗೆ ಹೆಚ್ಚುವರಿ ಹಣ ಪಾವತಿಸಲು ಹೇಳಿದಾಗ ನಿರಾಕರಿಸಿದರು. ಅವರು ಗಾಂಧೀಜಿಯವರನ್ನು ರೈಲಿನಿಂದ ಇಳಿಸಲು ನೋಡಿದಾಗ ನಿರ್ವಾಹವಿಲ್ಲದೇ ಹಣ ಪಾವತಿಸಿದರು. ಆದರೆ ಪುಣೆ ತಲುಪಿದ ನಂತರ ತಮ್ಮ ಹೆಚ್ಚುವರಿ ಹಣವನ್ನು ಪಾವತಿಸುವಂತೆ ಇಲಾಖೆಗೆ ಅರ್ಜಿಯನ್ನು ಬರೆದರು. ಮೂರನೇ ದರ್ಜೆಯ ಪ್ರಯಾಣಿಕರಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ಮಾಡಿಕೊಡದಿರುವುದರ ಬಗ್ಗೆ, ಶೌಚಾಲಯಗಳಿಗೆ ಪ್ರವೇಶ ನೀಡದಿರುವ ಬಗ್ಗೆ ತಮ್ಮ ಪ್ರತಿರೋಧಗಳನ್ನು ದಾಖಲಿಸಿದರು. ಅವರ ಆರೋಗ್ಯ ಸ್ಥಿತಿ ಉಲ್ಬಣಿಸುವವರೆಗೂ ಅವರು ಮೂರನೇ ದರ್ಜೆಯಲ್ಲಿಯೇ ಪ್ರಯಾಣಿಸುತ್ತಿದ್ದರು. ಅಲ್ಲಿಯ ಮೂಲಭೂತ ಸೌಕರ್ಯಗಳ ಸುಧಾರಣೆಗೆ ಒತ್ತಾಯಿಸುತ್ತಿದ್ದರು. ಹಾಗಾಗಿ ಮೂರನೇ ದರ್ಜೆಯನ್ನು ಗಾಂಧಿಕ್ಲಾಸ್ ಎಂದು ಕರೆಯುತ್ತಾರೆ.


ಮಹಾತ್ಮನಾಗುವುದೆಂದರೆ ಸಾಮಾನ್ಯರಂತೆ ಬದುಕುವುದು ಎಂಬುದಕ್ಕೆ ಗಾಂಧೀಜಿಯವರು ಮಾದರಿಯಾಗಿದ್ದಾರೆ.

ಸಂಗ್ರಹ : ಸುಧಾ ಅಡುಕುಳ

ದಿವಂಗತ ಡಿ ಎಸ್ ನಾಗಭೂಷಣ ಅವರು ರಚಿಸಿರುವ **'ಗಾಂಧಿ ಕಥನ'** ಕೃತಿ ಕಳೆದ ಮೂರು ವರ್ಷಗಳಲ್ಲಿ 25 ಮುದ್ರಣಗಳನ್ನು ಕಂಡು 25,000 ಪುಸ್ತಕಗಳು ಮಾರಾಟವಾಗಿ ದಾಖಲೆ ಮಾಡಿದೆ. ಜನರು ಗಾಂಧೀಜಿಯನ್ನು ಈಗಲೂ ಇಷ್ಟಪಡುತ್ತಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಿಲ್ಲ.

ಈ ಕೃತಿಯನ್ನು ಓದಿ ಪ್ರೇರೇಪಿತರಾದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಜನಪರ ಮಹಿಳಾ ಹೋರಾಟಗಾರ್ತಿ ವಾಣಿ ಪೆರಿಯೋಡಿ ಅವರು ಈ ಕೃತಿಯನ್ನು ತಮ್ಮ ಹಾಗೂ ನೆರೆಹೊರೆಯ ಮನೆಯ ಮಕ್ಕಳಿಗೆ ಆಡುಮಾತಿನ ಮೂಲಕ ತಲುಪಿಸುವ ಪ್ರಯತ್ನ ಮಾಡಿದ್ದರು. ಇಡೀ ಜಗತ್ತು ಕೊರೋನಾ ಪೀಡಿತವಾಗಿ ಗೃಹ ಬಂಧನಕ್ಕೆ ಒಳಗಾಗಿ ಮನೆಯೊಳಗೇ ಕುಳಿತಿದ್ದಾಗ 2019 –20 ರಲ್ಲಿ ಈ ಪ್ರಯತ್ನ ಮಾಡಿದ್ದರು.ಐವತ್ತೆಂಟು ಭಾಗಗಳಲ್ಲಿ ಇದ್ದ ಈ **'ಗಾಂಧಿ ಕಥನ ಕೇಳು ಮಾಲಿಕೆ'** ಯನ್ನು **'ನಗುವನ ಕ್ರಿಯೇಷನ್ಸ್' 'ಯೂ ಟ್ಯೂಬ್'** ಚಾನಲ್ ನಲ್ಲಿ ಪ್ರತಿ ಶನಿವಾರ ಪೋಸ್ಟ್ ಮಾಡುತ್ತಿದೆ. ಇದನ್ನು ನೀವು ಯೂ ಟ್ಯೂಬ್ ಸಂಪರ್ಕದಲ್ಲಿ ವೀಕ್ಷಿಸಬಹುದು.





Mahatma Gandhiji's autobiography 'Nanna Satyanveshane'

ALL INDIA RADIO BENGALURU

ಮಹಾತ್ಮ ಗಾಂಧೀಜಿಯವರ ಆತ್ಮಕಥೆ : "The story of my experiments with truth" ಇದು ಜಗತ್ತಿನ ವಿಶ್ವನಾಯಕರ ಶ್ರೇಣಿಯಲ್ಲಿಯೇ ಜಗದ್ವಿಖ್ಯಾತವಾದ ಜೀವನ ಕಥನ ಕೃತಿ . ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಲ್ಲಿ ಇದು ಪ್ರಕಟವಾಗಿದೆ. ಭಾರತದ ಎಲ್ಲ ಭಾಷೆಗಳಲ್ಲಿಯೂ ಇದು ಸಮರ್ಥವಾಗಿ ಅನುವಾದಗೊಂಡಿದೆ. ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಗಾಂಧೀಜಿಯವರ ಮೂಲಜೀವನ ಕಥನ ಕೃತಿಯನ್ನು **"ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ"** ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಮಹಾತ್ಮ ಗಾಂಧೀಜಿಯವರ ಈ ಆತ್ಮಕಥೆಯನ್ನು ಆಧರಿಸಿ ಬೆಂಗಳೂರು ಆಕಾಶವಾಣಿ ಕೇಂದ್ರದ ಮೂಲಕ ತಲಾ ಐದು ನಿಮಿಷಗಳ 92 ಕಂತುಗಳ ಧ್ವನಿ ಸರಣಿ ಮಾಲಿಕೆಯನ್ನು ಪ್ರಸಾರ ಮಾಡಿಸಿದೆ. ಖ್ಯಾತ ವಾಗ್ಮಿ ಹಾಗೂ ಚಿಂತಕ ಡಾ . ಗುರುರಾಜ್ ಕರ್ಜಗಿಯವರು ಈ ಸರಣಿ ಮಾಲಿಕೆಯನ್ನು ಪ್ರಸ್ತುತ ಪಡಿಸಿದ್ದಾರೆ. ಇದನ್ನು ಈ ಕೆಳಗಿನ ಯೂ ಟ್ಯೂಬ್ ಸರಣಿಯಲ್ಲಿ ಕೇಳಬಹುದು



INFLUENCE OF **MAHATMA GANDHI IN MULTI NATIONAL COMPANIES**

It was the decade of 90's. The policies of open economy to drive globalisation was just announced by the Government of India. These liberal policies laid the foundations and began the IT Story of India. Soon, one could see the mushrooming of many Indian IT companies and subsidiaries of global multinationals. They were the seeds that were being sown for the $250 billion Indian IT industry today. But, it was being built at the cost of some of the technologically leading and performing Government of India Public Sector Units(PSUs). The PSUs until the onset of the IT companies, were the crown jewels and the foundations of the Indian industry started by the then visionary prime minister Pandit Jawaharalal Nehru as "Temples of Modern India".

The IT companies were off to a quick start by offering services to global companies and the Multi National Companies(MNCs) started moving work to their subsidiaries in India. And to support them, many other countries modified their policies to engage the Indian engineers to work overseas, unable to fulfil the demand for IT engineers locally. This led to the migration of IT jobs to India and Indian engineers to the other countries in large numbers. This created un-rest in global IT industry and met with opposition expressed in many forms including insulting Indian IT companies and engineers by the local engineers.

The primary reasons for the opposition were that once the work is outsourced to India, it won't come back and it's only the beginning. They were aware of the competency of Indian engineers which created insecurity among the local engineers. And Insult was for the frustration of not being able to retain the work in their own country.

The IT globalisation thus started had given birth to subsidiaries of

many fortune 500 companies in India and large Indian conglomerates offering IT services by the middle of the decade. The global MNCs started having larger and deeper presence. Together with Indian companies the IT outsourcing industry started growing very fast at an ~30-50% annually creating the foot prints of Indian IT engineers globally and especially in the USA. The growth was led by the demand for engineers and the lower cost of Indian engineers.

The Capital investment being low also attracted these MNCs to establish in India grow stronger and stay deep rooted. With knowledge and intelligence being the backbone of the IT development, the industry depends mainly on the skill of the engineers. The global companies can walk out easily at any time, if they find it not meeting their expectations as it's very low risk investment.

The IT industry that too technology companies started in India especially in Bangalore/Karnataka for many reasons. The main reason being the availability of readymade smart, skilled, knowledgeable, experienced engineers from the public sector and research establishment units. Bangalore was and is the home for many PSUs working on forefront technologies and research establishments working on cutting edge technologies. Establishments like HAL(Hindustan Aeronautical Ltd.,), HMT(Hindustan Machine Tools), BEL(Bharat Electronics Ltd.,), BHEL(Bharat Heavy electrical Ltd.,), ITI(Indian Telephone Industries) and ISR(Indian Space Research Organization), NAL(National Aeronautical Laboratories), Defence Laboratories were the source of engineers for many Aero, Auto, communication and electronics/semi-conductor design companies. It made many MNCs to set up their engineering research & development centers in India, apart from some of the large IT product and services companies.

The Indian engineers especially the smart engineers moved in large numbers to the multi-national companies attracted by the 5-10 times salaries and benefits that were being offered and the international exposure that they would get.

The activities of the IT companies started at the lower end of technology in the beginning to grow to earn a respectable and special position in the world IT industry. It grew to such a level that there could be no product in the IT/technology industry that doesn't have an Indian hand/brain in it. It started becoming so evident and critical that if the Indian engineers stop working even temporarily it would affect all the IT/technology products one way or the other. That too, the dependence of American companies on Indian engineers was quite impactful.

By then, close to about 65% of the Indian IT export was to USA and of which about 35% was from Bangalore/Karnataka. This earned India/Bangalore the tag "Silicon Valley of Asia". The English language that the Indian engineers are comfortable in communication made this volume of exports to USA possible. To add to it, the adoptability exhibited while working with people of different cultures was a huge advantage.

Like "Success breeds Success", seeing the success of the Indian IT companies with USA, the companies from the other continents started looking at India for IT support. Especially the countries that had language as a huge barrier. European countries like Germany, France, Italy, Sweeden, Switzerland and Asian countries like China, Japan, South Korea to name a few. In view of this, diverse industries started stepping into India for their software development need. Most of the software exported earlier to it was related to Banking, Financial Services, Insurance. With the European and Asian companies the portfolio expanded to other industries like automotive, aerospace & defense, medical technology, semi-conductor, industrial etc., Most of these companies started working with Indian IT companies and then started setting up their own subsidiaries as part of the risk abatement approach.

I was working with one such European Automotive company as the Managing Director and head of India Technology Center. This was globally a large company with the revenue of about Rs. 350,000 Crores.

During that time, In India, the number of people who owned a car were very less and was limited to elite group. It was still away from the reach of the common people even though it was changing. In Germany, there is a saying that "A German is an engineer first and then a professional in their filed like Arts, Science, Commerce, business, Accounts etc., This is because more than half of Germans own cars and all of the eligible Germans drive the car. Car was essential part of their life for transportation and a major part of the economy. Hence, their knowledge of car and car technologies was quite high. On the contrary, our knowledge on vehicles, especially cars was very less. We had no clue that critical parts of the cars were driven by electronics and software. And we started developing the software that controls the car. The biggest scare for all was that if there was any critical defect in the cars that can be fatal the

liabilities that the car companies had to pay was very high.

This was a big concern for the heads of engineering from the corporate R&D to work with Indian engineers. However, in the changing technological scenario, there were not many choices as well and hence it was inevitable. Despite it, the managers and engineers at the corporate R&D were not happy to work with Indian engineers and expressing their annoyance in many ways… in the meetings, in projecting the issues inappropriately, in not co-operating fully, in sharing information etc.,

In this technological and engineering context, the Chief Executive Officer(CEO) had organized a workshop of senior leaders across the globe at the Corporate office. The agenda of the workshop was to discuss on the growth, challenges, strategies, tactics and finalise the way forward. The leaders from all functions(R&D, Engineering, HR, Finance, business, purchase, production) were part of this high importance meeting.

The CEO kicked off the workshop and presented his views to open it for discussions. He spoke about revenues, profits, product, geography, and the challenges that the market is posing, the transformation in technology and the speed to transformation in brief. As he was to conclude his views, he said the only way that the company can continue to grow, and stand tall, be ahead of competition and with the customer, was to adopt to the changes quickly. And to do that, everyone in the company has to change and be the agents of change. We need to "Be the Change that we want to see in the World" and lead the change from the front and be the role models if we want to be ahead, quoting Mahatma Gandhi. He was referring the World here to the Company.

The vehicle technology knowledge gap that the Indian engineers had and the treatment that we were getting until then, had always put us on the back foot. That had made us feel inferior and to develop inferiority complex. Due to that, in that workshop, I was sitting in a remote corner. This quote of Mahatma Gandhi by the CEO, suddenly woke me up and made me think that I got a ticket to the front seat. I felt, at that moment, every senior leader in the conference room was looking at me. I experienced a sudden rush of blood in me as I saw India in that quote of Mahatma Gandhi and myself in that India and in me the confidence that was lacking until then.

Motivated by this incident that I represent Mahatma Gandhi's India, I was beaming with confidence and presented my view authentically the following day. It was a great success and appreciated by many. I felt, I found my real self in that workshop. it added my own confidence to the belief that the senior leaders had about India. It brough me to the lime light and made me aware of my responsibilities. As an outcome, in the next couple of years, the India Technology center grew the fastest and became the largest software center globally for the company. It took lead for many emerging technology applications globally by developing Centers of Excellence/Competencies. It started filing for patents for innovative ideas. We had begun transformation with speed. Today, there are over 6000 engineers working from this India center. If any vehicle is running on road in the world today, there is certainly a piece of software at the minimum developed by the engineers working from this center. It has grown to add value to the green, safe and comfortable driving through software and highly visible globally.

In addition, supporting this center and with business the Company has been growing globally adopting to the changes quickly. There are many leaders who are leading the change from the front to keep the company moving with this transformative speed. The CEO continues to inspire the leadership and has the habit of quoting Mahatma Gandhi appropriately in most of his presentations. Inspired this, I started presenting the bust of Mahatma Gandhi to all the visiting senior leaders reminding them of India through Gandhi contributing in a small way to spread his messages.

This incident gave me the insight on how Mahatma Gandhi's spirit lives even today and making the corporate, people and individuals to instill confidence to lead themselves and more so during tough times through his principles showing the world that Mahatma Gandhi is immortal through his messages. The Company has been in the business for over a century now and I feel that the strength of this company is in these principles like Mahatma Gandhi's principles. This is what is making the company having it flag flying high all these years.

The biggest realisation that I could finally get out of this experience was that one can have an extended life by following Mahatma Gandhi's principles.

G N Raghavendra
Senoir software Technocrat

ಚಿ|ತ್ರಾ|ವ|ಳಿ



ಅರಸೀಕೆರೆಯಲ್ಲಿ ಗಾಂಧಿ ವಿಚಾರ ವೇದಿಕೆ ಘಟಕ ಆರಂಭ




ಹಿರಿಯ ಸಾಫ್ಟ್‌ವೇರ್ ತಜ್ಞರಾದ ಜಿ ಎನ್ ರಾಘವೇಂದ್ರ ಅವರನ್ನು ಗಾಂಧಿ ಬಳಗಕ್ಕೆ ಬರಮಾಡಿಕೊಂಡ ಸಂದರ್ಭ ..



ಉತ್ತರ ಭಾರತದ ಹಿರಿಯ ಸರ್ವೋದಯ ಕಾರ್ಯಕರ್ತರ ಜೊತೆ..

ಪದಬಂಧ-03



ಅ.ನಾ.ಪ್ರಹ್ಲಾದರಾವ್

ಎಡದಿಂದ ಬಲಕ್ಕೆ

2. ಗಾಂಧೀಜಿಯವರ ರಾಜಕೀಯ ಗುರುಗಳಾದ ಗೋಖಲೆ ಸ್ಥಾಪಿಸಿದ ಸಮಾಜ ಸುಧಾರಣ ಸಂಸ್ಥೆ (8)
5. ಕರ್ನಾಟಕದ ಕಾಡುಗಳಲ್ಲಿರುವ ಗಜರಾಜ ತಿರುಗಿದ (2)
7. ಗಾಂಧೀಜಿ ವಿಚಾರಧಾರೆಗಳಲ್ಲಿದ್ದ ಧಾರಾಳ ಸ್ವಭಾವ (3)
10. ಗಾಂಧೀಜಿ ಆಫ್ರಿಕಾ ದೇಶಕ್ಕೆ ಹೋದಾಗ ಅವರಿಗೆ ಇನ್ನೂ ಯೌವ್ವನದ ವಯಸು (3)

11 ದಕ್ಷಿಣ ಆಫ್ರಿಕದಲ್ಲಿ 1893–1914ರ ನಡುವೆ ಗಾಂಧೀಜಿ ನಡೆಸಿದ ಹೋರಾಟದ ಬೇಡಿಕೆಯಾಗಿದ್ದ ವಿಷಯ (7)

13 ದೆಹಲಿ ರಸ್ತೆಗಳ ಮಾರ್ಗ (2)

15 ಉಕ ಎಂಬ ಬಾಲಕ ಗಾಂಧಿ ಅವರ ಬಾಲ್ಯದ ಸ್ನೇಹಿತ (2)

16 ಗಾಂಧೀಜಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದ ಸ್ಥಳ (4)

ಮೇಲಿಂದ ಕೆಳಕ್ಕೆ

1. ಗಾಂಧೀಜಿಯವರದು ಧೋತಿ ಹಾಗೂ ವಸ್ತ್ರದ ಸಾಮಾನ್ಯ ದಿರಿಸು (6)
2. ಗಾಂಧೀಜಿ ಕೊಲೆಯಾದ ಕ್ಷಣದಲ್ಲಿ ಭಾರತೀಯರಲ್ಲಿ ಉಂಟಾದ
3. ಗಾಂಧೀಜಿಯವರು ಕಾನೂನು ಅಧ್ಯಯನ ಮಾಡಲು ಆರಿಸಿಕೊಂಡ ದೇಶ (3)
4. ಅನಾರೋಗ್ಯದಿಂದ ಕಸ್ತೂರಬಾ ಪಟ್ಟ ನೋವು (3)
6. ಗಾಂಧೀಜಿ ಹಾಗೂ ಕಸ್ತೂರಬಾ ಗೃಹಬಂಧನಕ್ಕೆ ಒಳಗಾದ ಪುಣೆಯ ಅರಮನೆ (4)
8. ಗಾಂಧೀಜಿಯವರಿಗೆ ಮಹಾತ್ಮ ಬಿರುದನ್ನಿತ್ತು ಗೌರವ ಸೂಚಿಸಿದ ರಾಷ್ಟ್ರಕವಿ (5)

9, ಗಾಂಧೀಜಿಯವರಲ್ಲಿದ್ದ ಒಳ್ಳೆಯ ಸ್ವಭಾವ (2)


10. ಗಾಂಧೀಜಿ ತಮ್ಮ ಉಡುಪುಗಳನ್ನು ತಾವೇ ಮಾಡಿಕೊಳ್ಳುತ್ತಿದ್ದ ಸಿದ್ಧತೆ (4)
12. ಕಳವಳವಿಲ್ಲದೆ ನೀಡಬಹುದಾದ ಮಣಿ (3)
13. ಸೆರೆಮನೆಯಲ್ಲಿದ್ದ ಗಾಂಧೀಜಿ ನೆಹರು ವರಿಗೆ ಬರೆಯುತ್ತಿದ್ದ ಕಾಗದ (2)
14. ಸತ್ಯಾಗ್ರಹದಿಂದಲೇ ಹಕ್ಕೊತ್ತಾಯ ಮಾಡಿದ ಗಾಂಧೀಜಿ ವಿರೋಧಿಸುತ್ತಿದ್ದ ಬಂದೂಕು (3)

ಉತ್ತರ : ಪದಬಂಧ – 2

1 ಚಂ	ಪಾ	2 ರ	ಣ		3 ಜ	4 ನ	ವ	5 ರಿ
ಡೀ		ಭ		6 ನಿ		ರ್ಮ		ಯಾ
ಗ		7 ಸ	8 ಮಾ	ಜ	9 ವಾ	ದ		ಯ
10 ಡ	11 ದಂ		ತೆ		ದ		12 ಸ	ತಿ
	ಡೋ						ನ್ಯ	
13 ಸ	ರ		14 ಮೋ		15 ಬಾ		16 ತಿ	17 ವಿ
ತ್ಯಾ		18 ಅ	ಸ	19 ಹ	ಕಾ	20 ರ		ಭ
ಗ್ರ		ಗ್ರ		ತ್ಯೆ		ಹೀ		ಜ
21 ಹ	ರಿ	ಜ	ನ		22 ಸ	ಮ	ರ್ಥ	ನೆ

ಪದಬಂಧ–3 ರ ಉತ್ತರ ಮುಂದಿನ ಸಂಚಿಕೆಯಲ್ಲಿ.


ನಿಮ್ಮನ್ನು ಹುಡುಕುವ ಅತ್ಯುತ್ತಮ ಮಾರ್ಗವೆಂದರೆ ಇತರರ ಸೇವೆಯಲ್ಲಿ ನಿಮ್ಮನ್ನು ಕಳೆದುಕೊಳ್ಳುವುದು.



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2020-22

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 061
Printed at : CreativeGeekZ, Yadhava College Road, Madhavanagara Bengaluru - 560001 Ph : +91 80 40927049 E-mail : mail@creativegeekz.com